

॥ ಶ್ರೀ ಗುರು ಬಸವ ಲಿಂಗಾಯನಮಃ ॥

# ಲಿಂಗಾಯತ ದರ್ಶನ

ಮಾಸಿಕ

**ಸಂಪುಟ : ೬** **ಅಕ್ಟೋಬರ್ ೨೦೧೯** **ಸಂಚಿಕೆ : ೧೦**

ಮಾರ್ಗದರ್ಶನ

**ಪೂಜ್ಯಶ್ರೀ ಡಾ. ತೋಂಟದ ಸಿದ್ಧರಾಮ ಮಹಾಸ್ವಾಮಿಗಳು**

ರುದ್ರಾಕ್ಷಿಮಠ, ನಾಗನೂರು–ಬೆಳಗಾವಿ

ತೋಂಟದಾರ್ಯ ಸಂಸ್ಥಾನಮಠ, ಗದಗ–ಡಂಬಳ

**ಸಂಪಾದಕ**

**ಡಾ॥ ಎನ್. ಜಿ. ಮಹಾದೇವಪ್ಪ**

**ಸಹ ಸಂಪಾದಕ**

**ಡಾ॥ ರಾಮಕೃಷ್ಣ ಮರಾಠೆ**

**ಸಂಪಾದಕ ಮಂಡಳಿ**

ಡಾ॥ ಗುರುಲಿಂಗ ಕಾಪಸೆ, ಡಾ॥ ಸಿ. ಕೆ. ನಾವಲಗಿ

ಶ್ರೀ ಆರ್. ಪಿ. ಅಪರಾಜ, ಡಾ॥ ವಿ. ಎಸ್. ಮಾಳಿ

ಡಾ॥ ಬಸವರಾಜ ಜಗಜಂಪಿ, ಶ್ರೀ ಬಿ. ಬಿ. ಹೊಸಮನಿ

ಡಾ. ಎಂ. ಎಸ್. ಹುಲ್ಲೋಳಿ, ಶ್ರೀಮತಿ ನೀಲಗಂಗಾ ಚರಂತಿಮಠ

**ಪ್ರಕಾಶಕರು**

ಕಾರ್ಯದರ್ಶಿ ಶ್ರೀ ಸಿದ್ಧರಾಮೇಶ್ವರ ಶಿಕ್ಷಣ ಸಂಸ್ಥೆಯ

**ವಚನ ಅಧ್ಯಯನ ಕೇಂದ್ರ**

ನಾಗನೂರು ಶ್ರೀ ರುದ್ರಾಕ್ಷಿಮಠ, ಶಿವಬಸವನಗರ

ಬೆಳಗಾವಿ–೫೯೦೦೧೦

ದೂ:೦೮೩೧–೨೪೦೭೧೫೭ *email:basavaguru@rediffmail.com*

*Web: www.rudrakshimath.in*

**ಚಂದಾವಿವರ**

| | | |
|---|---|---|
| ಮಹಾಪೋಷಕರು | ರೂ. | ೧೦,೦೦೦=೦೦ |
| ಪೋಷಕರು | ರೂ. | ೫೦೦೦=೦೦ |
| ಆಜೀವ | ರೂ. | ೩೦೦೦=೦೦(೨೦ ವರ್ಷ) |
| ಆರು ವರ್ಷದ | ರೂ. | ೧೦೦೦=೦೦ |
| ಒಂದುವರ್ಷದ | ರೂ. | ೨೦೦=೦೦ |
| ಬಿಡಿ ಪ್ರತಿ | ರೂ. | ೨೦=೦೦ |

ಚಂದಾಹಣವನ್ನು ನಗದು ಅಥವಾ **'ವಚನ ಅಧ್ಯಯನ ಕೇಂದ್ರ'** ಹೆಸರಿನಲ್ಲಿ ಕ್ರಾಸ್ ಮಾಡಿದ ಡಿ.ಡಿ/ಚೆಕ್‌ಮುಖಾಂತರ**"ನಿರ್ದೇಶಕರು, ವಚನ ಅಧ್ಯಯನ ಕೇಂದ್ರ ನಾಗನೂರು ರುದ್ರಾಕ್ಷಿಮಠ, ಶಿವಬಸವ ನಗರ, ಬೆಳಗಾವಿ–೫೯೦ ೦೧೦"** ಈ ವಿಳಾಸಕ್ಕೆ ಕಳಿಸಬೇಕಾಗಿ ವಿನಂತಿ.

**ಅಂತರಂಗದೊಳಗೆ.....**

* ಸಂಪಾದಕೀಯ — ೨
* ವಚನಾರ್ಥ–ಚಿಂತನ — ೪
  * **ಡಾ. ಸಿದ್ಧರಾಮ ಸ್ವಾಮಿಗಳು**
* ಸರಳತೆಯ ಸಾಕಾರ — ೬
  * **ಶ್ರೀರಾಮ ಇಟ್ಟಣ್ಣವರ**
* ಅದಮ್ಯ ಚೇತನ — ೧೦
  * **ಡಾ. ಬಿ. ವ್ಹಿ. ಶಿರೂರ**
* ಜನಪರ ಜಂಗಮನ ನಿರ್ಗಮನ — ೧೩
  * **ಸುಮಿತ್ರಾಸುತ ಅಗಸಬಾಳ**
* ಬಸವತತ್ತ್ವದ ಮಹಾದಂಡನಾಯಕರು — ೧೫
  * **ಡಾ. ಕೆ. ರವೀಂದ್ರನಾಥ**
* ಮಾತೃಸ್ವರೂಪಿ — ೧೭
  * **ಡಾ. ರಾಜೇಂದ್ರ ಎಸ್. ಗಡಾದ**
* ಹರಳಯ್ಯ–ಮಧುವರಸರು — ೨೧
  * **ಸಿದ್ಧಯ್ಯ ಪುರಾಣಿಕ**
* ಶರಣರು ಮತ್ತು ಜನಪದ — ೨೬
  * **ಎ. ಎಂ. ಗೊರಚಿಕ್ಕನವರ**
* ಶರಣರ ಕಾಯಕ ದಾಸೋಹ ಪರಿಕಲ್ಪನೆ — ೨೯
  * **ಚಂದ್ರಶೇಖರ ಹಿರೇಮಠ**

ಇಲ್ಲಿಯ ಲೇಖನಗಳ ಅಭಿಪ್ರಾಯಗಳು ಲೇಖಕರವೇ ಹೊರತು ಪತ್ರಿಕೆಯ ಅಭಿಪ್ರಾಯಗಳಲ್ಲ. **–ಸಂ**

# ಡಾ. ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳ ಸ್ಮರಣೆ

**ಹಾಗೂ ಸಿದ್ಧ ಹೀಗೂ ಸಿದ್ಧ**
**ನಿನ್ನ ಹೆಸರು ಪ್ರಸಿದ್ಧ**
**ಭಾವಪೂರ್ಣ ಬದುಕಿನಿಂದ**
**ನೀನು ಆಗು ಪ್ರಬುದ್ಧ.**

● **–ಡಾ. ಜ. ಚ. ನಿ**

ಕವಿಗುರು ಡಾ. ಜ. ಚ. ನಿ. ಅವರು ಐದು ದಶಕಗಳ ಹಿಂದೆ ಡಾ. ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳನ್ನು ಕುರಿತು ಬರೆದ ಕವಿತೆಯ ಸಾಲುಗಳಿವು. ಈ ಕವಿವಾಣಿಯಂತೆಯೇ ಬದುಕಿ ಬಾಳಿದವರು, ಬದ್ಧತೆಗೆ ಪ್ರಬುದ್ಧತೆಗೆ ಹೆಸರಾದವರು ಲಿಂ. ಜಗದ್ಗುರು ಡಾ. ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳವರು. ಅವರು ನಾಡಿನ ಪುಣ್ಯವೇ ಹಣ್ಣಾದಂತೆ ಹುಟ್ಟಿಬಂದವರು. ಆಕರ್ಷಕ ವ್ಯಕ್ತಿತ್ವ, ಧೀರೋದಾತ್ತ ನಿಲವಿನಿಂದ ನಾಡವರ ಗಮನ ಸೆಳೆದವರು. ಅವರು ಸ್ವಾಮಿ ವಿವೇಕಾನಂದರಂತೆ ತೇಜಸ್ವಿಗಳು, ಓಜಸ್ವಿಗಳು; ಹಾಗೆಯೇ ಅಪರೂಪದ ವಾಗ್ಮಿಗಳು.

ಡಾ. ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳವರನ್ನು ನಾಡಿನ ಜನತೆ ಪ್ರೀತಿಯಿಂದ ಜನಸಾಮಾನ್ಯರ ಸ್ವಾಮೀಜಿ, ಪುಸ್ತಕದ ಸ್ವಾಮೀಜಿ, ಕನ್ನಡಿಗರ ಗುರು, ಪರಿಸರಪ್ರೇಮಿ ಮುಂತಾದ ಉಪಾಧಿಗಳಿಂದ ಸಂಬೋಧಿಸುತ್ತಿದ್ದರು. ಅವರು ಬದುಕಿನುದ್ದಕ್ಕೂ ಈ ಎಲ್ಲ ಉಪಾಧಿಗಳಿಗನುಗುಣವಾಗಿಯೇ ನಡೆದುಕೊಂಡಿದ್ದರು. ರಾಜ ಮಹಾರಾಜರಿಂದ ಪೂಜಿತವಾದ, ವಿರಕ್ತಪರಂಪರೆಯ ಮೂಲಪೀಠವೆಂದು ಖ್ಯಾತಿವೆತ್ತ ಶ್ರೀಮಠದ ಬಿರುದು ಬಾವಲಿಗಳನ್ನು, ಸಿಂಹಾಸನ ಪಲ್ಲಕ್ಕಿ ಉನ್ನತಾಸನಗಳೆಲ್ಲವನ್ನೂ ತ್ಯಜಿಸಿ ಜನಸಾಮಾನ್ಯರೊಡನೆ ಒಂದಾಗಿ ಬೆರೆತರು. ಅವರ ಗ್ರಂಥಪ್ರೀತಿಯೂ ಅನನ್ಯವಾದುದು. ಲಿಂಗಾಯತ ಅಧ್ಯಯನ ಸಂಸ್ಥೆಯ ಮೂಲಕ ಸಾವಿರಾರು ಗ್ರಂಥಗಳನ್ನು ಪ್ರಕಟಿಸಿದರು. ಮಠವನ್ನು ಸಂದರ್ಶಿಸುವವರಿಗೆಲ್ಲ ಅನ್ನದಾಸೋಹದ ಜೊತೆಗೆ ಗ್ರಂಥದಾಸೋಹವನ್ನು ನೆರವೇರಿಸಿಕೊಂಡು ಬಂದರು. ಕರ್ನಾಟಕದ ನೆಲ, ಜಲ, ಭಾಷೆ ಮತ್ತು ಪರಿಸರ ಸಂರಕ್ಷಣೆಗಾಗಿ ಅಹರ್ನಿಶಿ ಶ್ರಮಿಸಿದರು. ಗೋಕಾಕ ಚಳುವಳಿಯಂತಹ ಭಾಷಿಕ ಹೋರಾಟಗಳಲ್ಲಿ ಮುಂಚೂಣಿ ಸ್ಥಾನದಲ್ಲಿ ನಿಂತು ಇತರರಿಗೆ ಮಾದರಿಯಾದರು. ರೈತಪರ ಹೋರಾಟಗಳಲ್ಲಿ ಭಾಗವಹಿಸಿ ರೈತರಲ್ಲಿ ಆತ್ಮಸ್ಥೈರ್ಯ ತುಂಬಿದರು. ಸೋಮಾರಿಗಳಂತಾಗಿದ್ದ ರಾಜಕಾರಣಿಗಳನ್ನು ತಮ್ಮ ಕಠೋರ ಮಾತುಗಳ ಮೂಲಕ ಎಚ್ಚರಿಸಿದರು. ಉತ್ತರ ಕರ್ನಾಟಕದ ಸಹ್ಯಾದ್ರಿ ಎಂದೇ ಹೆಸರಾದ ಕಪ್ಪತಗುಡ್ಡದ ವಿಶಾಲ ಪ್ರದೇಶವನ್ನು ಗಣಿಧನಿಗಳಿಂದ ರಕ್ಷಿಸಿ ಅಲ್ಲಿಯ ಜೀವ ಹಾಗು ವನಸ್ಪತಿ ವೈವಿಧ್ಯದ ಉಳಿವಿಗೆ ಕಾರಣರಾದರು. ಇಂದು ಈ ಕಪ್ಪತಗುಡ್ಡದ ಪ್ರದೇಶವು ವನ್ಯಜೀವಿಧಾಮವೆಂದು ರೂಪಾಂತರಗೊಳ್ಳುವಲ್ಲಿ ಅವರು ನಡೆಸಿದ ಹೋರಾಟವೇ ಅಡಿಪಾಯ ಎಂಬುದು ಗಮನಾರ್ಹ ಸಂಗತಿಯಾಗಿದೆ.

ಗ್ರಾಮೀಣ ಬಡಜನತೆಯ ಬಗ್ಗೆ ಡಾ. ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳವರು ಅಪಾರ ಅಂತಃಕರಣವುಳ್ಳವರಾಗಿದ್ದರು. ಬಡವರಿಗಾಗಿ ಅವರು ಎಲ್ಲ ರೀತಿಯ ತ್ಯಾಗಕ್ಕೂ ಸಿದ್ಧರಾಗಿರುತ್ತಿದ್ದರು. ಬಡಮಕ್ಕಳನ್ನು ದತ್ತುಪಡೆದು ಅವರ ಶೈಕ್ಷಣಿಕ ಅಭಿವೃದ್ಧಿಗೆ ನಿರಂತರ ನೆರವಾಗುತ್ತಿದ್ದರು. ನಿವೇಶನ ರಹಿತ ಬಡವರಿಗೆ ಮಠದ ಜಮೀನುಗಳಲ್ಲಿ ಶಾಶ್ವತ ಮನೆಗಳನ್ನು ಕಟ್ಟಿಕೊಳ್ಳಲು ಅವಕಾಶ ಕಲ್ಪಿಸಿದರು; ಹಸು–ಎಮ್ಮೆ, ತೆಂಗಿನ ಸಸಿಗಳನ್ನು ಮನೆಮನೆಗೆ ತಲುಪಿಸಿ ಗ್ರಾಮೀಣ ಬಡವರ ಆರ್ಥಿಕಾಭಿವೃದ್ಧಿಯನ್ನು ಸಾಧಿಸಿದರು. ತಮ್ಮ ಪ್ರೀತಿಯ ನುಡಿಗಳಿಂದ ಜನರ ವ್ಯಸನಗಳನ್ನು ಬಿಡಿಸಿ ವ್ಯಸನಮುಕ್ತರನ್ನಾಗಿಸುವುದಲ್ಲದೆ ಅವರನ್ನು ಉದ್ಯೋಗಶೀಲರನ್ನಾಗಿ ಬೆಳೆಸಿದರು. ಗ್ರಾಮಾಂತರ

ಪ್ರದೇಶದಲ್ಲಿ ಹೆಚ್ಚ-ಹೆಚ್ಚು ಶಿಕ್ಷಣ ಸಂಸ್ಥೆಗಳನ್ನು ತೆರೆದು ಗ್ರಾಮೀಣ ಬಡಮಕ್ಕಳಿಗೂ ಶಿಕ್ಷಣ ಕೈಗೆಟುಕುವಂತೆ ಮಾಡಿದ ಶ್ರೇಯಸ್ಸು ಅವರದು. ಶ್ರೀಗಳ ಸಾಂಸ್ಕೃತಿಕ ಪ್ರೀತಿಯಂತೂ ಸ್ಮರಣೀಯವಾದುದು. ಸಾಹಿತ್ಯ, ಸಂಗೀತ, ನೃತ್ಯ ಕಲೆಗಳ ಪೋಷಕರಾಗಿ ಅವುಗಳ ಬೆಳವಣಿಗೆಗೆ ಶ್ರಮಿಸಿದರು; ಸಾಹಿತಿ ಕಲಾವಿದರನ್ನು ಗೌರವಿಸಿದರು. ಅವರೊಬ್ಬ ಶ್ರೇಷ್ಠ ಗುಣಗ್ರಾಹಿಗಳಾಗಿದ್ದರು. ಜಾತಿ ಮತ ಪಂಥಗಳ ಭೇದವೆಣಿಸದೆ ಒಳ್ಳೆಯದನ್ನು ಗುರುತಿಸಿ ಪ್ರೋತ್ಸಾಹಿಸುತ್ತಿದ್ದರು. ಅವರ ಈ ಮಹೋನ್ನತ ಗುಣಗಳು ಕಾರಣವಾಗಿ ಸಮಾಜದಲ್ಲಿಂದು ಅವರಿಂದ ಉಪಕೃತರಾದ ಸಾವಿರಾರು ಜನರನ್ನು ಕಾಣುತ್ತೇವೆ. ಈ ಎಲ್ಲ ಜನಪರ ಕಾರ್ಯಗಳು ಅವರ ಸಾಮಾಜಿಕ ಬದ್ಧತೆಗೆ ಕಳಕಳಿಗೆ ನಿದರ್ಶನವಾಗಿವೆ.

ಜಗದ್ಗುರು ಡಾ. ತೋಂಟದ ಸಿದ್ಧಲಿಂಗ ಶ್ರೀಗಳವರದು ಬಹುಮುಖ ವ್ಯಕ್ತಿತ್ವ; ಸಾಂಸ್ಕೃತಿಕ ಬದುಕು. ಸ್ಥಾವರವಾದ ಮಠವನ್ನು ಜಂಗಮಗೊಳಿಸಿದ, ಧಾರ್ಮಿಕ ಕೇಂದ್ರವನ್ನು ಸಾಂಸ್ಕೃತಿಕ ಕೇಂದ್ರವಾಗಿ ರೂಪಾಂತರಗೊಳಿಸಿದ ಶ್ರೇಯಸ್ಸು ಶ್ರೀಗಳವರದು. ಜಾತಿ ಮತ ಧರ್ಮಗಳ ಭೇದವಿಲ್ಲದೆ ಎಲ್ಲರಿಗೂ ಮಠದಲ್ಲಿ ಮುಕ್ತಪ್ರವೇಶ ನೀಡಿ ಅದನ್ನು ಸರ್ವಜನಾಂಗದ ಶಾಂತಿಯ ತೋಟವಾಗಿಸಿದರು. ಅವರಿಗಾಗಿ ಬರೀ ಮಠದ ಬಾಗಿಲನ್ನು ತೆರೆದಿಡದೇ ಹೃದಯದ ಬಾಗಿಲನ್ನು ತೆರೆದಿಟ್ಟು ಇತರ ಮಠಾಧಿಪತಿಗಳಿಗೆ ಮಾದರಿಯಾಗಿ ಬದುಕಿದರು. 'ಮನುಷ್ಯ ಜಾತಿ ತಾನೊಂದೇ ವಲಂ' ಎಂಬ ಪಂಪ ಕವಿಯ ಉಕ್ತಿಯನ್ನು ಚರಿತಾರ್ಥಗೊಳಿಸಿದರು. ತಮ್ಮ ಕಂಚಿನಕಂಠ, ಅಸ್ಖಲಿತವಾಣಿಗಳಿಂದ ಅವರು ಶ್ರೋತೃಗಳನ್ನು ಮಂತ್ರಮುಗ್ಧವಾಗಿಸುತ್ತಿದ್ದರು. ಅವರ ಓದು ಕೂಡ ತುಂಬ ವಿಸ್ತೃತವಾದುದಾಗಿತ್ತು. ಪಂಪನಿಂದ ಕುವೆಂಪು ವರೆಗಿನ ಎಲ್ಲ ಕವಿ ಸಾಹಿತಿಗಳ ಕೃತಿಗಳನ್ನು ಓದಿಕೊಂಡಿದ್ದರು. ಅವರ ಉಪನ್ಯಾಸವೆಂದರೆ ಅದು ಸಾಹಿತ್ಯದ ರಸದೌತಣ. ಜನಪದರ, ಅನುಭಾವಿಗಳ ಪದ್ಯಗಳನ್ನು ಭಾವಪೂರ್ಣವಾಗಿ ಹಾಡಿ ಜನಮನವನ್ನು ತಣಿಸುತಿದ್ದರು. ಅವರ ಒಂದು ಉಪನ್ಯಾಸ ನೂರು ಕೃತಿಗಳ ಓದಿಗೆ ಸಮ ಎಂಬ ಮಾತು ಅತ್ಯಂತ ಜನಜನಿತವಾಗಿತ್ತು.

ಮಾನವೀಯ ಮೌಲ್ಯಗಳ ಪ್ರತಿರೂಪದಂತಿದ್ದ ಡಾ. ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳವರು ಲಿಂಗೈಕ್ಯರಾಗಿ ಈ ವಿಜಯದಶಮಿಗೆ ಒಂದು ವರ್ಷವಾಯಿತು. ವಿಜಯದಶಮಿ ಹಬ್ಬದಂದು 'ನಮ್ಮ ಶರಣರಿಗೆ ಮರಣವೇ ಮಹಾನವಮಿ', ಎಮ್ಮವರಿಗೆ ಸಾವಿಲ್ಲ-ಅವರು ಸಾವನೆಂದೂ ಅರಿಯರು. ಅವರು ಕಾಲಕರ್ಮ ರಹಿತರು, ಭವವಿರಹಿತರು' ಎಂದು ಆಶೀರ್ವಚನ ನೀಡಿ ಸ್ವತಃ ತಾವೇ ಕಾಲಾತೀತರಾಗಿ, ಭವಮುಕ್ತರಾಗಿ ಅಮೃತತ್ತ್ವ-ಅಮರತ್ವವನ್ನು ಹೊಂದಿದರು. ಇದು ಜಾಗತಿಕ ಇತಿಹಾಸದಲ್ಲಿಯೇ ಅಪರೂಪದ್ದೆನಿಸುವ ಘಟನೆ. 'ನಿಮ್ಮ ನೆನಹಾದಾಗಲೇ ಉದಯ, ಮರೆದಾಗಲೇ ಅಸ್ತಮಾನ' ಎಂಬಂತೆ ನಮ್ಮ ಅಭ್ಯುದಯಕ್ಕಾಗಿ ಈಗ ನಮಗೆ ಉಳಿದಿರುವುದು ಅವರ ಸ್ಮರಣೆಯೊಂದೇ. ಅವರ ಪ್ರಥಮ ಪುಣ್ಯಸ್ಮರಣೆಯ ಸಂದರ್ಭದಲ್ಲಿ ಗದಗ ಜಗದ್ಗುರು ತೋಂಟದಾರ್ಯ ಮಠದಲ್ಲಿ ಅವರ ಆಶಯದ ಸಾಕಾರ ರೂಪದಂತಿರುವ 'ಅನುಭವಮಂಟಪ'ವನ್ನು ಲೋಕಾರ್ಪಣೆಗೊಳಿಸುವುದಲ್ಲದೆ ಅವರ ಸ್ಮರಣೆಯಲ್ಲಿ ಪ್ರತಿವರ್ಷ ಕೊಡಮಾಡುವ ಡಾ. ತೋಂಟದ ಸಿದ್ಧಲಿಂಗ ಶ್ರೀ 'ರಾಷ್ಟ್ರೀಯ ಪ್ರಶಸ್ತಿಯನ್ನು ಈ ವರ್ಷ ಅವರ ಅತ್ಯಂತ ಪ್ರೀತಿಪಾತ್ರರಾದ, ಬಸವತತ್ತ್ವ ಪ್ರಸಾರಕ್ಕೆ ತಮ್ಮನ್ನು ತಾವೇ ಮೀಸಲಾಗಿಸಿ ಶ್ರಮಿಸುತ್ತಿರುವ ಬಸವ ಟಿವಿಯ ಶರಣ ಈ. ಕೃಷ್ಣಪ್ಪ ಅವರಿಗೆ ಪ್ರದಾನ ಮಾಡಲಾಗುತ್ತಿದೆ. ಈ ಪ್ರಶಸ್ತಿಯು ಐದು ಲಕ್ಷ ರೂಪಾಯಿಗಳ ನಗದು ಹಾಗು ಪ್ರಶಸ್ತಿ ಪತ್ರಗಳನ್ನೊಳಗೊಂಡಿದೆ. ಡಂಬಳದ ಮೂಲ ಮಠದಲ್ಲಿಯೂ ಕೂಡ ಅವರ ಸಂಸ್ಮರಣೆಯಲ್ಲಿ 'ಡಾ. ತೋಂಟದ ಸಿದ್ಧಲಿಂಗ ಶ್ರೀ' ಎಂಬ ಇಪ್ಪತ್ತೈದು ಸಾವಿರ ನಗದು ಪುರಸ್ಕಾರವುಳ್ಳ ರಾಜ್ಯಮಟ್ಟದ ಪ್ರಶಸ್ತಿಯನ್ನು ಅನಕ್ಷರಸ್ಥ ಆಶು ಕವಿ ಶ್ರೀ ರಾಮಣ್ಣ ಬ್ಯಾಟಿ (ಬೆಟಗೇರಿ) ಅವರಿಗೆ ನೀಡಿ ಗೌರವಿಸಲಾಗುತ್ತಿದೆ. ಇವೆಲ್ಲವೂ ಪೂಜ್ಯ ಶ್ರೀಗಳವರ ಅಂತಃಕರಣಕ್ಕೆ ಹತ್ತಿರವಾದ ಕಾರ್ಯಗಳಾಗಿವೆ.

ಕೋಮು ಸೌಹಾರ್ದತಾ ಪ್ರಶಸ್ತಿ, ಗೌರವ ಡಾಕ್ಟರೇಟ, ರಾಜ್ಯೋತ್ಸವ ಪ್ರಶಸ್ತಿಯಂತಹ ಹತ್ತು ಹಲವು ಪ್ರಶಸ್ತಿಗಳಿಂದ ವಿಭೂಷಿತರಾದ ಅವರು ತಾವು ಮುನ್ನಡೆಸಿಕೊಂಡು ಬಂದಿರುವ ನೂರಾರು ಜನಪರ ಕಾರ್ಯಗಳ ಮೂಲಕ ನಮ್ಮೊಡನಿದ್ದಾರೆ. ಸಾವಿರಕ್ಕೊಬ್ಬ ಸತ್ಯ, ಲಕ್ಷಕ್ಕೊಬ್ಬ ಭಕ್ತ, ಕೋಟಿಗೊಬ್ಬ ಶರಣ ಎನ್ನುವಂತೆ ಈ ನಾಡಿನಲ್ಲಿ ದೈಹಿಕವಾಗಿ ಮೂಡಿ ಮರೆಯಾದ ಡಾ. ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳನ್ನು ನಾಡಜನತೆ ಎಂದೂ ಮರೆಯದು. ಅವರ ನೆನಪು ನಂದಾದೀಪ. ಅದು ನಮ್ಮ ಬಾಳಿನ ಬೆಳಕು. ಬೆಳಕು ತೋರಿದ ಪರಮ ಪೂಜ್ಯರಿಗೆ ಇದೋ ನಮ್ಮ ಶರಣು; ಶರಣಾರ್ಥಿಗಳು.

# ವಚನಾರ್ಥ–ಚಿಂತನ

● ಡಾ. ಸಿದ್ಧರಾಮ ಸ್ವಾಮಿಗಳು

**ಮರ್ಮವರಿತು ಮಾಡುವಂಗೆ ಕರ್ಮವಿಲ್ಲ**
**ಹೆಮ್ಮೆಗೆ ಮಾಡುವ ವಿಧಿಯ ನೋಡಾ**
**ಸಜ್ಜನ ಸದಾಚಾರವನರಿದು ಮಾಡುವನು**
**ಕೂಡಲ ಚನ್ನಸಂಗನ ಶರಣ ನಮ್ಮ ಬಸವಣ್ಣನು.**

ಲಿಂಗಾಯತಧರ್ಮದ ತಾತ್ವಿಕ ಮೌಲ್ಯಗಳಲ್ಲಿ ಕಾಯಕ–ದಾಸೋಹಗಳಿಗೆ ವಿಶಿಷ್ಟವಾದ ಸ್ಥಾನವಿದೆ. ಪ್ರತಿಯೊಬ್ಬ ಲಿಂಗಾಯತನು ಸತ್ಯಶುದ್ಧ ಕಾಯಕ ಮಾಡಲೇಬೇಕು. ಕಾಯಕದಿಂದ ಪ್ರಾಪ್ತವಾದುದನ್ನು ಸದ್ಭಾವದಿಂದ ಲಿಂಗ ಜಂಗಮಕ್ಕೆ ಸಮರ್ಪಿಸಬೇಕು. ಇವುಗಳನ್ನು ಅರಿತು ಆಚರಿಸುವಲ್ಲಿಯೇ ಲಿಂಗಾಯತನ ವೈಶಿಷ್ಟ್ಯ ಅಡಗಿದೆ ಎಂದು ತಿಳಿಸುತ್ತ ಧರ್ಮಗುರು ಬಸವಣ್ಣನವರು ಈ ಮೌಲ್ಯಗಳನ್ನು ತಮ್ಮ ಬದುಕಿನಲ್ಲಿ ಅಳವಡಿಸಿಕೊಂಡು ಎಲ್ಲ ಲಿಂಗಾಯತರಿಗೆ ಆದರ್ಶ ಧರ್ಮಗುರುಗಳಾಗಿದ್ದಾರೆ ಎಂದು ಅವಿರಳ ಜ್ಞಾನಿ ಚನ್ನಬಸವಣ್ಣನವರು ಈ ವಚನದಲ್ಲಿ ಮಾರ್ಮಿಕವಾಗಿ ನುಡಿದಿದ್ದಾರೆ.

ಇದೊಂದು ಜಂಗಮಸ್ಥಲದ ವಚನ. ಈ ಸ್ಥಲದಲ್ಲಿ ಜಂಗಮ ದಾಸೋಹ ಮಾಡುವ ಭಕ್ತನ ಇರುವಿಕೆಯನ್ನೂ ಹಾಗೆಯೇ ದಾಸೋಹವನ್ನು ಸ್ವೀಕರಿಸುವ ಜಂಗಮನ ಗುಣಲಕ್ಷಣಗಳನ್ನು ವಿವರಿಸುತ್ತ ಜಂಗಮದಾಸೋಹದ ವಿಧಿ–ವಿಧಾನಗಳನ್ನು ತಿಳಿಸುವ ಚನ್ನಬಸವಣ್ಣನವರು ಮರ್ಮವರಿತು ದಾಸೋಹ ಮಾಡುವುದು ವಿದಿತ ಎನ್ನುತ್ತಾರೆ. ಹಾಗೆ ಮಾಡುವುದರಿಂದ ನಮ್ಮೆಲ್ಲ ಕರ್ಮಗಳು ನಾಶವಾಗುತ್ತವೆ. ದಾಸೋಹ ಮಾಡುವ ರಹಸ್ಯವನ್ನರಿಯದೆ ಮತ್ತು ದಾಸೋಹಂ ಭಾವವಿಲ್ಲದೆ ದಾಸೋಹ ಮಾಡಿದರೆ ಅದು ಲಿಂಗಾರ್ಪಿತವೆನಿಸುವುದಿಲ್ಲ. ಹಾಗೆ ಮಾಡುವುದೂ ಕೂಡ ವ್ಯರ್ಥ ಪರಿಶ್ರಮವೆನಿಸುವುದಲ್ಲದೆ ಕರ್ಮವೃದ್ಧಿಗೂ ಕಾರಣವಾಗುವುದು. ಆದ್ದರಿಂದ ದಾಸೋಹದ ಮರ್ಮವನ್ನರಿಯುವುದು ಅತ್ಯವಶ್ಯ.

ಜಂಗಮ ದಾಸೋಹ ಮಾಡುವ ಸದ್ಭಕ್ತನು ಭೌತಿಕ ಭೋಗದ ಬಯಕೆಗಳನ್ನು ಅಳಿದವನಾಗಿರಬೇಕು. ತಾನಿಲ್ಲದ ಭಾವದಿಂದ ದಾಸೋಹ ಮಾಡಬೇಕು. ದಾಸೋಹವನ್ನು ಮಾಡುತ್ತೇನೆಂಬ ಸಂಕಲ್ಪವಾಗಲಿ ಅಥವಾ ಬಯಕೆಯಾಗಲಿ ಅದು ಪರಶಿವನ ಅನುಗ್ರಹದಿಂದಲೇ ನಮಗೆ ಪ್ರಾಪ್ತವಾಗುತ್ತದೆ. 'ದಾತಾ ಭೋಕ್ತಾ ಸ್ವಯಂ ಶಿವಃ' ಎಂಬ ಮಾತು ಬಹು ಪ್ರಚಲಿತ. ಸಮಸ್ತ ಸೃಷ್ಟಿಯನ್ನೇ ತನ್ನ ಲೀಲಾವಿನೋದಕ್ಕಾಗಿ ಪರಶಿವನು ಸೃಷ್ಟಿಸಿರುವುದರಿಂದ ಇಲ್ಲಿ ನಮ್ಮದೆನ್ನುವುದು ಏನೂ ಇಲ್ಲ. ಮಾಡಿಸಿಕೊಂಬ ಅಂದರೆ ಭಕ್ತಿಯನ್ನು ಕೈಕೊಳ್ಳುವ ಜಂಗಮ, ಮಾಡುವ ತಾನು ಮತ್ತು ಪದಾರ್ಥಗಳೆಲ್ಲವೂ ಶಿವನ ಸೊಮ್ಮು ಎಂಬುದನ್ನು ಅರಿತುಕೊಳ್ಳಬೇಕು. ನದಿಯ ನೀರನ್ನು ನದಿಗೆ ಅರ್ಪಿಸುವಂತೆ ಶಿವನಿಂದಾದ ಪದಾರ್ಥಗಳೆಲ್ಲವನ್ನೂ ಶಿವನಿಗೆ ಅರ್ಪಿಸಿ ತಾನು ಪರಿಶುದ್ಧನಾಗಬೇಕು. ಹೀಗಲ್ಲದೆ ನಾನು ನಿರಂತರ ಅನ್ನದಾನ ಮಾಡುವೆನೆಂಬ ಅಹಂಕಾರದಲ್ಲಿ ಮೆರೆಯುವುದಾಗಲಿ, ನಾನು ನನ್ನದೆಂಬ ಮಮಕಾರದಿಂದ ದಾಸೋಹ ಮಾಡುವುದಾಗಲಿ ನಿರರ್ಥಕವಾದುದು. ಅಂತಹ ಭಕ್ತರ ಮನೆಯು ದಾಸೋಹದ ಮನೆ ಎನಿಸದೇ ಲಂದಣಗಿತ್ತಿಯ ಮನೆ ಎನಿಸುವುದೆಂದು ಚನ್ನಬಸವಣ್ಣನವರೆ ಇನ್ನೊಂದೆಡೆ ಸ್ಪಷ್ಟಪಡಿಸಿದ್ದಾರೆ. ಆದ್ದರಿಂದ ಸಕಲ ಜೀವಾತ್ಮರೊಳಗೆ ಚೈತನ್ಯ ಸ್ವರೂಪಿಯಾಗಿ ಪರಶಿವನಿರುವನೆಂದು ತಿಳಿದು ಆ ಭಾವದಿಂದಲೇ ದಾಸೋಹ ಮಾಡಬೇಕು.

ಧರ್ಮಗುರು ಬಸವಣ್ಣನವರೂ ಕೂಡ– ನಾನು ನನ್ನದೆಂಬ ಅಹಂಕಾರ ಮಮಕಾರದ ಭಾವವನ್ನು ಅಳಿದು, ಮಾಡುವಾತ ನಾನಲ್ಲ, ನೀಡುವಾತ ನಾನಲ್ಲ ಎಲ್ಲವೂ ಪರಶಿವನದೆಂಬ ಭಾವದಿಂದ ದಾಸೋಹ ಮಾಡಬೇಕೆಂದು ಸೂಚಿಸಿದ್ದಾರೆ. ಮಾಡುವಂತಿರಬೇಕು, ಮಾಡದಂತಿರಬೇಕು, ಮಾಡುವ ಮಾಟದೊಳಗೆ ತಾನಿಲ್ಲದಂತಿರಬೇಕು ಎಂಬುದು ಧರ್ಮಗುರುವಿನ ಸ್ಪಷ್ಟ ಆದೇಶ. ಆದ್ದರಿಂದ ಭಕ್ತನು ಮಾಡುವ ಕ್ರಿಯೆಯೊಳಗೆ ತಾನಿಲ್ಲದಿರಬೇಕು. ತಾನು ತನ್ನದೆಂಬ ಭಾವವಳಿದು ದಾಸೋಹಿಯಾಗಬೇಕು. ಕಾಯಕದಿಂದ ಬಂದ

ನಾಗನೂರು ಶ್ರೀ ರುದ್ರಾಕ್ಷಿಮಠ, ಬೆಳಗಾವಿ

ಪ್ರತಿಫಲವನ್ನು ಸತ್ಯಶುದ್ಧವಾಗಿ ಚರಿಸುವ ಜಂಗಮಕ್ಕೆ ಸಮರ್ಪಿಸಬೇಕು. ಅನಾಚಾರ ದುರಾಚಾರಗಳಿಗೆ ಬಳಸಿಕೊಳ್ಳಬಾರದು. ಹಾಗೆಯೇ ಅಭಿವೃದ್ಧಿ, ಪದವಿ ಮತ್ತು ಮುಕ್ತಿಯ ಬಯಕೆಯಿಂದ ದಾಸೋಹ ಮಾಡಬಾರದು. ನಿಜಭಕ್ತರಾದವರು ಜಂಗಮ ತೃಪ್ತಿಯೇ ಲಿಂಗತೃಪ್ತಿ ಎಂದು ಅರಿತುಕೊಳ್ಳಬೇಕು. ಬೇಡದ ಮುನ್ನವೆ ಜಂಗಮದ ಅಗತ್ಯವನ್ನರಿತು ಭಕ್ತಿಯಿಂದ ದಾಸೋಹ ಮಾಡಬೇಕು. ತನು ಉಕ್ಕಿ ಮನ ಉಕ್ಕಿ ಭಾವತುಂಬಿ ಭಕ್ತಿಯ ದಾಸೋಹ ಮಾಡಿದರೆ ಖಂಡಿತವಾಗಿಯೂ ಲಿಂಗಸಂತೃಪ್ತಿಯಾಗುವುದು. ಭಕ್ತನಾದವನು ಈ ಮರ್ಮವನ್ನರಿತು ದಾಸೋಹವನ್ನು ಮಾಡಿ ಕರ್ಮದ ಬಂಧನದಿಂದ ಮುಕ್ತನಾಗಬೇಕು. ಹೀಗಲ್ಲದೆ ನಾನು ಮಾಡಿದೆನೆಂಬ ಒಣಪ್ರತಿಷ್ಠೆ ಹೊಂದುವುದು ಅಜ್ಞಾನದ ಲಕ್ಷಣ ಹಾಗು ಮೂರ್ಖತನ ಎನ್ನದೇ ವಿಧಿ ಇಲ್ಲ.

ಧರ್ಮಗುರು ಬಸವಣ್ಣನವರು ಈ ಮರ್ಮವನ್ನರಿತು ಮಾಡುವ ದಾಸೋಹಕ್ಕೆ ಮಾದರಿಯಾದವರು. ಸತ್ಯಶುದ್ಧ ಕಾಯಕದಿಂದ ಸಂಪಾದಿಸಿ ತಂದು, ತಾನು ಮಾಡುತ್ತಿರುವೆನೆಂಬ ಅಹಂಕಾರವಳಿದು, ಸದಾಚಾರ ಸಂಪನ್ನನಾಗಿ ದಾಸೋಹ ಮಾಡುವ ಮರ್ಮವನ್ನು ಲಿಂಗಾಯತರಿಗೆ ಕಲಿಸಿದವರು ಬಸವಣ್ಣನವರು. ಆದ್ದರಿಂದ ಅವರೇ ಲಿಂಗಾಯತರ ಧರ್ಮಗುರುಗಳು, ಕಾಯಕ ದಾಸೋಹದ ಹರಿಕಾರರು. ತಮ್ಮ ನಿಜಸ್ವರೂಪವನ್ನರಿತು, ನಿಜ ಶಿವಸ್ವರೂಪದಲ್ಲಿ ಬೆರೆತು ಮಹಾನುಭಾವಿಗಳಾದವರು. ಸಕಲ ಅರಿವು ಆಚಾರಗಳನ್ನು ಅಳವಡಿಸಿಕೊಂಡು ಸಮಸ್ತ ವಿಶ್ವವೆಲ್ಲವೂ ಲಿಂಗದ ಲೀಲಾವಿಲಾಸವೆಂದು ಅರಿತು ಆಚರಿಸಿದವರು. ಧರ್ಮಗುರುವಿನ ಈ ಮಹೋನ್ನತ ಗುಣವನ್ನು, ಮಾರ್ಗದರ್ಶಿ ಸೂತ್ರಗಳನ್ನು ಮುಕ್ತಕಂಠದಿಂದ ಪ್ರಶಂಸಿಸಿದ ಜ್ಞಾನಿ ಚನ್ನಬಸವಣ್ಣನವರು ಧರ್ಮಗುರುವಿನ ಮಾರ್ಗದಲ್ಲಿ ಮುನ್ನಡೆದು ಶರಣರಾಗಿ ಬಾಳಬೇಕೆಂಬ ಸಂದೇಶವನ್ನು ಈ ವಚನದ ಮೂಲಕ ನೀಡಿದ್ದಾರೆ.

■■

## 'ಲಿಂಗಾಯತ ಧರ್ಮದಲ್ಲಿ ಗೋತ್ರ-ಸೂತ್ರಗಳಿಲ್ಲ'

ವಿಶ್ವಗುರು ಬಸವಣ್ಣನವರಿಂದ ಸ್ಥಾಪಿತವಾದ, ವರ್ಗ-ವರ್ಣಭೇದರಹಿತವಾದ ಲಿಂಗಾಯತ ಧರ್ಮವು ಹದಿನೇಳನೆಯ ಶತಮಾನದವರೆಗೆ ಅತ್ಯಂತ ಉಚ್ಛ್ರಾಯ ಸ್ಥಿತಿಯಲ್ಲಿತ್ತು. ಆ ವೇಳೆಗಾಗಲೇ ಬಸವಣ್ಣನವರ ಭಕ್ತಿತತ್ವವನ್ನು ಮೆಚ್ಚಿಕೊಂಡ ಆಂಧ್ರದ ಆರಾಧ್ಯ ಬ್ರಾಹ್ಮಣರು, ಲಿಂಗಧಾರಿಗಳಾದ ಲಕುಲೀಶ, ಪಾಶುಪತ ಮತ್ತು ಕಾಳಾಮುಖ ಮಠಾಧೀಶರು ಈ ಧರ್ಮವನ್ನು ಸೇರಿದ್ದರೂ ತಮ್ಮ ಅಸ್ತಿತ್ವವನ್ನು ಕಾಯ್ದುಕೊಳ್ಳುವುದಕ್ಕಾಗಿ ಶ್ರಮಿಸುತ್ತಿದ್ದರು. ಲಿಂಗಾಯತ ಧರ್ಮಕ್ಕೆ ವೀರಶೈವ ಎಂಬ ಪರ್ಯಾಯ ಹೆಸರನ್ನಿಟ್ಟುಕೊಂಡಿರುವುದು, ಅದಕ್ಕೆ ಪ್ರಾಚೀನತೆಯನ್ನು ಮತ್ತು ಆಗಮಪ್ರತಿಷ್ಠೆಯನ್ನು ತಂದುಕೊಡುವ ಯತ್ನ ಮಾಡಿರುವುದು ಸಿದ್ಧಾಂತ ಶಿಖಾಮಣಿ, ಶ್ರೀಕರಭಾಷ್ಯ, ಕ್ರಿಯಾಸಾರದಂತಹ ಗ್ರಂಥಗಳನ್ನು ರಚಿಸಿಕೊಂಡಿರುವುದು ಈ ಕಾರಣಕ್ಕಾಗಿಯೆ ಎಂಬುದು ಸರ್ವಶ್ರುತ. ಈ ಗ್ರಂಥಗಳ ಮೂಲಕ ಅವರು ತಮ್ಮ ತಮ್ಮ ಗೋತ್ರ-ಸೂತ್ರಗಳನ್ನು ತಮ್ಮ ಪ್ರಭಾವ ಮತ್ತು ಸಂಪರ್ಕಕ್ಕೆ ಒಳಗಾದವರಿಗೆಲ್ಲ ಬೋಧಿಸುತ್ತಿದ್ದರು. ಇಂದು ಕೇವಲ ಜಾತಿಜಂಗಮರು ಮಾತ್ರ ಹೇಳಿಕೊಳ್ಳುತ್ತಿರುವ ವೀರ, ನಂದಿ, ಭೃಂಗಿ ಮುಂತಾದ ಗೋತ್ರಗಳು ಲಿಂಗಾಯತ ಧರ್ಮದಲ್ಲಿ ಇರಲಿಲ್ಲ. ಬಸವಣ್ಣನವರು-

**ಗೋತ್ರನಾಮ ಬೆಸಗೊಂಡರೆ**
**ಮಾತ ನೂಂಕದೆ ಸುಮ್ಮನಿದ್ದಿರೇಕಯ್ಯ?**
**ತಲೆಯಕುತ್ತಿ, ನೆಲನ ಬರೆವುತ್ತಿದ್ದಿರೇನಯ್ಯ?**
**ಗೋತ್ರ ಮಾದಾರಚನ್ನಯ್ಯ,**
**ಡೋಹರ ಕಕ್ಕಯ್ಯನೆಂಬುದೇನು ಕೂಡಲಸಂಗಯ್ಯ**

ಎಂದು ಹೇಳಿರುವುದನ್ನು ಗಮನಿಸಿದರೆ ಅವರ ತತ್ವಕ್ಕೆ ವಿರೋಧವಾದ ಈ ಗೋತ್ರಸೂತ್ರಗಳು ನಂತರ ಈ ಧರ್ಮದಲ್ಲಿ ಸೇರಿದ ವಿಷಯ ನಿಸ್ಸಂಶಯವಾಗಿದೆ. ಶ್ರೀ ಗೋವಿಂದ ಮಂಗೇಶ ಕಾಲೇಲಕರ ಅವರು "ಮುಂಬೈ ಇಲಾಖೆಯಲ್ಲಿಯ ಜಾತಿಗಳು" ಎಂಬ ತಮ್ಮ ಗ್ರಂಥದಲ್ಲಿ "ಜಾತಿಭೇದವನ್ನು ನಿವಾರಣೆ ಮಾಡಲಿಕ್ಕಾಗಿಯೇ ಲಿಂಗಾಯತ ಧರ್ಮವು ಹುಟ್ಟಿಕೊಂಡಿತು. ಲಿಂಗಧಾರಿಗಳೆಲ್ಲ ಸಮಾನರೆಂಬುದು ಈ ಧರ್ಮದ ಸಿದ್ಧಾಂತ. ಆರಂಭದಲ್ಲಿ ಈ ತತ್ವವು ಆಚರಣೆಯಲ್ಲಿದ್ದರೂ ಕಾಲಾಂತರದಲ್ಲಿ ನೂರಾರು ಜಾತಿಗಳನ್ನು ಉಂಟು ಮಾಡಿತು." ಎಂದು ಹೇಳಿರುವುದು ಈ ಮಾತಿಗೆ ನಿದರ್ಶನವೆನ್ನುವಂತಿದೆ.

# ಸರಳತೆಯ ಸಾಕಾರ

● ಶ್ರೀರಾಮ ಇಟ್ಟಣ್ಣವರ

೧೯೯೦ ರಲ್ಲಿ ನನ್ನ 'ಜಾನಪದ ಪಶುವೈದ್ಯ: ಬೀಳಗಿ ಸಿದ್ದಪ್ಪ' ಪುಸ್ತಕ ಪ್ರಕಟವಾಯಿತು. ಬೀಳಗಿಯ ಜನ ಪುಸ್ತಕ ಬಿಡುಗಡೆ ಸಮಾರಂಭವನ್ನು ಗದುಗಿನ ತೋಂಟದಾರ್ಯ ಮಠದ ಶ್ರೀ ಸಿದ್ಧಲಿಂಗ ಸ್ವಾಮೀಜಿಯವರ ಸಾನ್ನಿಧ್ಯದಲ್ಲಿ ಜರುಗಿಸಬೇಕೆಂದು ಆಶಿಸಿದರು. ಎಪ್ಪತ್ತೈದು ಪುಟಗಳ ಚಿಕ್ಕ ಪುಸ್ತಕ ಅದು. ಬಿಡುಗಡೆ ಸಮಾರಂಭಕ್ಕೆ ಬರುತ್ತಾರೋ ಇಲ್ಲವೋ ಎಂಬ ಅನುಮಾನ ನನ್ನದು. ಆದರೂ ಬೀಳಗಿಯ ಒಂದಿಬ್ಬರು ಹಿರಿಯರನ್ನು ಕರೆದುಕೊಂಡು ಸ್ವಾಮೀಜಿವರಲ್ಲಿಗೆ ಹೋಗಿ ಸಂದರ್ಭವನ್ನು ವಿವರಿಸಿ ಬರಬೇಕೆಂದು ವಿನಂತಿಸಿಕೊಂಡೆ, ಸಂಗಡ ಪುಸ್ತಕ ಒಯ್ದಿದ್ದೆ ಪುಸ್ತಕವನ್ನು ಒಂದೈದು ನಿಮಿಷ ತಿರುವಿಹಾಕಿ 'ಬರುತ್ತೇನೆ' ಅಂದರು. ಮಾತು ಮುಂದುವರಿಸಿ "ಇಂಥ ಕೆಲಸಗಳಾಗಬೇಕು ನಮ್ಮ ಜನಪದರು ತುಂಬ ಬುದ್ಧಿವಂತರು. ಪರಂಪರಾಗತ ಜ್ಞಾನವನ್ನು ತಲೆಮಾರುಗಳಿಂದ ಮುಂದುವರಿಸಿಕೊಂಡು ಬಂದಿರುತ್ತಾರೆ. ಆದರೆ ಅದನ್ನು ನಿರಕ್ಷರಿಗಳಾದ ಅವರು ಬರೆದಿಡಲು ಅಸಹಾಯಕರು. ಮೇಲಾಗಿ ತಮ್ಮ ಜ್ಞಾನವನ್ನು ತಾವೇ ಅರಿಯಲಾರದ ಮುಗ್ಧರು. ಇಂತಹ ವೈದ್ಯರನ್ನು, ಇಂತಹ ಕಲಾವಿದರನ್ನು ಪುಸ್ತಕಗಳ ರೂಪದಲ್ಲಿ ಉಳಿಸಿಕೊಳ್ಳುವುದು ನಮ್ಮ ಜವಾಬ್ದಾರಿ... ಅಡ್ಡಿಯಿಲ್ಲ, ನಾನು ಕಾರ್ಯಕ್ರಮಕ್ಕೆ ಬರುತ್ತೇನೆ" ಎಂದು ಡೈರಿ ತರಿಸಿಕೊಂಡು ದಿನಾಂಕ ನಿಗದಿಪಡಿಸಿದರು. ಒಪ್ಪಿಕೊಂಡಂತೆ ಕಾರ್ಯಕ್ರಮಕ್ಕೆ ಬಂದು ದೇಸಿ ಪರಂಪರೆಯನ್ನು ಉಳಿಸಿಕೊಳ್ಳುವ ಕುರಿತಾಗಿ ಮಾತನಾಡಿ ಸಿದ್ದಪ್ಪಜ್ಜನನ್ನು ಸನ್ಮಾನಿಸಿದರು.

೧೯೯೧ ರಲ್ಲಿ ನಾನು ನನ್ನ ಪಿಎಚ್.ಡಿ ಗ್ರಂಥ "ಶ್ರೀಕೃಷ್ಣಪಾರಿಜಾತ–ಒಂದು ಅಧ್ಯಯನ" ವನ್ನು ಪ್ರಕಟಿಸುವ ಉದ್ದೇಶದಿಂದ ಗದಗಿಗೆ ಹೋಗಿ ಒಂದು ಲಾಜಿಂಗಿನಲ್ಲಿ ಉಳಿದುಕೊಂಡು ಮರುದಿನ ಸ್ವಾಮೀಜಿಯವರನ್ನು ಭೆಟ್ಟಿಯಾದೆ. ಅವರು ಗದುಗಿಗೆ ಬಂದ ನನ್ನ ಉದ್ದೇಶವನ್ನು ಕೇಳಿಕೊಂಡಾದ ಮೇಲೆ "ಲಾಜಿಂಗಿನಲ್ಲೇಕೆ ಉಳಿದುಕೊಂಡಿರಿ? ಪುಸ್ತಕ ಪ್ರಕಟಣೆ ಮುಗಿಯುವವರೆಗೆ ಮಠದಲ್ಲೇ ಉಳಿದುಕೊಳ್ಳಿ. ಮುಂದೂ ಕೂಡ ನಿಮ್ಮ ಯಾವ ಪುಸ್ತಕ ಪ್ರಕಟಿಸುವದಿದ್ದರೂ ಮಠದಲ್ಲೇ ಉಳಿದುಕೊಳ್ಳಿ. ಮಠಗಳಿರುವುದೇ ನಿಮ್ಮಂಥವರಿಗಾಗಿ", ಎಂದು ಹೇಳಿ ಮುಂದೆ ಮಾತನಾಡಲು ಅವಕಾಶ ಕೊಡದೆ ತಮ್ಮ ಮಠದ ಶಿಷ್ಯರೊಬ್ಬರನ್ನು ಕರೆದು "ಇವರು ಪುಸ್ತಕ ಪ್ರಕಟಣೆಗೆ ಬಂದಿದ್ದಾರೆ. ಅದು ಮುಗಿಯುವವರೆಗೆ ಮಠದಲ್ಲೇ ಇರುತ್ತಾರೆ. ಅವರ ಊಟ, ವಸತಿ ಮುಂತಾಗಿ ಎಲ್ಲ ವ್ಯವಸ್ಥೆಯನ್ನು ಮಾಡು" ಅಂದ್ರು.

ಆವಾಗಿನಿಂದ ನನ್ನಲ್ಲಿ ಸ್ವಾಮೀಜಿಯವರ ಬಗೆಗೆ ಆದರ ಬೆಳೆಯಿತು. ನನ್ನ ಮುಂದಿನ ಪ್ರಕಟಣೆಗಳಿಗೆ ಗದಗಿಗೆ ಹೋದಾಗಲೆಲ್ಲ ಮಠದಲ್ಲೇ ಉಳಿದುಕೊಂಡು ಪ್ರಕಟಣೆ ಕಾಯಕ ಪೂರೈಸಿದೆ. ನಾನಷ್ಟೇ ಅಲ್ಲ, ಬೀಳಗಿಯ ಸಾಂಸ್ಕೃತಿಕ ಸಾಹಿತ್ಯಿಕ ಸಮಾರಂಭಗಳ ಸಂದರ್ಭಗಳಲ್ಲಿ ಹೊರತರುವ ಆಕರಗ್ರಂಥ, ಸ್ಮರಣಸಂಚಿಕೆಗಳ ಪ್ರಕಟಣೆಯ ವೇಳೆಯಲ್ಲಿ ಯಾರೇ ಹೋದರು ಮಠದಲ್ಲೇ ಉಳಿದುಕೊಳ್ಳಲು ವ್ಯವಸ್ಥೆ ಮಾಡಿದ್ದುಂಟು.

ಬೀಳಗಿಯ ಜನ ಸಮಾರಂಭಗಳಿಗೆ ಯಾವಾಗ ಕರೆದರೂ ಸ್ವಾಮೀಜಿಯವರು ಒಲ್ಲೆ ಅಂದಿಲ್ಲ. ಸಿದ್ದಪ್ಪಜ್ಜನ ಪುಸ್ತಕ ಬಿಡುಗಡೆಯಲ್ಲದೆ ಶ್ರೀ ಸಿದ್ಧೇಶ್ವರ ಸುಪ್ರಭಾತ ಕ್ಯಾಸೆಟ್ ಬಿಡುಗಡೆ, ಬೀಳಗಿಯಲ್ಲಿ ಜರುಗಿದ ಪ್ರಥಮ ಜಿಲ್ಲಾ ಸಾಹಿತ್ಯ ಸಮ್ಮೇಳನ ಮುಂತಾದ ಕಾರ್ಯಕ್ರಮಗಳಿಗೆ ಮತ್ತೆ ಮತ್ತೆ ಬಂದು ಬೀಳಗಿ ಜನರನ್ನು ಸಂತೋಷಗೊಳಿಸಿದ್ದಾರೆ.

ಜಾನಪದ ಪ್ರತಿಭಾವಂತರ ಹಾಗೂ ಸಾಹಿತಿಗಳ ಬಗೆಗೆ ಸ್ವಾಮೀಜಿಯವರು ಎಷ್ಟೊಂದು ಪ್ರೀತಿಯಿಟ್ಟುಕೊಂಡಿದ್ದರೆಂಬುದು ನಾಡಿಗೆಲ್ಲಾ ಗೊತ್ತು. ವಿಶೇಷವಾಗಿ ಮೌಖಿಕ ಪರಂಪರೆಯ ಪ್ರತಿಭಾವಂತರು ಮರೆಯಲ್ಲಿಯೇ ಉಳಿದು ಕಳೆದು ಹೋಗಬಾರದು; ಅವರೆಲ್ಲ ಒಂದೊಂದು ಮಾದರಿಯಾಗಿ ಅಕ್ಷರ ರೂಪದಲ್ಲಿ ಉಳಿದು ಮುಂದಿನ ಜನಾಂಗವನ್ನು ಸಾಂಸ್ಕೃತಿಕವಾಗಿ ರೂಪಿಸಬೇಕು ಎಂಬ ಹಂಬಲ ಸ್ವಾಮೀಜಿಯವರದಾಗಿತ್ತು. ಈ ಹಂಬಲ ತೋಂಟದಾರ್ಯ ಮಠದಿಂದ ಪ್ರಕಟಗೊಂಡ ಅಪಾರ ಗ್ರಂಥರಾಶಿಯಲ್ಲಿ ಸಾಕಾರಗೊಂಡಿರುವುದನ್ನು ನೋಡಬಹುದು.

ಪಾರಿಜಾತ ಗಾಂಧಿನಗರ, ಬೀಳಗಿ ಜಿ. ಬಾಗಲಕೋಟ ಮೊ–೯೮೮೬೬೧೯೯೬೦

ನನ್ನ ಪುಸ್ತಕಗಳಲ್ಲಿ ವಿವರಗೊಂಡ ಕೌಜಲಗಿ ನಿಂಗವ್ವ ಮತ್ತು ಬೀಳಗಿಯ ಸಿದ್ದಪ್ಪಜ್ಜರ ವ್ಯಕ್ತಿತ್ವ ಅವರ ಮನಸ್ಸಿನಲ್ಲಿ ಬೇರೂರಿದ್ದವು. ಅವರೊಂದಿಗೆ ನಾನು ವೇದಿಕೆ ಹಂಚಿಕೊಂಡ ಸಂದರ್ಭಗಳಲ್ಲೆಲ್ಲ ಪಾರಿಜಾತ ಪರಂಪರೆಯ ಸಾಮ್ರಾಜ್ಞೆ ಕೌಜಲಗಿ ನಿಂಗವ್ವನ ರಂಗಸೇವೆಯನ್ನು ತಪ್ಪದೇ ಸ್ಮರಿಸುತ್ತಿದ್ದರು. ನೂರು ವರುಷಗಳ ಹಿಂದೆ ಪರಿಶಿಷ್ಟ ಸಮುದಾಯಕ್ಕೆ ಸೇರಿದ ಹೆಣ್ಣುಮಗಳೊಬ್ಬಳು ತನ್ನ ಕೊನೆಯ ದಿನಗಳವರೆಗೆ ಶ್ರೀಕೃಷ್ಣ ಪಾರಿಜಾತದ ಉನ್ನತಿಗಾಗಿ ಶ್ರಮಿಸಿದಳೆಂಬುದು ಚರಿತ್ರಾರ್ಹ ವಿಷಯವೆಂದು ಬಣ್ಣಿಸುತ್ತಿದ್ದರು. ಹಾಗೇ ಸಿದ್ದಪ್ಪಜ್ಜನ ವಿಷಯವನ್ನು ಸ್ಮರಿಸಿಕೊಂಡು ಯಾವ ಫಲಾಪೇಕ್ಷೆಯಿಲ್ಲದೆ ಜಾನುವಾರುಗಳನ್ನು ಉಪಚರಿಸಿದ ರೀತಿಯುನ್ನು ಕೊಂಡಾಡುತ್ತಿದ್ದರು. ವಿಶೇಷವಾಗಿ ಮೇವು ತಿನ್ನಲಾರದ ಎತ್ತಿನ ಕೋಡಿನಲ್ಲಿ ಸೇರಿಕೊಂಡಿದ್ದ ತೊಗರಿಕಟ್ಟಿಗೆಯುನ್ನು ಕೋಡುಕೊಯ್ದು ಪತ್ತೆ ಹಚ್ಚಿದ ಅವನ ವೈದ್ಯ ಜ್ಞಾನವನ್ನು ತಪ್ಪದೆ ವಿವರಿಸುತ್ತಿದ್ದರು. ಹೀಗೆ ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳ ಮಾತು ಬಹಳಷ್ಟು ಸಲ ಜನಸಾಮಾನ್ಯರನ್ನೇ ಕೇಂದ್ರವಾಗಿಸಿಕೊಂಡು ಆ ವಲಯದಲ್ಲೇ ಸಂತೃಪ್ತಿ ಪಡೆಯುತ್ತಿತ್ತು. ಎಲ್ಲ ಕಾಲಕ್ಕೂ ನಾಡಿನ ಸಂಸ್ಕೃತಿ ರೂಪಿಸುವಲ್ಲಿ ಜನಸಾಮಾನ್ಯರದೇ ಸಿಂಹಪಾಲಾಗಿ ತೋರುತ್ತದೆ. ಇದನ್ನು ತುಂಬಾ ಶ್ರದ್ಧಾಪೂರ್ವಕವಾಗಿ ನಂಬಿದ್ದ ಶ್ರೀಗಳು ಆ ದಾರಿಯಲ್ಲಿ ಹಲವು ವಿಧಾಯಕ ಕಾರ್ಯಕ್ರಮಗಳನ್ನು ಹಾಕಿಕೊಂಡು ವರ್ತಮಾನಕ್ಕೆ ಅನ್ವಯಿಸುವಂತೆ ಶ್ರಮಿಸಿದ್ದು ಅವರು ಹೇಗೆಲ್ಲ ಶ್ರೀಮಠದ ಮೂಲಕ ಪ್ರಜಾಪ್ರಭುತ್ವದ ಮಾದರಿಗಳನ್ನು ಸಮೀಕರಿಸಿದರು ಎಂಬುದನ್ನೇ ಹೇಳುತ್ತದೆ.

ಸಾಹಿತ್ಯ ಕ್ಷೇತ್ರದ ಕೃತಿ–ಕರ್ತೃಗಳ ವಿಷಯದಲ್ಲಿ ಸ್ವಾಮೀಜಿಯವರಿಗೆ ಅಪಾರ ಕುತೂಹಲವಿತ್ತು. ಯಾರಾದರೂ ಸಾಹಿತಿಗಳು/ಸಂಶೋಧಕರು ಬಂದು ಕೃತಿಯ ಬಗೆಗೆ ಅವರೆದುರು ವಿಷಯವೆತ್ತಿಕೊಂಡು ಮಾತನಾಡುತ್ತಿದ್ದರೆ ತಾಸುಗಟ್ಟಲೆ ಅವರೊಂದಿಗೆ ಸಂಭಾಷಿಸುತ್ತಿದ್ದರು. ತಮ್ಮ ಸಂದೇಹಗಳನ್ನು ಅವರೊಂದಿಗೆ ಚರ್ಚಿಸಿ ಅವುಗಳಿಗೆ ಪರಿಹಾರ ಕಂಡುಕೊಳ್ಳಲು ಯತ್ನಿಸುತ್ತಿದ್ದರು. ನಾನು ಗಂಗಾಧರ ಜಾಧವ ವಿರಚಿತ 'ಫಕೀರೇಶ್ವರ ಪುರಾಣ'ವನ್ನು ಸಂಪಾದಿಸಿದೆ. ಆ ಸಂದರ್ಭದಲ್ಲಿ ಗಂಗಾಧರ ಕವಿಯ ಜೀವನಕ್ಕೆ ಸಂಬಂಧಿಸಿದಂತೆ ವಿಷಯ ಸಂಗ್ರಹಿಸಬೇಕಾಗಿತ್ತು. ಮೂಲತಃ ಮಿಶ್ರಕೋಟಿಯ ಗಂಗಾಧರ ಕವಿ ಸೊರಟೂರಿನಲ್ಲಿ ಹೆಡ್‌ಮಾಸ್ತರರಾಗಿ ಸೇವೆಸಲ್ಲಿಸಿದ್ದು ಅವನ ಕೃತಿಯಿಂದ ಸ್ಪಷ್ಟಗೊಳ್ಳುತ್ತದೆ. ಬದುಕಿನ ಕೊನೆಯ ಭಾಗವನ್ನು ಹಾವೇರಿಯಲ್ಲಿ ಕಳೆದನೆಂಬುದೂ ಬೇರೊಂದು ಮೂಲದಿಂದ ತಿಳಿದುಬರುತ್ತದೆ. ಇಷ್ಟಲ್ಲದೆ ಕವಿಯು ಬೇರೆ ಗ್ರಂಥಗಳನ್ನೇನಾದರೂ ಬರೆದಿದ್ದಾನೆಯೇ? ಮಿಶ್ರಿಕೋಟಿ ಅಥವಾ ಸೊರಟೂರಿನಲ್ಲಿ ಕವಿಯ ವಂಶಸ್ಥರಾರಾದರೂ ಇದ್ದಾರೆಯೇ? ಎಂಬ ವಿಷಯಗಳಲ್ಲಿ ಕುತೂಹಲ ಮೂಡಿ ಅದೇ ಭಾಗದ ತೋಂಟದ ಶ್ರೀಗಳಿಂದ ಈ ಸಂಬಂಧವಾಗಿ ಏನಾದರೂ ಮಾಹಿತಿ ದೊರೆಯಬಹುದೆಂಬ ಆಸೆಯಿಂದ ಗದುಗಿಗೆ ಹೋದೆ. ವಿಷಯವನ್ನು ನಾನು ಶ್ರೀಗಳಿಗೆ ವಿವರಿಸಿದ ಮೇಲೆ ಈ ವಿಷಯವಾಗಿ ತಮಗೇನೂ ತಿಳಿದಿಲ್ಲವೆಂದು ಹೇಳಿ ಕಲಬುರ್ಗಿ ಸರ್‌ಗೆ ಏನಾದರೂ ಗೊತ್ತಿದೆಯೇ ವಿಚಾರಿಸೋಣ ಎಂದು ಆ ಕೂಡಲೇ ಫೋನ್ ಮಾಡಿದರು. ಕಲಬುರ್ಗಿ ಗುರುಗಳು ಗಂಗಾಧರ ಕವಿಯ ಬಗೆಗೆ ತಮಗೇನೂ ತಿಳಿದಿಲ್ಲ ಎಂಬುದನ್ನು ಸ್ಪಷ್ಟಪಡಿಸಿ ಆ ಕವಿಯ ಊರಿಗೇ ಹೋಗಿ ವಿಷಯ ಸಂಗ್ರಹಿಸುವುದೊಳಿತು ಎಂದರು. ಕ್ಷೇತ್ರಕಾರ್ಯದ ಯಾವುದೇ ಪೂರ್ವಸಿದ್ಧತೆಯಿಲ್ಲದೆ ಹೋಗಿದ್ದ ನಾನು ಇನ್ನೊಂದು ವಾರಬಿಟ್ಟು ಬಂದು ಆ ಭಾಗದಲ್ಲಿ ಕ್ಷೇತ್ರಕಾರ್ಯ ಮಾಡುತ್ತೇನೆಂದು ಸ್ವಾಮೀಜಿಯವರಿಗೆ ಹೇಳಿದೆ. ಸ್ವಾಮೀಜಿಯವರು ಇದಕ್ಕೆ ಅವಕಾಶ ಕೊಡದೆ "ನಾಳೆಯೇ ಮಿಶ್ರಿಕೋಟೆ, ಸೊರಟೂರಿಗೆ ಹೋಗಿಬನ್ನಿ ಸಾಧ್ಯವಾದರೆ ಹಾವೇರಿಗೂ ಹೋಗಿ" ಎಂದರು. ನಾನು ಅನುಮಾನಿಸಿದೆ. ಸ್ವಾಮೀಜಿಯವರು "ಏನು ಅನುಮಾನ? ನೀವು ಬಸ್ಸಿನಲ್ಲಿ ಅಡ್ಡಾಡುವುದಾದರೆ ೨–೩ ದಿನ ಬೇಕು. ಮಠದ ಕಾರು ತೆಗೆದುಕೊಳ್ಳಿ ನಿಮ್ಮ ಶಿಷ್ಯ ಅಂಗಡಿ ಮಲ್ಲಿಕಾರ್ಜುನ ನಿಮ್ಮ ಸಂಗಡವಿರುತ್ತಾನೆ" ಎಂದು ಎಲ್ಲ ವ್ಯವಸ್ಥೆ ಮಾಡಿಕೊಟ್ಟರು. ಮರುದಿನವೇ ಮಲ್ಲಿಕಾರ್ಜುನನೊಂದಿಗೆ ಮಿಶ್ರಿಕೋಟೆ, ಸೊರಟೂರು, ಹಾವೇರಿಗಳಿಗೆ ಹೋಗಿ ಕ್ಷೇತ್ರಕಾರ್ಯ ಪೂರೈಸಿಕೊಂಡು ಬಂದೆ. ಒಂದು ಕಾಲಕ್ಕೆ ಬಸ್ಸು, ಟೆಂಪೋ, ಟ್ರಕ್ಕು ಕಾಲ್ನಡಿಗೆಗಳ ಮುಖಾಂತರ ಕ್ಷೇತ್ರಕಾರ್ಯ ಮಾಡಿದ್ದ ನಾನು ಮೊದಲ ಬಾರಿಗೆ ಕಾರಿನಲ್ಲಿ ಕುಳಿತುಕೊಂಡು ನಿಗದಿತ ಊರುಗಳಿಗೆ ಹೋಗಿ ಒಂದೇ ದಿನದಲ್ಲಿ ಕ್ಷೇತ್ರಕಾರ್ಯ ಮುಗಿಸಿಕೊಂಡು ಬಂದೆ. ಇದು ಪೂಜ್ಯ ತೋಂಟದ ಶ್ರೀಸಿದ್ಧಲಿಂಗ ಮಹಾಸ್ವಾಮಿಗಳು ಲೇಖಕರನ್ನು ಉತ್ತೇಜಿಸುತ್ತಿದ್ದ ಬಗೆ. ಕ್ಷೇತ್ರಕಾರ್ಯವೆಂಬುದು ಎಷ್ಟು ಶ್ರಮದಾಯಕ, ಕ್ಷೇತ್ರಕಾರ್ಯದ ಫಲಿತಗಳು ಅಧ್ಯಯನದ ಸಂದರ್ಭದಲ್ಲಿ ಎಂಥ ನಿರ್ಣಾಯಕ ಪಾತ್ರವಹಿಸುತ್ತವೆ ಎರಡನ್ನೂ ಸ್ವಾಮೀಜಿಯವರು ಬಲ್ಲವರಾಗಿದ್ದರು.

ಬೆಳಗಾವಿಯ ನಾಗನೂರು ರುದ್ರಾಕ್ಷಿಮಠದ ಶ್ರೀ ಸಿದ್ಧರಾಮ ಸ್ವಾಮೀಜಿಯವರ ಓದು, ವ್ಯಕ್ತಿತ್ವದ ಬಗೆಗೆ ತೋಂಟದ ಸಿದ್ಧಲಿಂಗ ಸ್ವಾಮೀಜಿಯವರಿಗೆ ಅಪಾರವಾದ ಅಭಿಮಾನವಿತ್ತು. ಒಮ್ಮೆ ಬೀಳಗಿಯಲ್ಲಿ ಶ್ರೀ ಸಿದ್ಧೇಶ್ವರ ಸುಪ್ರಭಾತ ಕ್ಯಾಸೆಟ್ ಬಿಡುಗಡೆಗೆ ಬಂದಾಗ ಹೇಳಿದ ಮಾತು: "ಬೆಳಗಾವಿ–

ನಾಗನೂರು ಮಠದ ಸಿದ್ಧರಾಮ ಸ್ವಾಮಿಗಳೆಂದರೆ ಬಸವಣ್ಣನವರ ಸಂತತಿ ಶ್ರೇಷ್ಠರು". ನಾನು ಗದುಗಿಗೆ ಹೋದಾಗಲೆಲ್ಲ ಸಿದ್ಧರಾಮ ಸ್ವಾಮಿಗಳ ಬಗೆಗೆ ಹೇಳುತ್ತಿದ್ದ ಮಾತು "ನಿಮ್ಮ ಸ್ವಾಮಿಗಳು ಬಹಳ ಓದಿಕೊಂಡಾರ", ಶ್ರೀ ಸಿದ್ಧರಾಮ ಸ್ವಾಮಿಗಳ ವ್ಯಕ್ತಿತ್ವದ ಮೇಲೆ ಅಪಾರ ವಿಶ್ವಾಸವಿರಿಸಿಕೊಂಡಿದ್ದ ಸ್ವಾಮೀಜಿಯವರು ಅವರ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರವಹಿಸಿದವರು. ತಮ್ಮ ನಿರೀಕ್ಷೆಯಂತೆಯೇ ಸಿದ್ಧರಾಮ ಸ್ವಾಮಿಗಳು ಬೆಳೆಯುತ್ತ ಬಂದದ್ದರಿಂದ ಸಂತೋಷಗೊಂಡರು. ಸಿದ್ಧರಾಮ ಸ್ವಾಮಿಗಳ ಪಾಲಿಗೆ ಸಿದ್ಧಲಿಂಗ ಶ್ರೀಗಳು ಮಾತೃ ಹೃದಯದ ರೂಪಕವಾಗಿದ್ದರು.

ನಾನು ಯಾವಾಗ ಎಲ್ಲಿ ಭೇಟಿಯಾದರೂ ಶ್ರೀಗಳು ಕೇಳುತ್ತಿದ್ದ ಮೊದಲ ಪ್ರಶ್ನೆ "ಈಗೇನು ಬರೆಯುತ್ತಿದ್ದೀರಿ?" ನಾನು ಆಗಿನ ಬರವಣಿಗೆ ವಿವರಿಸಿದಾಗೆಲ್ಲ ಮೊದಲು ಶಾಂತವಾಗಿ ಕೇಳುತ್ತಿದ್ದರು. ತರುವಾಯ ತಮ್ಮದೇ ಆದ ಸಂದೇಹಗಳನ್ನು ಪ್ರಸ್ತಾಪಿಸುತ್ತಿದ್ದರು. ಪೂರಕ ವಿಷಯಗಳನ್ನು ಸೇರಿಸುತ್ತಿದ್ದರು. ಅದೆಲ್ಲ ಮುಗಿದ ಮೇಲೆ "ಸರೋಜಕ್ಕ ಆರಾಮ ಅದಾರಲ್ಲ?" ಎಂದು ಪ್ರೀತಿ ಪೂರ್ವಕ ವಿಚಾರಿಸುತ್ತಿದ್ದರು. ಮಕ್ಕಳ ವಿದ್ಯಾಭ್ಯಾಸ ಉದ್ಯೋಗದ ಬಗೆಗೆ ಕೇಳಿ ಸಂತೋಷಪಡುತ್ತಿದ್ದರು. ನನ್ನ ಮಗ ನಿರಂಜನ ಒಂದಿಷ್ಟು ದಪ್ಪಗಿದ್ದಾನೆ. ಒಮ್ಮೆ ನಾವೆಲ್ಲ ಕುಟುಂಬ ಸಹಿತ ಹೋದಾಗ ನಿರಂಜನನಿಗೆ "ನೀನೂ ನನ್ನಂಗ ದಪ್ಪ ಅದಿಯಲ್ಲ" ಎಂದು ಚೇಷ್ಟೆ ಮಾಡಿ ಬಸವಣ್ಣನ ಕಂಚಿನ ಮೂರ್ತಿಯನ್ನು ಆಶೀರ್ವಾದ ರೂಪದಲ್ಲಿ ಕೊಟ್ಟರು.

ಸ್ವಾಮಿಗಳು ನನ್ನ ಮೇಲೆ, ನನ್ನ ಕುಟುಂಬದ ಮೇಲೆ ಇಷ್ಟೆಲ್ಲ ಮಮತೆ ಇರಿಸಿಕೊಂಡಿದ್ದರೂ ನಾನು ಅವರ ಮಾತೊಂದನ್ನು ನಡೆಸಿಕೊಡಲಿಲ್ಲ ಎಂಬ ಕೊರಗು ಮಾತ್ರ ನನ್ನಲ್ಲಿ ಉಳಿದುಬಿಟ್ಟಿದೆ. ೨೦೧೫ ಡಿಸೆಂಬರ ಇರಬಹುದು. ತೋಂಟದಾರ್ಯ ಮಠದ ಕಾರ್ಯಾಲಯದಿಂದ ಶಿವನಗೌಡರು ಒಂದು ದಿನ ಪೋನ್ ಮಾಡಿ "ಶ್ರೀಮಠದಿಂದ ವೈದ್ಯರೊಬ್ಬರಿಗೆ ಸಂಬಂಧಿಸಿದ ಅಭಿನಂದನ ಗ್ರಂಥವೊಂದನ್ನು ತರಬೇಕಾಗಿದೆ ನೀವೇ ಅದರ ಪ್ರಧಾನ ಸಂಪಾದಕತ್ವವನ್ನು ವಹಿಸಿಕೊಳ್ಳಬೇಕು. ಇದು ಸ್ವಾಮೀಜಿಯವರ ಇಚ್ಛೆ" ಎಂದರು. ಆ ಸಂದರ್ಭದಲ್ಲಿ ನನಗೆ ಸಣ್ಣದೊಂದು ಆಕ್ಸಿಡೆಂಟ್ ಆಗಿ ಬೆನ್ನುಹುರಿಯಲ್ಲಿ ನರದೋಷ (ಲಂಬಾರ) ಉಂಟಾಗಿ ನನ್ನ ಎರಡು ಕಾಲು ಅಶಕ್ತಗೊಂಡು ನಡೆದಾಡುವುದು ಕಷ್ಟವಾಗಿತ್ತು. ಹೀಗಾಗಿ ನಾನು ಸ್ವಾಮೀಜಿಯವರ ಕೇಳಿಕೆಯನ್ನು ಒಪ್ಪಿಕೊಳ್ಳಲು ಅಸಹಾಯಕನಾದೆ. ಒಮ್ಮೆ ಒಪ್ಪಿಕೊಂಡಾದ ಮೇಲೆ ಅದನ್ನು ಪೂರ್ಣಗೊಳಿಸಬೇಕು. ಆದರೆ ನನ್ನ ಆಗಿನ ಪರಿಸ್ಥಿತಿ ವ್ಯತಿರಿಕ್ತವಾಗಿತ್ತು. ಶಿವನಗೌಡರು ಸಾಕಷ್ಟು ಒತ್ತಾಯಿಸಿದರು. ಆದರೆ ಆಗ ಅವರ ಕೇಳಿಕೆಯನ್ನು ಮನ್ನಿಸುವ ಸ್ಥಿತಿಯಲ್ಲಿ ನಾನಿರಲಿಲ್ಲ. ಶಿವನಗೌಡರ ಕಾರ್ಯತತ್ಪರತೆ, ಮಠ ನಿಷ್ಠೆಗಳನ್ನು ಮೊದಲಿನಿಂದಲೂ ಗೌರವಿಸುತ್ತ ಬಂದವನು ನಾನು. ನನ್ನ ಈ ಅಸಹಾಯಕತೆ ಅವರಿಗೂ ನಿರಾಶೆಯನ್ನುಂಟು ಮಾಡಿರಲು ಸಾಕು. ಸ್ವಾಮೀಜಿಯವರಿಗೆ ನನ್ನ ಅಸಹಾಯಕತೆಯನ್ನು ಪತ್ರಮುಖೇನ ತಿಳಿಸಿದೆ. ಸ್ವಾಮೀಜಿಯವರು ನನ್ನ ನಿರಾಕರಣೆಯನ್ನು ಹೇಗೆ ಸ್ವೀಕರಿಸುತ್ತಾರೋ ಎಂಬ ಅಳುಕು ನನ್ನನ್ನು ಬಾಧಿಸತೊಡಗಿತು. ಸುಮಾರು ಒಂದು ವಾರದ ತರುವಾಯ ಸ್ವಾಮೀಜಿಯವರಿಂದ ಪತ್ರ ಬಂತು. "ನಿಮಗೆ ಬೆನ್ನುಹುರಿಯಲ್ಲಿ ತೊಂದರೆಯಾಗಿರುವುದನ್ನು ಕೇಳಿ ವಿಷಾದವೆನಿಸಿತು. ವಿಶ್ರಾಂತಿ ತೆಗೆದುಕೊಳ್ಳಿರಿ. ಆರೋಗ್ಯಕ್ಕಿಂತ ಯಾವುದೂ ಮುಖ್ಯವಲ್ಲ." ಸ್ವಾಮೀಜಿಯವರ ಪತ್ರದಿಂದ ನನಗೆ ಎಷ್ಟೋ ಸಮಾಧಾನವಾಯಿತು.

ಇಷ್ಟೆಲ್ಲ ಘಟನೆ ನಡೆದು ೨-೩ ತಿಂಗಳಾಗಿರಬಹುದು. ಒಂದು ದಿನ "ಸ್ವಾಮೀಜಿಯವರು ನಿಮ್ಮಲ್ಲಿಗೆ ಬರುತ್ತಿದ್ದಾರೆ" ಎಂದು ಮಲ್ಲಿಕಾರ್ಜುನ ಫೋನ್ ಮಾಡಿದ. ಮಧ್ಯಾಹ್ನದ ಹೊತ್ತಿಗೆ ಬೀಳಗಿ ಕಲ್ಮಠದ ಗುರುಪಾದ ದೇವರೊಂದಿಗೆ ಬಂದರು. ತುಂಬ ಅಚಾನಕವಾಗಿ ಬಂದಿದ್ದರೂ ಅವರ ಸರಳತೆಯನ್ನು ಅರಿತಿದ್ದ ನಮಗೆ ಯಾವುದೇ ಗಲಿಬಿಲಿಯಾಗಲಿಲ್ಲ. ಅತ್ಯಂತ ಸರಳವಾಗಿ ಸೋಫಾದ ಮೇಲೆ ಕುಳಿತುಕೊಂಡು "ವಾಸಣ್ಣವರು ತೀರಿಕೊಂಡರಲ್ಲ, ಯಡಹಳ್ಳಿಗೆ ಬಂದಿದ್ದೆ. ನಿಮಗೆ ಆರೋಗ್ಯ ಸರಿಯಿಲ್ಲವೆಂಬುದು ಗೊತ್ತಾಗಿ ಭೆಟ್ಟಿಯಾಗಿ ಹೋಗೋಣವೆಂದು ಬಂದೆ. ಯಾಕೆ ಏನು ತೊಂದರೆಯಾಯಿತು?" ನಾನು ವಿಷಯವನ್ನು ವಿವರಿಸಿದೆ. "ಬಾಳ ಸೊರಗಿದ್ದೀರಿ" ಎಂದರು. ಫಕೀರೇಶ್ವರ ಪುರಾಣದ ಬಗೆಗೆ ಕೇಳಿದರು. ವರ್ತಮಾನ ಸಾಹಿತ್ಯ ಕ್ಷೇತ್ರದ ಆಗುಹೋಗುಗಳನ್ನು ಕುರಿತು ಚರ್ಚಿಸಿದರು. ಸರೋಜ, ನಾನು ಒಂದು ತಾಟಿನಲ್ಲಿ ೩-೪ ಪುಸ್ತಕಗಳನ್ನಿಟ್ಟು ಅದರ ಮೇಲೆ ಒಂದಿಷ್ಟು ಹೂಹಾಕಿ, ಶಾಲು ಹೊದಿಸಿ ಸತ್ಕರಿಸಿದೆವು. ಇಂಥದೊಂದು ಸರಳ ಸತ್ಕಾರ ಅವರಿಗೆ ತೃಪ್ತಿತಂದಿತೆಂಬುದು ಅವರ ಮುಖಭಾವದಿಂದ ತಿಳಿಯುತ್ತಿತ್ತು. ಗುರುಪಾದ ದೇವರನ್ನು ಸನ್ಮಾನಿಸ ಹೋದಾಗ ಅವರು ಸ್ವಾಮೀಜಿಯವರ ಸಂಗಡ ಬಂದಿದ್ದೇನೆ ತನಗೇಕೆ ಇದೆಲ್ಲ ಎಂದು ಅನುಮಾನಿಸಿದಾಗ "ಒಪ್ಪಿಕೊಳ್ಳಿ, ಇವೆಲ್ಲ ಶಿಷ್ಟಾಚಾರ" ಎಂದು ಶ್ರೀಗಳು ಹೇಳಿ ಅವರೂ ಸತ್ಕಾರ ಒಪ್ಪಿಕೊಳ್ಳುವಂತೆ ಮಾಡಿದರು. ಸಿದ್ಧಲಿಂಗ ಸ್ವಾಮಿಗಳು ಸುಮಾರು ಒಂದೂವರೆ ತಾಸು ಆರಾಮವಾಗಿ ಕುಳಿತುಕೊಂಡು ಅತ್ಯಂತ ಸರಳವಾಗಿ ಸಾಹಿತ್ಯ-

ಸಂಸ್ಕೃತಿ ಕುರಿತು ಮಾತಾಡುತ್ತಾ ಹೋದರು. ಹೋಗುವಾಗ "ವಿಶ್ರಾಂತಿ ತೆಗೆದುಕೊಳ್ರಿ, ಬೇರೆ ಏನೂ ಯೋಚನೆ ಮಾಡಬ್ಯಾಡ್ರಿ" ಎಂದರು. ಗೇಟಿನ ಹತ್ತಿರ ನಿಂತು ಅವರನ್ನು ಬೀಳ್ಕೊಟ್ಟೆವು. ಅವರ ಕಾರು ಮರೆಯಾಗುತ್ತಿದ್ದಂತೆ ಮಗಳು ವಿಜು ಹೇಳಿದಳು; "ಎಷ್ಟೊಂದು ಉನ್ನತ ಸ್ಥಾನವಿದ್ದರೂ ಸ್ವಾಮೀಜಿಯವರು ಎಷ್ಟು ಸರಳವಾಗಿ ಬಂದು ಹೋದರು!"

೨೦-೧೦-೨೦೧೮ ರಂದು ಬನ್ನಿಹಬ್ಬದ ಮರುದಿನ ಮಧ್ಯಾಹ್ನ ೧೨ ರ ಸುಮಾರಿಗೆ ನಾನು ಒಳಕೋಣೆಯಲ್ಲಿದ್ದೆ. ಡ್ರಾಯಿಂಗ್ ಹಾಲ್‌ನಲ್ಲಿ ಟಿ. ವಿ. ನೋಡುತ್ತಿದ್ದ ಸರೋಜ ಕೂಗಿದಳು "ಗದಗ ಸ್ವಾಮೀಜಿಯವರು ತೀರಿಕೊಂಡ್ರು!" ನಾನು ಡ್ರಾಯಿಂಗ್ ಹಾಲ್‌ಗೆ ಹೋಗಿ ಟಿ.ವಿ. ಎದುರು ನಿಂತೆ ಸರೋಜಳ ಮಾತು ಸತ್ಯವಾಗಿತ್ತು. ಇದೇ ಟಿ.ವಿ. ಇಟ್ಟಿರುವ ಡ್ರಾಯಿಂಗ್ ಹಾಲ್‌ನಲ್ಲೇ ಸ್ವಾಮಿಗಳು ಸೋಫಾದ ಮೇಲೆ ಸಾಮಾನ್ಯರಂತೆ ಕುಳಿತುಕೊಂಡಿದ್ದು, ತುಂಬ ಆಪ್ತವಾಗಿ ಮಾತುಕತೆಯಾಡಿದ್ದು, ಸಂತೋಷದಿಂದ ಗ್ರಂಥ ಸನ್ಮಾನ ಸ್ವೀಕರಿಸಿದ್ದು ಎಲ್ಲ ನೆನಪಾಯಿತು. ಕೊನೆಗೂ ನಮ್ಮ ಪಾಲಿಗೆ ಉಳಿದುಕೊಳ್ಳುವವು ನೆನಪುಗಳು ಮಾತ್ರ. ಕಾಲ ಯಾರನ್ನೂ ಇರಗೊಡುವುದಿಲ್ಲ.

■■

## ಕಲ್ಯಾಣದ ಹಾದಿಯಲ್ಲಿ; ತೋಂಟದ ಸಿದ್ಧಲಿಂಗ ಪ್ರಭು

ಒಂದು ಮಾತ ಹೇಳದೆ ಹೋದ ಲಿಂಗವೇ
ಬಸವನಲ್ಲಿ ಐಕ್ಯವಾದ ಆತ್ಮಲಿಂಗವೇ

ಇದ್ದ ಹಾಗೇ ಎದ್ದು ಹೋದ ಈ ತೋಂಟದ ಸಿದ್ಧಲಿಂಗ ಸಂತ
ಬೇಗ ಬಾ ಎಂದು ಯಾರು ಕರೆದರೋ ಈ ಮಹಾಂತನ
ಅಲ್ಲಮನಂತೆ ನುಡಿಯುತ, ಬಸವನಂತೆ ನಡೆಯುತ
ಈ ನಾಡಿಗೆಲ್ಲ ತೋರಿಸಿ ನಿನ್ನಂತರಂಗದ ಛಾಯೆ
ಬಿಡಿಸಿದಿ ನಮ್ಮೆಲ್ಲರ ಅಂಧತೆಯ ಮಾಯೆ

ಕಲ್ಯಾಣದ ತುಂಬ ಅಂದು ಅಲ್ಲಮನ ಮದ್ದಳೆಯ ನಾದ
ಈ ನಾಡಿನ ತುಂಬ ಇಂದು ನಿಮ್ಮ ಹೋರಾಟದ ನಿನಾದ
ಕತ್ತಲೆ ತುಂಬಿದ ಮಠದಲ್ಲಿ ಬಸವನ ಬೆಳಕ ತುಂಬಿ
ಜನಮನದಲ್ಲಿ ಜೀವ ಕರುಣೆ ತುಂಬಿದಿ

ನಿಮ್ಮ 'ಶ್ರೀವಾಣಿ' ಮಾತಾಗದೇ ಮುತ್ತಿನ ಹಾರವಾಗಿತ್ತು
ಆಗಾಗದು ವಜ್ರದ 'ಶಲಾಕೆಯು' ಆಗುತ್ತಿತ್ತು !
ಆ ಗೌರಿಶಂಕರ ಶಿಖರದೆತ್ತರಕೆ ಬೆಳೆಯುತ್ತಿತ್ತು
ಕೆಳಗಿಳಿಯದೇ ಅಲ್ಲಿಂದಿಲ್ಲಿಗೆ ಜ್ಯೋತಿಯಾಗಿ ಬೆಳಗುತ್ತಿತ್ತು
ನಿಮ್ಮದು ಅಕ್ಷರದಾಸೋಹದ ಪೀಠ !

ಅನ್ನದಾಸೋಹದ ಮಠ/ನಾಡಿನ ಸಾಹಿತಿ-ಸಂತರ ಕೂಟ
ಸದಾ ವಚನಗಳ ಕಂಠಪಾಠ/ಭಕ್ತರು ನಿಮ್ಮರಿವಿಗೆ ಅರಳಿದ್ದು ದಿಟ

ಮಠಗಿಠಕಿಂತ ಜನಮನ ಒಂದೆಡೆ ಕಟ್ಟುತಾ
ನಾಡ, ನೆಲ, ಜನ ನುಡಿಗಾಗಿ ಟೊಂಕಕಟ್ಟಿನಿಂತು,
ಕಪ್ಪತಗುಡ್ಡದಲ್ಲಿ ಹಸಿರು ಹಾಸಿಗೆ ಹಾಸುವ ತನಕ
ಒಂದೆಡೆ ಕೂಡಲಿಲ್ಲ-ನಿಲ್ಲಲಿಲ್ಲ ಫೋಸ್ಕೋ ಕಂಪನಿ ಓಡುವ ತನಕ
ಅಂದು ನೀವು ಸಿಂದಗಿಯಲ್ಲಿ ಗುಡುಗಿದ ಗುಡುಗು
ಗೋಕಾಕ ಚಳುವಳಿಗೆ ನಾಂದಿಯಾಯಿತು !
ರಾಜಣ್ಣರಂತ ದಿಗ್ಗಜರ ದಂಡೇ ಬೀದಿಗಿಳಿಯಿತು
ಆಳುವ ಅರಸರೆದೆ ಗಡಗಡ ನಡುಗಿತು !
ಜಯವಾಯಿತು ಕನ್ನಡಮ್ಮನ ನುಡಿಗೆ/ಕನ್ನಡಮ್ಮನ ಮುಡಿಗೆ

ಮಠಮಂದಿರ, ಮಸೀದಿ ಚರ್ಚಿನಂಗಳದಲ್ಲಿ
ಜನಮಾನಸದ ಸಂಗದಲ್ಲಿ ಬೆಳಗಿದ ಈ ಆಕಾಶಬುಟ್ಟಿ
ಎಣ್ಣೆ ಇತ್ತು ಬತ್ತಿಯೂ ಇತ್ತು-ಪ್ರಣತಿ ಬೆಳಗುತಲಿತ್ತು !
ಯಾವ ಗಾಳಿ, ಧೂಳಿಗೂ ಅಲುಗಾಡದಂತಿತ್ತು !
ಒಮ್ಮೆಲೆ ಕರ್ಪೂರದಂತ ಕರಗಿ/ಸೇರಿಬಿಟ್ಟಿತು ಶಿವನಬುಟ್ಟಿ !!

**ಶಂಕರ ಬಿ. ಕುಕನೂರ**
ಮುಂಡರಗಿ

# ಅದಮ್ಯ ಚೇತನ

● ಡಾ. ಬಿ. ವ್ಹಿ. ಶಿರೂರ

ಮಠವೆಂದರೆ ಗದುಗಿನ ಶ್ರೀ ಜಗದ್ಗುರು ತೋಂಟದಾರ್ಯಮಠ, ಶ್ರೀಗಳವರೆಂದರೆ ಗದುಗಿನ ತೋಂಟದಾರ್ಯಮಠದ ಪೂಜ್ಯ ಡಾ. ತೋಂಟದ ಸಿದ್ಧಲಿಂಗಮಹಾಸ್ವಾಮಿಗಳು ಎನ್ನುವ ಪ್ರತೀತಿ ಈ ಭಾಗದಲ್ಲಿ ಪ್ರಸಿದ್ಧಿಯಲ್ಲಿದೆ. ಶ್ರೀಗಳು ತಮ್ಮ ಅಮೋಘ ವಾಗ್ಝರಿಯಿಂದ, ಪ್ರಗತಿಪರ ವಿಚಾರಧಾರೆಗಳಿಂದ, ಸಾಹಿತ್ಯ–ಸಂಸ್ಕೃತಿಗಳ ಮೇಲಿನ ಪ್ರೀತಿಯಿಂದ, ಭಕ್ತರನ್ನು ಒಲವಿನಿಂದ ಕಾಣುವ ಕರುಣಾದೃಷ್ಟಿಯಿಂದ ಈ ಭಾಗದ ಭಕ್ತರ ಮನಗೆದ್ದವರಾಗಿದ್ದರು. ಅವರು ೧೯೭೪ರಲ್ಲಿ ೧೯ನೆಯ ಪೀಠಾಧಿಪತಿಗಳಾಗಿ ಬಂದಾಗ ಗದಗಿನ ಶ್ರೀ ತೋಂಟದಾರ್ಯಮಠ ತನ್ನ ಮಹಿಮೆಯನ್ನು ಕಳೆದುಕೊಂಡು, ತನ್ನ ಅಸ್ತಿತ್ವಕ್ಕಾಗಿಯೇ ಹೋರಾಡುವ ಸನ್ನಿವೇಶವುಂಟಾಗಿದ್ದಿತು.

ಮಠದ ಸಮೀಪ ಯಾವೊಬ್ಬ ಭಕ್ತನೂ ಸುಳಿಯದಿದ್ದ ಸನ್ನಿವೇಶದಲ್ಲಿ, ಭಕ್ತನ ಬಳಿಗೇ ಶ್ರೀಮಠವನ್ನು ಕೊಂಡೊಯ್ಯುವ ವಿಚಾರವನ್ನು ಶ್ರೀಗಳವರು ಮಾಡಿ, ಭಕ್ತರು ಮತ್ತು ಶ್ರೀಗಳ ಮಧ್ಯೆ ಅಡ್ಡಗೋಡೆಯಂತಿದ್ದ ಅಡ್ಡಪಲ್ಲಕ್ಕಿ ಉತ್ಸವವನ್ನು ನಿಲ್ಲಿಸಿದರು. ಪಲ್ಲಕ್ಕಿಯಲ್ಲಿ ಶ್ರೀ ಸಿದ್ಧಲಿಂಗರ ಭಾವಚಿತ್ರವನ್ನಿಟ್ಟು, ತಾವು ಕಾಲುನಡಿಗೆಯಲ್ಲಿಯೇ ಭಕ್ತರೊಂದಿಗೆ ಉತ್ಸವದಲ್ಲಿ ಭಾಗವಹಿಸಲು ಹತ್ತಿದ್ದು ಅಂದು ಒಂದು ದೊಡ್ಡ ಕ್ರಾಂತಿಯೇ ಅನ್ನಿಸಿತು. ಶ್ರೀಮಠಕ್ಕೆ ಬರುತ್ತಿದ್ದ ಭಕ್ತರನ್ನು ಕಾಣಲು ಶ್ರೀಗಳಿಗೆ ಇದ್ದ ಎತ್ತರದ ಆಸನವನ್ನು ತೆಗೆಸಿ ಸಾಮಾನ್ಯರೊಂದಿಗೆ ಸಾಮಾನ್ಯರಾಗಿಯೇ ಕುಳಿತುಕೊಳ್ಳಲು ತೊಡಗಿದರು. ಮಠಕ್ಕೆ ಯಾರೇ ಬಂದರೂ ಮೊದಲು ಪ್ರಸಾದ, ಆಮೇಲೆ ಕ್ಷೇಮಸಮಾಚಾರದ ವಿಚಾರ ಪ್ರಾರಂಭವಾಯಿತು. ಹೀಗಾಗಿ ಭಕ್ತರಲ್ಲಿ ‘ಇದು ನಮ್ಮ ಮಠ’ ಎಂಬ ಭಾವನೆ ಬರಹತ್ತಿತು.

ಶ್ರೀಗಳು ಪೀಠಕ್ಕೆ ಬಂದಾಗ ಮಠದ ಆಸ್ತಿಯೆಲ್ಲ ಲೇವಾದೇವಿಯವರ ಪಾಲಾಗಿದ್ದಿತು. ಅವನ್ನೆಲ್ಲ ಶ್ರೀಗಳವರು ಬಹಳ ಸೂಕ್ಷ್ಮವಾಗಿ ವಿಚಾರಿಸಿ, ಜಾಣತನದಿಂದ ಬಗೆಹರಿಸಿ, ತಮ್ಮ ವ್ಯವಹಾರಿಕ ಕೌಶಲವನ್ನು ತೋರಿದರು. ಕೆಲವು ಜನರಿಗೆ ತಿಳಿಹೇಳಿ, ಇನ್ನು ಕೆಲವರಿಗೆ ಅಲ್ಪಸ್ವಲ್ಪ ಹಣ ಕೊಟ್ಟು ಬಿಡಿಸಿಕೊಂಡು, ಅಲ್ಲಿ ಕಲ್ಯಾಣಮಂಟಪ, ಸ್ಕೂಲ ಮೊದಲಾದವನ್ನು ಕಟ್ಟಿಸಿ ಶ್ರೀಮಠದ ಸಂಪತ್ತನ್ನು ಸಮೃದ್ಧಗೊಳಿಸಿದರು.

ಶ್ರೀಗಳು ಪೀಠಕ್ಕೆ ಬಂದ ಒಂದೇ ವರ್ಷದಲ್ಲಿ (೧೯೭೫) ಡಾ. ಕಲಬುರ್ಗಿ ಅವರ ಪ್ರೇರಣೆಯ ಮೇರೆಗೆ ‘ಲಿಂಗಾಯತ ಅಧ್ಯಯನಸಂಸ್ಥೆ’ಯನ್ನು ಹುಟ್ಟುಹಾಕಿ ಲಿಂಗಾಯತ ಪುಣ್ಯಪುರುಷರ ಮಾಲಿಕೆಯನ್ನು ಪ್ರಾರಂಭಿಸಿ, ಇತಿಹಾಸದಲ್ಲಿ ಕಳಚಿಹೋಗಬಹುದಾಗಿದ್ದ ಸುಮಾರು ೨೦೦ ವರ್ಷದ ಲಿಂಗಾಯತ ಇತಿಹಾಸದ ಬೆಸುಗೆಯನ್ನು ಹಾಕಿದರು. ಕರ್ನಾಟಕ ವಿಶ್ವವಿದ್ಯಾಲಯ ತನ್ನ ಪ್ರತಿಷ್ಠೆಯ ವಚನಸಾಹಿತ್ಯ ಪ್ರಕಟಣೆಯ ಯೋಜನೆಯಿಂದ ಕೈಸೋತು ನಿಂತಾಗ ಅದನ್ನು ಕೈಗೆತ್ತಿಕೊಂಡುದು ಶ್ರೀಮಠ. ಅಪ್ರಕಟಿತ ಸುಮಾರು ೬೦ ವಚನ ಗ್ರಂಥಗಳನ್ನು ಪ್ರಕಟಿಸುವ ಮೂಲಕ ವಚನಸಾಹಿತ್ಯ ಪ್ರಕಟಣೆಯಲ್ಲಿ ತನ್ನದೇ ಆದ ಛಾಪನ್ನು ಮೂಡಿಸಿತು. ಅಲ್ಲದೆ ಅಪ್ರಕಟಿತ ಪ್ರಾಚೀನ ಸಾಹಿತ್ಯದಲ್ಲಿ ಮೊಲ್ಲೆಬೊಮ್ಮಯ್ಯಗಳ ಕಾವ್ಯದಂಥ ಚಾರಿತ್ರಿಕ ಮಹತ್ವದ ಕಾವ್ಯವನ್ನೂ, ಲಿಂಗಾಯತ ಅನುವಾದ ಸಾಹಿತ್ಯದ ಮೂಲಕ ಡಾ. ಎಸ್. ಎಂ. ಹುಣಶಾಳರ ಲಿಂಗಾಯತ ಧರ್ಮದ ಮಹತ್ವದ ಕೃತಿಯನ್ನೂ ಪ್ರಕಟಿಸಲಾಯಿತು. ಮಹಾಪ್ರಬಂಧಗಳನ್ನು ಪ್ರಕಟಿಸುವ ಯೋಜನೆಯಿಂದ ವಿಶ್ವವಿದ್ಯಾಲಯ ಪಲಾಯನ ಮಾಡಿದಾಗ ಶ್ರೀಮಠ ಶ್ರೇಷ್ಠ ಹತ್ತಾರು ಮಹಾಪ್ರಬಂಧಗಳನ್ನು ಪ್ರಕಟಿಸಿ ಅವುಗಳ ಮಹತ್ವವನ್ನು ಸಮಾಜಕ್ಕೆ ಒದಗಿಸಿತು. ಉತ್ತರಕರ್ನಾಟಕದಲ್ಲಿ ಪ್ರೊ. ಮಾಳವಾಡ, ಪ್ರೊ. ಭೂಸನೂರಮಠರಂಥ ಹೆಸರಾಂತ ಸಾಹಿತಿಗಳಿದ್ದರೂ ಅವರನ್ನು ಅಭಿನಂದಿಸುವ ಒಂದೂ ಗ್ರಂಥ ಬರದೇಯಿದ್ದಾಗ ಶ್ರೀಗಳು ‘ವ್ಯಾಸಂಗ’, ‘ಗೌರವ’ದಂಥ ಗ್ರಂಥಗಳನ್ನು ಪ್ರಕಟಿಸಿ ಅವರಿಗೆ ಗೌರವ ಸಲ್ಲಿಸಿತು. ಹೀಗೆ ೬೦೦ ಕ್ಕೂ ಮಿಕ್ಕಿ ಗ್ರಂಥಗಳನ್ನು ಪ್ರಕಟಿಸಿ “ಪುಸ್ತಕದ ಸ್ವಾಮಿ”ಗಳೆಂದೇ ಪ್ರಸಿದ್ಧಿ ಪಡೆದರು. ಕನ್ನಡ ಪುಸ್ತಕ ಪ್ರಾಧಿಕಾರವು ‘ಲಿಂಗಾಯತ ಅಧ್ಯಯನಸಂಸ್ಥೆ’ಯನ್ನು ೨೦೧೦ನೆಯ ಸಾಲಿನ ಅತ್ಯುತ್ತಮ ಪ್ರಕಾಶನ ಸಂಸ್ಥೆ ಎಂಬ ಪ್ರಶಸ್ತಿ ನೀಡಿ ಗೌರವಿಸಿತು.

# ೧೩, ಮಂಜುನಾಥ ನಗರ, ಹುಬ್ಬಳ್ಳಿ–೫೮೦೦೩೦ ಮೊ–೯೪೪೮೩೯೪೧೧

ಒಬ್ಬ ಅಶಿಕ್ಷಿತ ಶ್ರೀ ರಾಮಣ್ಣ ಬ್ಯಾಟಿಯಿಂದ ಡಾ. ಅಂಬೇಡ್ಕರ ಪುರಾಣ, ಬುದ್ದ ಪುರಾಣ, ಶ್ರೀ ಬಸವೇಶ್ವರ ಪುರಾಣ ಬರೆಸಿ ಪ್ರಕಟಿಸಿ ತಮ್ಮ ಉದಾರ ಮನೋಭಾವನೆಯನ್ನು ತೋರಿದರು. ಪ್ರತಿವರ್ಷ ಶ್ರೀಮಠದಲ್ಲಿ ಜರಗುವ ಜಾತ್ರಾ ಮಹೋತ್ಸವದ ಮೋಜಿನ ಕವಚವನ್ನು ಕಳಚಿ, ಅದನ್ನು ಸಾಹಿತ್ಯ-ಸಾಂಸ್ಕೃತಿಕ ಮಹೋತ್ಸವವನ್ನಾಗಿ ರೂಪಿಸಿ, ಹಲವಾರು ಮೌಲಿಕ ಪುಸ್ತಕಗಳನ್ನು ಪ್ರಕಟಿಸಿ, ಅವುಗಳ ಬಿಡುಗಡೆಯ ಸಮಾರಂಭ ಏರ್ಪಡಿಸಿ, ಡಾ. ಎಲ್, ಬಸವರಾಜು, ಡಾ. ಜಿ. ಎಸ್. ಶಿವರುದ್ರಪ್ಪ, ಡಾ. ಪ್ರಭುಶಂಕರ, ಪ್ರೊ. ಭೂಸನೂರಮಠ, ಪ್ರೊ. ಸ. ಸ. ಮಾಳವಾಡರಂಥ ಸಾಹಿತ್ಯ ದಿಗ್ಗಜರನ್ನು ಆ ಸಮಯದಲ್ಲಿ ಕರೆಸಿ ಗೌರವಿಸಿದ್ದೂ ಉಂಟು.

ಶ್ರೀಗಳು ಸಾಹಿತ್ಯದಂತೆ ಶಿಕ್ಷಣ ಪ್ರೇಮಿಗಳೂ ಆಗಿದ್ದರು. ೧೯೭೬ರಲ್ಲಿ 'ಶ್ರೀ ಜ. ತೋಂಟದಾರ್ಯ ವಿದ್ಯಾಪೀಠ' ಪ್ರಾರಂಭಿಸಿ, ೧೯೯೩ರಷ್ಟೊತ್ತಿಗೆ ಪ್ರಸಾದ ನಿಲಯಗಳೊಂದಿಗೆ ೮೦ಕ್ಕೂ ಅಧಿಕ ಐಟಿಐ, ಪಾಲಿಟೆಕ್ನಿಕ್, ಇಂಜನಿಯರಿಂಗ ಮೊದಲಾದ ವಿದ್ಯಾಸಂಸ್ಥೆಗಳನ್ನು ಅದೂ ಗ್ರಾಮೀಣ ಭಾಗದಲ್ಲಿ ತೆರೆದು ಆ ಭಾಗದ ಅಭಿವೃದ್ಧಿಗೆ ನಾಂದಿ ಹಾಡಿದರು.

ಶ್ರೀಗಳವರು ಕಲೆ-ಕ್ರೀಡೆಗಳ ಪೋಷಕರೂ ಆಗಿದ್ದರು. ಸಂಗೀತಗಾರರಾದ ಶ್ರೀ ಮಲ್ಲಿಕಾರ್ಜುನ ಮನಸೂರ, ಶ್ರೀ ಬಸವರಾಜ ರಾಜಗುರು, ಸಿದ್ಧರಾಮ ಜಂಬಲದಿನ್ನಿ, ಪುಟ್ಟರಾಜ ಗವಾಯಿ, ಜೋಳದರಾಶಿ ದೊಡ್ಡನಗೌಡರ, ಅರ್ಜುನಸಾ ನಾಕೋಡ, ಬಾಳಪ್ಪ ಹುಕ್ಕೇರಿಯಂಥವರನ್ನು ಶ್ರೀಮಠಕ್ಕೆ ಕರೆಸಿ ಸತ್ಕರಿಸಿದ್ದುಂಟು. ತೊಗಲುಗೊಂಬೆಯಾಟದ ಕಲಾಕಾರರಾದ ಬೆಳಗಲ್ಲ ವೀರಣ್ಣನಿಗೆ ನೆರವು ಒದಗಿಸಿ ಬಸವೇಶ್ವರರ ತೊಗಲುಗೊಂಬೆಯಾಟವನ್ನು ನಾಡಿನಾದ್ಯಂತ ಪ್ರದರ್ಶಿಸಲು ಸಹಾಯ ಮಾಡಿದರು. ಹಾಗೆಯೇ ಶ್ರೀ ಬಸವರಾಜ ಬೆಂಗೇರಿ ಇವರಿಗೆ ಸಹಾಯ ಮಾಡಿ ಅವರಾಡುತ್ತಿದ್ದ ಶ್ರೀ ಬಸವೇಶ್ವರ ನಾಟಕವನ್ನು ನಾಡಿನಾದ್ಯಂತ ಆಡುವ ವ್ಯವಸ್ಥೆ ಮಾಡಿದರು. ಗದಗಿನ ಭೀಷ್ಮಕೆರೆಯಲ್ಲಿ ೧೧೬ ಅಡಿಯ ಬಸವಮೂರ್ತಿ ಸ್ಥಾಪನೆಗೂ ಶ್ರೀಗಳವರೇ ಕಾರಣ ಎಂದು ಹೇಳಬಹುದು.

ಭಕ್ತರಲ್ಲಿ ಸದಾ ಧರ್ಮ ಜಾಗೃತವಾಗಿರಬೇಕು ಎನ್ನುವ ದೃಷ್ಟಿಯಿಂದ ೧೯೭೨ರಲ್ಲಿ ಪ್ರಥಮ 'ಶಿವಾನುಭವ' ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಡಿಸೆಂಬರ್ ೭, ೧೯೯೧ ರಂದು ೧೦೦೧ ನೆಯ ಕಾರ್ಯಕ್ರಮದಲ್ಲಿ ಶ್ರೀ ಎಸ್. ನಿಜಲಿಂಗಪ್ಪ, ಸಿದ್ಧಗಂಗಾ ಶ್ರೀಗಳು, ದೇಜಗೌ, ಸಿದ್ಧಯ್ಯ ಪುರಾಣಿಕ ಅವರು ಭಾಗವಹಿಸಿದ್ದರು. ಅಲ್ಲಿಂದ ಇಲ್ಲಿಯವರೆಗೆ ಒಂದು ವಾರವೂ ತಪ್ಪದೆ ಈ ಕಾರ್ಯಕ್ರಮ ನಡೆದುಕೊಂಡು ಬಂದಿರುವುದು ಗಿನ್ನಿಸ್ ದಾಖಲೆಯನ್ನು ನಿರೀಕ್ಷಿಸುತ್ತಿದೆ.

ಶ್ರೀಗಳು ಡಂಬಳದಲ್ಲಿ ಸ್ವತಃ ಬೆವರು ಸುರಿಸಿ, ಬೆಂಗಾಡಾಗಿದ್ದ ನೆಲವನ್ನು ಕೃಷಿ ಭೂಮಿಯನ್ನಾಗಿ ಮಾಡಿ, ಆಧುನಿಕ ತಂತ್ರಜ್ಞಾನವನ್ನು ಬಳಸಿ ಅಲ್ಲಿ ದ್ರಾಕ್ಷಿ, ಬಾರಿ, ಬಾಳೆ, ತೆಂಗು ಮೊದಲಾದ ಪೈರು ಬೆಳೆದುದನ್ನು ನೋಡಿ, 'ಇದು ನಿಜ ಭಾರತ' ಎಂದು ಅಮೆರಿಕೆಯ ಕೆಂಟಲ್ಲರ್ರಾಪ್ ಪಿಯರ್ ಗ್ಲೂಬರ್ ಉದ್ಗರಿಸಿದರಂತೆ. ಕೃಷಿ ವಿಶ್ವವಿದ್ಯಾಲಯ, ಕೃಷಿ ಇಲಾಖೆಗಳೂ ಇವರ ಈ ಕಾರ್ಯವನ್ನು ಮನಸಾರೆ ಹೊಗಳಿವೆ.

ಶ್ರೀಗಳವರ ರೈತಪರ ಕಾಳಜಿ ಅಮೋಘವಾದುದು. ದಕ್ಷಿಣ ಕೋರಿಯಾ ಮೂಲದ ಪೊಸ್ಕೋ ಕಂಪನಿ ತನ್ನ ಕೈಗಾರಿಕೆಯನ್ನು ಸ್ಥಾಪಿಸಲು ಹಳ್ಳಿಗುಡಿ, ಡಂಬಳ ಮುಂತಾದ ಊರುಗಳ ೬೦೦೦ ಎಕರೆ ಭೂಮಿಯನ್ನು ವಶಪಡಿಸಿಕೊಳ್ಳಲು ಮುಂದಾದಾಗ, ಅದರಿಂದ ರೈತರು ಅನಾಥರಾಗುವರೆಂದು ತಿಳಿದು ಶ್ರೀಗಳವರು ಬೃಹತ್ ಹೋರಾಟ ನಡೆಸಿದರು. ಅದರಲ್ಲಿ ಮೇಧಾ ಪಾಟ್ಕರ ಮೊದಲಾದ ಪರಿಸರವಾದಿಗಳು, ಪತ್ರಕರ್ತರು ಭಾಗವಹಿಸಲು ಸರಕಾರ ಆ ಯೋಜನೆಯಿಂದ ಹಿಂದೆ ಸರಿಯಿತು. ಹೀಗೆ ರೈತರನ್ನು ಒಂದು ದೊಡ್ಡ ಕುತ್ತದಿಂದ ಪಾರುಮಾಡಿದವರು ಶ್ರೀಗಳವರು. ಹಾಗೆಯೇ ಕಪ್ಪತ್ತಗುಡ್ಡವನ್ನೂ ಕಬಳಿಸಲು ಕೆಲವರು ಪ್ರಯತ್ನ ಮಾಡಿದಾಗ ಅದನ್ನು ಸಂರಕ್ಷಿಸಿದವರೂ ಪೂಜ್ಯ ಶ್ರೀಗಳವರೇ.

ಸಕಲ ಜೀವಾತ್ಮರಿಗೆ ಲೇಸನ್ನೇ ಬಯಸುವ ಉದ್ದೇಶ ಹೊಂದಿದ್ದ ಶ್ರೀಗಳು ಹರಿಜನರ ಸಾಧಕರಿಗೆ ಸನ್ಮಾನ, ಆಗಾಗ ಹರಿಜನರಿಗೆ ಪ್ರಸಾದದ ವ್ಯವಸ್ಥೆ, ಹರಿಜನ ಕೇರಿಯಲ್ಲಿ ಪೂಜೆ ಪ್ರಸಾದ ಮೊದಲಾದವುಗಳಲ್ಲಿ ತೊಡಗಿದ್ದರು. ಹಿಂದೂ, ಮುಸ್ಲಿಮ್, ಸಿಖ್, ಈಸಾಯಿ, ಪರಿಶಿಷ್ಟ ಎಲ್ಲ ಪಂಗಡದವರಿಗೂ ಶ್ರೀಮಠದಲ್ಲಿ ಮುಕ್ತ ಪ್ರವೇಶವಿದ್ದಿತು. ಶ್ರೀಗಳು ಆಯಾ ಧರ್ಮೀಯರ ಸಭೆ ಸಮಾರಂಭದಲ್ಲಿ ಭಾಗವಹಿಸುತ್ತಿದ್ದುದಲ್ಲದೆ, ಆಯಾ ಧರ್ಮೀಯ ಮುಖಂಡರನ್ನು ಶ್ರೀಮಠಕ್ಕೆ ಕರೆಸಿ ಸತ್ಕರಿಸುತ್ತಿದ್ದರು. ಬುದ್ಧ ಜಯಂತಿ, ಅಂಬೇಡಕರ್ ಜಯಂತಿ, ಗಾಂಧಿ ಜಯಂತಿಗಳನ್ನು ಶ್ರೀಮಠದಲ್ಲಿ ವಿಜೃಂಭಣೆಯಿಂದ ಆಚರಿಸುತ್ತಿದ್ದರು. ಮೂಢನಂಬಿಕೆ, ಗೊಡ್ಡು ಆಚರಣೆಗಳ ವಿರುದ್ಧ ಶ್ರೀಗಳು ಸಿಡಿದೇಳುತ್ತಿದ್ದರು.

ಕನ್ನಡ ನಾಡು-ನುಡಿಯ ಪ್ರಶ್ನೆ ಬಂದಾಗ ತಾವೊಬ್ಬ ಜಗದ್ಗುರು ಎಂಬುದನ್ನು ಮರೆತು ಸಾಮಾನ್ಯರೊಂದಿಗೆ ಸಾಮಾನ್ಯರಾಗಿ ಹೋರಾಡಿದರು. ಅವರು ೧೯೮೦ರಲ್ಲಿ

ಸಿಂದಗಿಯ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಮಾಡಿದ ಭಾಷಣದ ಕಿಡಿ ಮುಂದೆ ಗೋಕಾಕ ಚಳುವಳಿಗೆ ನಾಂದಿಯಾದುದನ್ನು ಸ್ಮರಿಸಬಹುದು. ಕನ್ನಡಕ್ಕೆ ಶಾಸ್ತ್ರೀಯ ಸ್ಥಾನಮಾನ ಸಿಗಬೇಕು ಎಂಬುದು ಶ್ರೀಗಳವರ ಬಲವಾದ ಹಂಬಲವಾಗಿದ್ದಿತು. ಕರ್ನಾಟಕದ ಸಮಗ್ರ ಅಭಿವೃದ್ಧಿಗೆ ನಂಜುಂಡಪ್ಪ ವರದಿಯೇ ತಾರಕ ಎಂದು ಶ್ರೀಗಳು ಬಲವಾಗಿ ನಂಬಿದ್ದರು.

ಇವರ ಬಹುಮುಖ ಸೇವೆಯನ್ನು ಮನ್ನಿಸಿ ಗುಲಬರ್ಗಾ ವಿಶ್ವವಿದ್ಯಾಲಯ ಗೌರವ ಡಾಕ್ಟರೇಟ ಪದವಿಯನ್ನಿತ್ತಿತ್ತು. ಇವರ ಜಾತ್ಯಾತೀತ ನಿಲುವನ್ನು ಗಮನಿಸಿ ಕರ್ನಾಟಕ ಸರಕಾರ ರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸಿತು. ಕೇಂದ್ರ ಸರಕಾರ ೨೦೦೧ನೆಯ ಸಾಲಿನ ಕೋಮು ಸೌಹಾರ್ದತಾ ಹಾಗೂ ದೇಶದ ಏಕತಾ ರಾಷ್ಟ್ರೀಯ ಪ್ರಶಸ್ತಿಯನ್ನು ನೀಡಿ ಗೌರವಿಸಿತು. ಲಿಂಗಾಯತ ಹೋರಾಟದ ಮುಂದಾಳತ್ವವನ್ನು ವಹಿಸಿ, ಅದಕ್ಕೆ ಭದ್ರ ನೆಲೆ-ಬೆಲೆಯನ್ನು ತಂದುಕೊಟ್ಟಿದ್ದ ಶ್ರೀಗಳನ್ನು ಕಳೆದುಕೊಂಡು ಲಿಂಗಾಯತ ಧರ್ಮ ನಿಜವಾಗಿ ಬಡವಾಗಿದೆ. ಇಂಥ ಒಂದು ಮಹಾಚೇತನ ಇಂದು ಇಲ್ಲವಾದುದು ಕನ್ನಡಿಗರ ದುರ್ದೈವವೇ ಸರಿ.

■■

## ಪಾವನವಾಯ್ತು ಸಿದ್ಧಯೋಗಿಯೇ ನಿಮ್ಮಿಂದ ಈ ಇಳೆ

ಹೊರುವ ಸಾಮರ್ಥ್ಯವರಿತೇ ಹೆಗಲೇರುತ್ತವೆ ಜಗದೆಲ್ಲ ಭವಭಾರ
ತೊರೆವ ಸಾಧ್ಯತೆಯರಿತೆ ಓಡಿ ಹೋಗುತ್ತವೆ ಬಂಧನಗಳೆಲ್ಲ ಬಹುದೂರ

ಬದ್ಧತೆಯಾಳಕ್ಕಿಳಿದ ಸಿದ್ಧಹಸ್ತಕ್ಕೆ ಸಿಕ್ಕ ಕಲ್ಲು-ಮಣ್ಣೆಲ್ಲ ಶುದ್ಧ ಚಿನ್ನ
ಬೇಕೆ ಶುದ್ಧಗೊಳಿಸುವ ಶ್ರಮ? ಮುಕ್ಕಾಗದಿಹ ಮೂಲರೂಪವೇ ಚೊಕ್ಕ ರನ್ನ

ಕೋಟೆ ಬಾಗಿಲದಾಟಿ, ಬೆಳಗಿನಾವಿನ ಕ್ಷೀರ ಹೀರಿ, ಎಡೆ ಹಿಡಿವತ್ತ ದಿಟ್ಟ ಹೆಜ್ಜೆ
ಮತರಹಿತ ಮಠ, ಸ್ಥಾವರಲ್ಲದ ಪೀಠ, ಕಟ್ಟುವಲ್ಲಿ ಆಗಿಯೇ ಇಲ್ಲ ಎಲ್ಲೂ ಒಜ್ಜೆ

ಕಾಯಕದಾಟ, ದಾಸೋಹದೂಟ, ಸಮನ್ವಯದ ನೋಟ, ಅರಿವೇ ನಿತ್ಯ ಪಾಠ
ತಲುಪಿತ್ತು ಮತ್ತೊಂದು ಪೂಜೆ, ಗುರುವಿನೋಜೆ, ಗದುಗ ತೋಂಟದಾರ್ಯರ ಪೂಜೆ

ನ್ಯಾಯ-ನಿಷ್ಠುರತೆಯಷ್ಟೇ ವೀರ-ವಿನಯ, ಅನುಭಾವದಡಿಗೆಯೆ ಅಂಗಲಿಂಗಕ್ಕೆ ನೈವೇದ್ಯ
ಆಡಂಬರವರಿಯದ ದೇಹಾಲಯ, ಕಡಾವಿಗೆ ರಹಿತ ಹವಾಯಿ ಕಾಲು ಬಲು ಚೋದ್ಯ !

ಜಗಕ್ಕೆಲ್ಲ ಜಂಗಮದ ದೀಕ್ಷೆ, ಕಡಲಿನಷ್ಟೇ ವಿಸ್ತಾರ-ಗಂಭೀರ ಕನಸಿನ ನಕ್ಷೆ
ಹೆಚ್ಚೇನು ! ತುಂಬಿದೆ ಸಂತ-ಸಮೃದ್ಧಿಯ ರಕ್ಷೆ, ಅಡಿಯಿಟ್ಟಲೆಲ್ಲ ಅಚ್ಚೊತ್ತಿದೆ ಸುಭಿಕ್ಷೆ

ಶಿವ-ಸಿದ್ಧರ ತೋಂಟದಲ್ಲಿ ಶ್ರಮ-ಸಮನ್ವಯದ ಶರಣ ಪುಷ್ಪದ ಬೆಳೆ
ಕಳೆ-ಕೊಳೆ ಕಳೆದ ಝುಳಝುಳ ಹೊಳೆ, ಪಾವನವಾಯ್ತು ಸಿದ್ಧಯೋಗಿಯೇ ನಿಮ್ಮಿಂದ ಈ ಇಳೆ

**ಡಾ. ಬಸವರಾಜ ಸಾದರ**

# ಜನಪರ ಜಂಗಮನ ನಿರ್ಗಮನ

• ಸುಮಿತ್ರಾಸುತ ಅಗಸಬಾಳ

ಮನುಷ್ಯನ ಹೆಗಲ ಮೇಲೆ ಇನ್ನೊಬ್ಬ ಮನುಷ್ಯ ಕುಳಿತು ಮೆರೆಯುವ, ಸಂಭ್ರಮಿಸುವ ಅಡ್ಡಪಲ್ಲಕ್ಕಿಯನ್ನು ಧಿಕ್ಕರಿಸಿ, ಪಾದೋದಕ ಎಂಬ ಅವೈಜ್ಞಾನಿಕ, ಅನಾರೋಗ್ಯಕರ ಪದ್ಧತಿಯನ್ನು ವಿರೋಧಿಸಿ, ಮೌಢ್ಯದ ಕೇಂದ್ರಗಳಾದ ಮಠೀಂಯು ವ್ಯವಸ್ಥೆಯಲ್ಲಿದ್ದುಕೊಂಡೇ ಮೌಢ್ಯ ನಿರ್ಮೂಲನೆಗಾಗಿ ಹೋರಾಡಿ ಕಾವಿಗೊಂದು ಘನತೆ ತಂದುಕೊಟ್ಟು, ಭಕ್ತರನ್ನೇ ಬಂಧುಗಳೆಂದು ನಂಬಿದ್ದ ಗದುಗಿನ ತೋಂಟದಾರ್ಯ ಮಠದ ಸಿದ್ಧಲಿಂಗ ಸ್ವಾಮಿಗಳು ನಿರ್ಗಮಿಸಿದ್ದಾರೆ. ಭಾರತೀಯ ಧಾರ್ಮಿಕ ವ್ಯವಸ್ಥೆಯಲ್ಲಿ ಮಠಗಳು ಜನರ ಶ್ರದ್ಧಾ ಕೇಂದ್ರಗಳು. ಅಂಥ ಮಠಗಳಲ್ಲಿರುವ ಮಠಾಧಿಪತಿಗಳ ಮಾತುಗಳು ಅನುಯಾಯಿಗಳಿಗೆ ಸಂವಿಧಾನವಿದ್ದಂತೆ. ಇಂಥ ಅಮಾಯಕ ಅನುಯಾಯಿಗಳನ್ನು, ಅವರ ಭಾವನೆಗಳನ್ನು ದುರುಪಯೋಗ ಪಡಿಸಿಕೊಳ್ಳುತ್ತಿರುವ ಮಠಾಧಿಪತಿಗಳೇ ಹೆಚ್ಚಾಗಿರುವಕಾಲದಲ್ಲಿ, ಮಠದ ಅನುಯಾಯಿಗಳಿಗೆ ಕಾಯಕ ನೀತಿ, ಸೌಹಾರ್ದಬದುಕು, ಸಹಬಾಳ್ವೆಯ ದಾರಿ, ಮೌಢ್ಯವಿರೋಧಿ ಆಚರಣೆಗಳನ್ನು ಕಲಿಸಿದ ನಿಜಸಂತ ಈ ತೋಂಟದಾರ್ಯ ಸ್ವಾಮಿಗಳು. ಮೂಲತಃ ಬಸವ ಚಿಂತನೆ ಹಾಗೂ ಶರಣ ಚಳುವಳಿಯಿಂದ ಪ್ರಭಾವಿತರಾಗಿದ್ದ ಇವರು ಎಡಪಂಥೀಯ ಚಿಂತನೆಗಳ ಕುರಿತು ಗೌರವದ ಭಾವನೆ ಹೊಂದಿದ್ದರು. ಸ್ನಾತಕೋತ್ತರ ಪದವಿಯನ್ನೂ ಪಡೆದಿದ್ದ ಈ ಸ್ವಾಮೀಜಿ ತಮ್ಮ ಅಧ್ಯಯನ ಹಾಗೂ ಚಿಂತನೆಗಳನ್ನು ಜನರ ಬದುಕಿನ ಉತ್ತಮಿಕೆಗಾಗಿ ಬಳಸಿಕೊಂಡರು. ಸ್ವತಃ ಕೃಷಿ ಭೂಮಿಯಲ್ಲಿ ಉತ್ತಿ, ಬಿತ್ತಿದ ಕಾಯಕತತ್ವವನ್ನು ಅನುಸರಿಸಿದವರು. ಮಠದ ಆದಾಯ, ಸಂಪತ್ತನ್ನು ದಾಸೋಹದ ಮೂಲಕ ಜಂಗಮ (ಸಮಾಜ)ಕ್ಕೆ ಅರ್ಪಿಸಿದರು. ತಾವು ನಂಬಿದ ತತ್ವಗಳನ್ನು ಕೇವಲ ಪ್ರವಚನಗಳಿಗೆ ಸೀಮಿತಗೊಳಿಸದೇ ಒಬ್ಬ ಸಾಮಾಜಿಕ ಕಾರ್ಯಕರ್ತನ ರೀತಿಯಲ್ಲಿ ಕಾರ್ಯಗತಗೊಳಿಸಲು ಬದುಕಿನುದ್ದಕ್ಕೂ ಶ್ರಮಿಸಿದರು.

ಒಂದು ಧರ್ಮ ತನ್ನ ಶ್ರೇಷ್ಠತೆಯನ್ನು ಸಾಬೀತುಪಡಿಸಬೇಕಾದರೆ ಇನ್ನೊಂದು ಧರ್ಮವನ್ನು ದ್ವೇಷಿಸಬೇಕು, ಅದರ ವಿರುದ್ಧ ಸಮರ ಸಾರಬೇಕು ಎಂಬ ಇಂದಿನ ರಾಜಕೀಯ ಪ್ರೇರಿತ ವಾತಾವರಣದಲ್ಲಿ, ಒಂದು ಧರ್ಮಇನ್ನೊಂದು ಧರ್ಮದ ನಡುವೆ ಹೇಗೆ ಸಹಬಾಳ್ವೆ ನಡೆಸಬೇಕೆಂಬ ಮಾರ್ಗವನ್ನು ತೋರಿಸಿಕೊಟ್ಟರು ತೋಂಟದಾರ್ಯ ಸ್ವಾಮೀಜಿ. ಗದುಗಿನಮಠದ ಜಾತ್ರಾಮಹೋತ್ಸವ ಸಂದರ್ಭದಲ್ಲಿ ಸ್ವಜಾತಿಯವರನ್ನೇ ಮಹೋತ್ಸವದ ಮುಖ್ಯಸ್ಥನನ್ನಾಗಿ ಮಾಡಬೇಕು ಎನ್ನುವ ನೀತಿ ಮುರಿದು ಅನ್ಯಜಾತಿಯ, ಹಿಂದುಳಿದ ವರ್ಗದ, ಅನ್ಯಧರ್ಮದ ವ್ಯಕ್ತಿಗಳಿಗೆ ಅಂಥ ಸ್ಥಾನ ನೀಡಿ ಜಾತ್ಯತೀತತೆಗೆ ಒಂದು ಅರ್ಥಕೊಟ್ಟರು. ಪಟ್ಟಭದ್ರ ಹಿತಾಸಕ್ತಿಗಳಿಂದ, ಹುಸಿಭಕ್ತರ ತೀವ್ರವಾದ ವಿರೋಧ ಮತ್ತು ಪ್ರತಿಭಟನೆಯನ್ನು ಎದುರಿಸಿ ತಮ್ಮ ನಿಲುವಿಗೆ ಬದ್ಧರಾಗಿ ಮುನ್ನಡೆದರು. ಮೊಟ್ಟಮೊದಲ ಶಿಕ್ಷಕಿ ಸಾವಿತ್ರಿಬಾಯಿ ಫುಲೆ ಹೆಸರಿನಲ್ಲಿ ತಮ್ಮ ಮಠದಿಂದ ಪ್ರಶಸ್ತಿಗಳನ್ನು ಕೊಟ್ಟರು. ಮಠಾಧಿಪತಿಯಾದವನು ಮಠದ ಸಂಪತ್ತಿನ ಉಪಭೋಗದಲ್ಲಿ ತಲ್ಲೀನನಾಗದೇ ಜನರ ಬದುಕು ಹಸನುಗೊಳಿಸಬೇಕೆಂದು ಹೇಳುತ್ತಲೇ ಮಠದಿಂದ ಹೊರಬಂದು ಸಾಮಾಜಿಕ ಚಳುವಳಿಯಲ್ಲಿ ಭಾಗವಹಿಸಿದರು. ಗೋಕಾಕ ವರದಿ ಜಾರಿಗಾಗಿ ನಡೆದ ಚಳುವಳಿಯಲ್ಲಿ ತೋಂಟದಾರ್ಯ ಸ್ವಾಮಿಗಳು ಬೀದಿಗಿಳಿದರು. ತಮ್ಮ ಮಠದಲ್ಲಿಯೇ ನಾಡು-ನುಡಿಯ ಕುರಿತು ವಿಚಾರಸಂಕಿರಣಗಳನ್ನು ನಡೆಸಿದರು. ಗೋಕಾಕ ವರದಿ ಜಾರಿಯಾಗುವವರೆಗೂ ಚಳುವಳಿಯ ನಾಯಕತ್ವ ವಹಿಸಿದ್ದರು.

ಗದಗ ಜಿಲ್ಲೆಯಲ್ಲಿ ಪೊಸ್ಕೊ ಎಂಬ ಅಮೇರಿಕಾದವರ ಬಂಡವಾಳದ, ದಕ್ಷಿಣ ಕೋರಿಯಾದ ಕಾರ್ಪೊರೇಟ್ ಕಂಪನಿ ಉಕ್ಕು ಕಾರ್ಖಾನೆಗಾಗಿ ರೈತರ ಜಮೀನನ್ನು ಕಬಳಿಸಲು ಮುಂದಾಯಿತು, ಕರ್ನಾಟಕ ಸರಕಾರ ಪೊಸ್ಕೊ ಕಂಪನಿಯಿಂದ ದುಡ್ಡು ಪಡೆದು ರೈತರು ಭೂಮಿ ಬಿಟ್ಟುಕೊಡಲು ನೋಟಿಫಿಕೇಶನ್ ಹೊರಡಿಸಿತ್ತು. ಸರಕಾರ ಮತ್ತು ಕಂಪನಿಯ ಒಳಸಂಚಿನಿಂದ ಕಂಪನಿಗೆ ಅವಶ್ಯಕತೆಗಿಂತ ಹೆಚ್ಚಿನ ಭೂಮಿಯನ್ನು ನೀಡಲು ಮುಂದಾಗಿತ್ತು. ಆ ಪ್ರದೇಶದಲ್ಲಿ ಅಂಥ ಉತ್ಪನ್ನಗಳ ರಫ್ತು ಉದ್ದೇಶಿತ ಕೈಗಾರಿಕೆ ಬರುವುದು ನಾಡಿಗೆ ಉಪಯುಕ್ತವಾಗಿರಲಿಲ್ಲ ಮತ್ತು ಪರಿಸರಕ್ಕೆ

ಮಾರಕವಾಗಿತ್ತು. ಕೆಲ ರೈತರಿಗೆ, ರಾಜಕೀಯ ಪುಡಾರಿಗಳಿಗೆ ಹಣದ ಆಮಿಷ ಒಡ್ಡಿ ಕೈಗಾರಿಕೆ ಸ್ಥಾಪನೆಗೆ ಪೊಸ್ಕೊ ಕಂಪನಿ ಮುಂದಾಗಿತ್ತು. ಭೂಮಿಯನ್ನೇ ನಂಬಿದ ನೂರಾರು ರೈತರು ಬೀದಿಗೆ ಬೀಳುತ್ತಿದ್ದರು. ಅಂಥ ಸಂದರ್ಭದಲ್ಲಿ ಸ್ಥಳೀಯ ಶಾಸಕ, ಸಚಿವರು ಜನರ ರಕ್ಷಣೆಗೆ ನಿಲ್ಲದೆ ಕಂಪನಿಯ ಪರವಾಗಿ ನಿಂತು, ಭೂಸ್ವಾಧೀನವನ್ನು ವಿರೋಧಿಸಿದ ಸಾಮಾಜಿಕ ಹೋರಾಟಗಾರರನ್ನು ಗ್ರಾಮಗಳಿಗೇ ಹೋಗದಂತೆ ತಡೆದರು. ಆಗ ಗದುಗಿನ ತೋಂಟದಾರ್ಯ ಸ್ವಾಮೀಜಿಯವರು ಭೂಸ್ವಾಧೀನವನ್ನು ವಿರೋಧಿಸಿ ರೈತರಪರ ಹೋರಾಟಕ್ಕಿಳಿದರು. ಕರ್ನಾಟಕ ಸರಕಾರವನ್ನೇ ಎದುರು ಹಾಕಿಕೊಂಡರು. ಕೆಲವು ಹುಸಿ ಭಕ್ತರು, ಸರಕಾರದ, ಕಂಪನಿಯ ಏಜೆಂಟರು ಸ್ವಾಮೀಜಿಗೆ ಇಂಥ ಉಸಾಬರಿ ಏಕೆ ಬೇಕು ಎಂದು ಮಠದ ಮುಂದೆಯೇ ಪ್ರತಿಭಟಿಸಿದರು. 'ರೈತರಿಂದಲೇ ಮಠಗಳು, ಅವರು ಕೊಡುವ ಅನ್ನದಿಂದಲೇ ನಾವು ದಾಸೋಹ ನಡೆಸುತ್ತೇವೆ, ರೈತ ಸಂಕಷ್ಟದಲ್ಲಿರುವಾಗ, ಪರಿಸರ ನಾಶದಂಚಿನಲ್ಲಿರುವಾಗ ನಾವು ಮಠದಲ್ಲಿ ನೆಮ್ಮದಿಯಿಂದಿರಲು ಸಾಧ್ಯವಿಲ್ಲ' ಎಂದು ಹೇಳಿ ಹಳ್ಳಿ ಹಳ್ಳಿಗೆ ಹೋಗಿ ಹೋರಾಟ ತೀವ್ರಗೊಳಿಸಿದರು. ಅವರು ಹೋರಾಟಕ್ಕಿಳಿದ ಕಾರಣ ಕೇವಲ ಒಂದು ತಿಂಗಳಲ್ಲಿ ಸರಕಾರ ತನ್ನ ನಿರ್ಧಾರದಿಂದ ಹಿಂದೆ ಸರಿಯಿತು. ರೈತರ ಭೂಮಿ, ಪರಿಸರ ಸುರಕ್ಷಿತವಾಯಿತು. ಇದೇ ಪೊಸ್ಕೊ ಕಂಪನಿ ಓರಿಸ್ಸಾದಲ್ಲಿ ಅಲ್ಲಿನ ಸರಕಾರದ ಜೊತೆಗೂಡಿ ವರ್ಷಗಟ್ಟಲೆ ಹೋರಾಟ ಮಾಡಿದ ಪ್ರತಿಭಟನಾಕಾರರ ಮೇಲೆ, ಆದಿವಾಸಿಗಳ ಮೇಲೆ ನಿರಂತರ ದಾಳಿ ನಡೆಸಿತ್ತು. ಆದರೆ ಕರ್ನಾಟಕದಲ್ಲಿ ತೋಂಟದ ಸ್ವಾಮೀಜಿಯವರ ನಾಯಕತ್ವದಲ್ಲಿ ನಡೆದ ಹೋರಾಟಕ್ಕೆ ಮಣಿದು ಹಿಂದೆ ಸರಿಯಬೇಕಾಯಿತು. ಗದಗ ಮತ್ತು ಬಳ್ಳಾರಿ ಜಿಲ್ಲೆಯ ಮಧ್ಯೆ ಇರುವ ಕಪ್ಪತಗುಡ್ಡದಲ್ಲಿ ಗಣಿಗಾರಿಕೆ ನಡೆಸಲು ಸರಕಾರ ಅನುಮತಿ ಕೊಟ್ಟಾಗ ಮತ್ತೆ ತೋಂಟದಾರ್ಯ ಸ್ವಾಮೀಜಿ ಬೀದಿಗಿಳಿದು ಗಣಿಗಾರಿಕೆಯನ್ನು ತಡೆದರು, ಕಪ್ಪತಗುಡ್ಡದಂಥ ಅಮೂಲ್ಯಔಷಧಿ ಸಸ್ಯಗಳಿರುವ, ಆ ಪ್ರದೇಶದ ಏಕೈಕ ಹಸಿರುಬೆಟ್ಟ ಉಳಿಯಲು ಕಾರಣಕರ್ತರಾದರು.

ಒಂದು ಮಠ ತನ್ನ ಪರಿಸರದಲ್ಲಿ ವಿಶೇಷ ಪ್ರಭಾವವನ್ನು ಹೊಂದಿರುತ್ತದೆ. ಮಠಾಧಿಪತಿಗಳ ಮಾತು, ನಡೆ, ಚಿಂತನೆ ಅಲ್ಲಿನ ಜನಜೀವನದ ಮೇಲೆ ಪ್ರಭಾವ ಬೀರುತ್ತದೆ. ಇಂದು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇರುವ ಬಹುತೇಕ ಮಠಗಳು, ಅದರಲ್ಲೂ ಉಡುಪಿಯ ಅಷ್ಟಮಠಗಳು ಮೌಢ್ಯವನ್ನು ವಿರೋಧಿಸದೇ, ಪಂಕ್ತಿಭೇದ, ಮಡೆಸ್ನಾನದಂತಹ ಅವಮಾನವೀಯ, ಅವೈಜ್ಞಾನಿಕ ಅಸಮಾನತೆಯ ಆಚರಣೆಗಳನ್ನು ಬೆಂಬಲಿಸುತ್ತಿವೆ. ಸುಬ್ರಮಣ್ಯದಲ್ಲಿ ಬ್ರಾಹ್ಮಣರು ಉಂಡು ಬಿಟ್ಟ ಎಂಜಲೆಲೆಯ ಮೇಲೆ ಉರುಳು ಸೇವೆ ಮಾಡುವ ನಂಬಿಕೆ ಮತ್ತು ಆಚರಣೆಯ ವಿರುದ್ಧಇನ್ನೊಬ್ಬ ಜನಪರ, ಪ್ರಗತಿಪರಚಿಂತನೆಯ ಶ್ರೀ ನಿಡುಮಾಮಿಡಿ ಸ್ವಾಮಿಗಳು ರಾಜ್ಯದ ವಿಚಾರವಾದಿ ಮಠಾಧಿಪತಿಗಳನ್ನು ಸೇರಿಸಿ ತೀವ್ರವಾದ ಹೋರಾಟ ನಡೆಸಿದರು. ಆಗ ಗದುಗಿನ ತೋಂಟದಾರ್ಯ ಸ್ವಾಮಿಗಳೂ ಬೆಂಗಳೂರಿಗೆ ಬಂದು ಆ ಹೋರಾಟದಲ್ಲಿ ಭಾಗವಹಿಸಿ ಆ ಚಳುವಳಿಯ ಭಾಗವಾದರು. ಬಹುತೇಕ ಮಠಾಧಿಪತಿಗಳು ತಾವೇ ಶ್ರೇಷ್ಠ ಎಂಬ ಅಹಂನಲ್ಲಿರುತ್ತಾರೆ. ತೋಂಟದ ಈ ಸ್ವಾಮಿಗಳು ಎಲ್ಲಿಯೇ ಜನಪರವಾದ ಚಳುವಳಿಗಳಿದ್ದರೂ, ಆ ವಿಚಾರ ಅವರಿಗೆ ಮನದಟ್ಟಾದರೆ ಅದಕ್ಕೆ ಬೆಂಬಲ ಸೂಚಿಸುತ್ತಿದ್ದರು. ಸ್ವತಃ ಭಾಗಿಯಾಗುತ್ತಿದ್ದರು. ಹಲವಾರು ಲಿಂಗಾಯತ ಮಠಗಳಿಗೆ ಜಂಗಮರೇ ಉತ್ತರಾಧಿಕಾರಿಯಾಗಬೇಕೆಂಬ ನೀತಿಯನ್ನು ಮುರಿದು ಜಂಗಮೇತರರೂ ಅರ್ಹರಿದ್ದರೆ ಮಠಾಧಿಪತಿಗಳಾಗಬೇಕೆಂದು ಪ್ರತಿಪಾದಿಸಿದರು, ಮಾತ್ರವಲ್ಲ ತಮ್ಮದೇ ಮುಂಡರಗಿಯ ಶಾಖಾಮಠಕ್ಕೆ ಜಂಗಮೇತರ, ಪ್ರಖರ ವಿಚಾರವಾದಿ, ನಿಜಗುಣಾನಂದ ಸ್ವಾಮಿಗಳನ್ನು ಮಠಾಧಿಪತಿಯನ್ನಾಗಿ ನಿಯಮಿಸಿದರು.

ಮಠ, ಮಠಾಧಿಪತಿ ಇಂಥ ವ್ಯವಸ್ಥೆಯನ್ನೇ ನಾಸ್ತಿಕರು ವಿರೋಧಿಸಬಹುದು. ಆದರೆ ಜನಮನದಲ್ಲಿ ಆಸ್ತಿಕತೆ ಇರುವವರೆಗೂ ಅಂಥ ವ್ಯವಸ್ಥೆ ಇದ್ದೇ ಇರುತ್ತದೆ. ಅಂಥ ವ್ಯವಸ್ಥೆಯ ಭಾಗವಾಗಿರುವವರು ತಮ್ಮ ಮಿತಿಯ ಮಧ್ಯೆಯೂ ಅಂಥ ವ್ಯವಸ್ಥೆಯನ್ನು, ಆ ವ್ಯವಸ್ಥೆಯಲ್ಲಿ ತಮಗೆ ಲಭ್ಯವಾಗಿರುವ ಅಧಿಕಾರದ ಬಲದಿಂದ ಜನಪರವಾಗಿ ಮುನ್ನಡೆಸಿದರೆ ಸಮಾಜದಲ್ಲಿ ಪರಿಣಾಮಕಾರಿಯಾದ ಕೆಲಸ ಮಾಡಬಹುದು. ನಂಬಿದ ಜನ ಸಮೂಹವನ್ನು ವೈಜ್ಞಾನಿಕತೆ, ವೈಚಾರಿಕತೆ, ಸೌಹಾರ್ದ, ಸಹಬಾಳ್ವೆಯತ್ತ ಮುನ್ನಡೆಸಬಹುದು ಎಂಬುದಕ್ಕೆ ಮಾದರಿ ಶ್ರೀ ತೋಂಟದ ಸಿದ್ಧಲಿಂಗ ಸ್ವಾಮಿಗಳು. ಅವರು ತಮ್ಮ ನಂತರ ಶ್ರೀ ಸಿದ್ಧರಾಮ ಸ್ವಾಮೀಜಿಯವರನ್ನು ತಮ್ಮ ಉತ್ತರಾಧಿಕಾರಿ ಎಂದು ಉಯಿಲು ಬರೆದು ಹೋಗಿದ್ದಾರೆ. ಶ್ರೀ ಸಿದ್ಧರಾಮ ಸ್ವಾಮೀಜಿಗಳೂ ಸಹ ವಿಚಾರವಾದಿಗಳೇ, ಆ ಮಠದ ಜನಪರ ಪರಂಪರೆ ಮುಂದುವರಿಯಲೆಂಬುದು ಆಶಯ.

ಶ್ರೀ ತೋಂಟದಾರ್ಯ ಸ್ವಾಮಿಗಳು 'ಹೊಸತು' ಪತ್ರಿಕೆ ಆರಂಭವಾದಾಗಿನಿಂದಲೂ ಅದರ ಓದುಗರು. ಹಲವಾರು ಪ್ರವಚನಗಳಲ್ಲಿ 'ಹೊಸತು' ಪತ್ರಿಕೆಯಲ್ಲಿನ ವೈಚಾರಿಕ ಲೇಖನಗಳನ್ನು ಸ್ವತಃ ಓದಿ ಹೇಳಿದ್ದಾರೆ, ಉಲ್ಲೇಖಿಸಿದ್ದಾರೆ. ಅಂಥ ಒಬ್ಬ 'ಜನಪರಜಂಗಮ'ನ ನಿರ್ಗಮನಕ್ಕೆ ಹೊಸತು ಬಳಗ ನೋವಿನ ನಮನಗಳನ್ನು ಸಲ್ಲಿಸುತ್ತದೆ.

■■

# ಬಸವತತ್ತ್ವದ ಮಹಾದಂಡನಾಯಕರು

● ಡಾ. ಕೆ. ರವೀಂದ್ರನಾಥ

ಲಿಂಗಾಯತ ಧರ್ಮದ ಸ್ಥಾಪಕ ಬಸವಣ್ಣ. ವಚನಸಾಹಿತ್ಯ ಲಿಂಗಾಯತ ಧರ್ಮಗ್ರಂಥ ಎಂಬುದನ್ನು ಇತ್ತೀಚಿನ ದಿನಗಳಲ್ಲಿ ಸಾಧಾರ ಪೂರ್ವಕವಾಗಿ ಪ್ರತಿಪಾದಿಸಿದ ಪೂಜ್ಯರಲ್ಲಿ, ವಿದ್ವಾಂಸರಲ್ಲಿ ಶ್ರೀ ಎಡೆಯೂರು ತೋಂಟದ ಪರಂಪರೆಯವರಾದ ಲಿಂಗೈಕ್ಯ ಡಾ. ತೋಂಟದಸಿದ್ಧಲಿಂಗ ಮಹಾಸ್ವಾಮಿಗಳು, ಶ್ರೀ ತೋಂಟದಾರ್ಯ ಸಂಸ್ಥಾನ ಮಠ ಗದಗ–ಡಂಬಳದ ಶ್ರೀಗಳು ಪ್ರಮುಖರು. ಪ್ರಾಯಶಃ ಪೂಜ್ಯ ತೋಂಟದಸಿದ್ಧಲಿಂಗ ಮಹಾಸ್ವಾಮಿಗಳಿಗೆ 'ಬಸವತತ್ತ್ವ' ನಿಷ್ಠೆ ಗಟ್ಟಿಗೊಳ್ಳಲಿಕ್ಕೆ ಕಾರಣವನ್ನು ನನ್ನದೇ ಆದ ಪ್ರಮೇಯದಲ್ಲಿ ನಿರ್ವಚಿಸಲು ಬಯಸುತ್ತೇನೆ. ಈಗಾಗಲೇ ಶ್ರೀ ಎಡೆಯೂರು ತೋಂಟದ ಸಿದ್ಧಲಿಂಗೇಶ್ವರರ ಪರಂಪರೆಯ ಮಠವಾದ ಕಾರಣ, ಅಲ್ಲಮಪ್ರಭು ಸಂಪ್ರದಾಯದ ಎಡೆಯೂರು ತೋಂಟದ ಸಿದ್ಧಲಿಂಗಯತಿಗಳು ೧೫ನೇ ಶತಮಾನದ ಉತ್ತರಾರ್ಧದಲ್ಲಿ ಜೀವಿಸಿ, 'ದ್ವಿತೀಯ ಅಲ್ಲಮ'ನೆಂಬ ಹೆಸರಿಗೆ ಪಾತ್ರರಾದವರು. ಇವರು ವಚನಸಾಹಿತ್ಯದ ಎರಡನೇ ಘಟ್ಟದ ನೇತಾರರಾದರು. ೧೨ನೇ ಶತಮಾನದಲ್ಲಿ ಬಸವಣ್ಣನವರು ಸ್ವತಂತ್ರವಚನಕಾರನಾಗಿದ್ದಂತೆ ೧೫ನೇ ಶತಮಾನದಲ್ಲಿ ತೋಂಟದ ಸಿದ್ಧಲಿಂಗ ಯತಿಗಳು ಸ್ವತಂತ್ರವಚನಕಾರರಾಗಿದ್ದರು. ಅಷ್ಟೇ ಅಲ್ಲ ಎಡೆಯೂರು ತೋಂಟದ ಸಿದ್ಧಲಿಂಗೇಶ್ವರರ ಪರಂಪರೆಯಲ್ಲಿ ಬರುವ ಶಿಷ್ಯ–ಪ್ರಶಿಷ್ಯರಿಂದ ವಚನಸಾಹಿತ್ಯ ಸೃಜನಗೊಂಡಂತೆ ಶಾಸ್ತ್ರೀಯವಾದ ವಿಷಯಾನುಕ್ರಮದಲ್ಲಿ ಆಚರಣೆ ವಚನಗಳು, ಸಂಬಂಧದ ವಚನಗಳು, ಮಿಶ್ರಸ್ತೋತ್ರದ ವಚನಗಳೆಂಬ ಸಂಕಲನ ಸಾಹಿತ್ಯವನ್ನೂ, ಸಂಗ್ರಹಸಾಹಿತ್ಯವನ್ನೂ ಮತ್ತು ಬೆಡಗಿನ ವಚನಗಳಿಗೆ ಟೀಕು ವ್ಯಾಖ್ಯಾನ ಬರೆಯುವುದರ ಮೂಲಕ ವ್ಯಾಖ್ಯಾನ ಸಾಹಿತ್ಯವನ್ನೂ, ಶೂನ್ಯಸಂಪಾದನೆಗಳಂಥ ಕೃತಿಗಳ ರಚನೆಗೆ ಕಾರಣವಾಗಿ, ಒಂದು ತಾತ್ವಿಕ ಒತ್ತಾಸೆಯಾಗಿ ನಿಂತವರು ಶ್ರೀ ಎಡೆಯೂರು ತೋಂಟದ ಸಿದ್ಧಲಿಂಗ ಯತಿಗಳು. ಇದಕ್ಕೆ ಕಾರಣ ಕನ್ನಡನಾಡಿನಲ್ಲಿ ೧೨ನೇ ಶತಮಾನದ ವಚನಸಾಹಿತ್ಯ ಅಥವಾ ಬಸವತತ್ವ ಹಲವಾರು ಆತಂಕಗಳಿಗೆ ಒಳಗಾದುದು. ಲಿಂಗಾಯತ ಧಾರ್ಮಿಕ ಚರಿತ್ರೆಯಲ್ಲಿ ರೇವಣಸಿದ್ಧನ ಮೂಲಕ ನಡೆದ ಧಾರ್ಮಿಕ ಪಂಥಗಳಾದ ನಾಥಪಂಥ–ಶುದ್ಧಶೈವಗಳ ಸಮೀಕರಣ, ಇಂಥ ಸಮೀಕರಣ ಕಾರಣವಾಗಿ ಹುಟ್ಟಿಕೊಂಡ ಆಚಾರ್ಯ ಪೀಠಗಳ ಸ್ಥಾಪನೆ, ಕೇವಲ ವ್ರತವಾಗಿದ್ದ ವೀರಮಾಹೇಶ್ವರ ಆಚರಣೆ, ವೀರಶೈವ ಹೆಸರಿನಲ್ಲಿ ಅಸ್ತಿತ್ವ ಪಡೆದ ರೀತಿ, ಲಿಂಗಾಯತಕ್ಕೆ ಅದು ಪರ್ಯಾಯ ಪದವೆಂಬ ಪ್ರತೀತಿಯಿಂದ ಲಿಂಗಾಯತ ಧರ್ಮ ಅಥವಾ ಬಸವತತ್ವ ಗೊಂದಲದ ಗೂಡಾಗಿ ಹೋಗಿತ್ತು. ಇದರಿಂದಾಗಿ ಅದ್ವೈತ–ಅವೈದಿಕ ತತ್ವವಾಗಿದ್ದ ಬಸವತತ್ವದ ಮೇಲೆ ಆಚಾರ್ಯ ತತ್ವಗಳಾದ ಮಡಿ–ಮೈಲಿಗೆ, ಸ್ಪೃಶ್ಯ–ಅಸ್ಪೃಶ್ಯ, ವರ್ಗ–ವರ್ಣ–ಲಿಂಗ–ಭೇದ, ಸ್ಥಾವರ ಪರಿಕಲ್ಪನೆಗಳು ಸವಾರಿ ಮಾಡಿದವು. ಇದರಿಂದ ನಿಜವಾದ ಬಸವಾನುಯಾಯಿಗಳಿಗೆ ನೋವಾಗಿ ಅಂತರಂಗದಲ್ಲಿ ಅಷ್ಟಾವರಣವನ್ನು ಆಚರಿಸುತ್ತಿದ್ದರೂ, ಬಹಿರಂಗದಲ್ಲಿ ಲಿಂಗದ ಹಂಗುತೊರೆದು ಆತ್ಮತತ್ವ ನಿಷ್ಠರಾದ ಮಂಟೇಸ್ವಾಮಿ, ಕೊಡೇಕಲ್ಲ ಬಸವಣ್ಣ ಮುಂತಾದವರು ಹೊರನಡೆದರು. ಹೀಗೆ ಮುರಿದುಬಿದ್ದ ಬಸವ ಸಂಸ್ಕೃತಿಯನ್ನು ದಿಗ್ಗಿ ಸಂಗಮನಾಥ, ಅಮರಕಲ್ಯಾಣದ ಹೆಸರಿನಲ್ಲಿ ನಾಗಾವಿಯ ಗುಂಡಬಸವೇಶ, ಧರ್ಮಕಲ್ಯಾಣದ ಹೆಸರಿನಲ್ಲಿ ಕೊಡೇಕಲ್ಲ ಬಸವಣ್ಣ, ಕಡೆಯ ಕಲ್ಯಾಣದ ಹೆಸರಿನಲ್ಲಿ ಮತ್ತೆ ಹುಟ್ಟುಹಾಕುವ ಪ್ರಯತ್ನ ಮಾಡಿದರು. ಲಿಂಗಾಯತ ಧರ್ಮದ ಆತ್ಮ ಅನುಭಾವ. ಈ ಅನುಭಾವ ಸಂಸ್ಕೃತಿಯನ್ನು ಪುನರುಜ್ಜೀವನಗೊಳಿಸುವುದಕ್ಕಾಗಿ ಒಬ್ಬ ವ್ಯಕ್ತಿಯ ಅಗತ್ಯವಿತ್ತು. ಆ ಅಗತ್ಯವನ್ನು ಪೂರೈಸಲು ಅವತರಿಸಿದವರೇ ಎಡಯೂರು ತೋಂಟದ ಸಿದ್ಧಲಿಂಗಯತಿಗಳು. ಬಸವತತ್ವ ನಿಷ್ಠರಾಗಿ, ದ್ವಿತೀಯ ಅಲ್ಲಮನಾಗಿ ಬಂದ ತೋಂಟದ ಸಿದ್ಧಲಿಂಗಯತಿಗಳ ಪೀಠಪರಂಪರೆಗೆ ಸೇರಿದ ಗದುಗಿನ ತೋಂಟದಾರ್ಯ ಸಂಸ್ಥಾನಮಠದ ೧೯ನೇ ಪೀಠಾಧಿಪತಿಗಳಾದ ಎಡೆಯೂರು ತೋಂಟದ ಡಾ. ಸಿದ್ಧಲಿಂಗ ಮಹಾಸ್ವಾಮಿಗಳು ಅದೇ ಬಸವತತ್ವ ನಿಷ್ಠೆಯಿಂದ ದುಡಿದು ತೋಂಟದಾರ್ಯ

ಹಸ್ತಪ್ರತಿ ವಿಭಾಗ, ಕನ್ನಡ ವಿಶ್ವವಿದ್ಯಾಲಯ ಹಂಪಿ ವಿದ್ಯಾರಣ್ಯ–೫೮೩೨೭೬

ಪರಂಪರೆಯ ತೃತೀಯ ಅಲ್ಲಮರೆಂದು ಹೇಳಿದರೆ ಅತಿಶಯೋಕ್ತಿಯಲ್ಲ!

ಬಸವತತ್ವದ ಸಾಹಿತ್ಯ ರೂಪವಾದ ವಚನಸಾಹಿತ್ಯದ ಪ್ರಕಟಣೆಯ ಇತಿಹಾಸದಲ್ಲಿ ಗದುಗಿನ ತೋಂಟದಾರ್ಯಮಠದ ಶ್ರೀಗಳಾದ ಡಾ. ಸಿದ್ಧಲಿಂಗ ಮಹಾಸ್ವಾಮಿಗಳಿಗೆ ಒಂದು ಅತ್ಯುನ್ನತ ಸ್ಥಾನ ಸಲ್ಲುತ್ತದೆ. ಲಿಂಗಾಯತ ಅಧ್ಯಯನ ಸಂಸ್ಥೆಯನ್ನು ಸ್ಥಾಪಿಸಿ ಬಸವತತ್ವಸಾಹಿತ್ಯ ಪ್ರಕಟಣೆ ಅದು ಕೇವಲ ಧಾರ್ಮಿಕ ಸಂಸ್ಥೆಯಾದ ಮಠದ ಕೆಲಸವಲ್ಲ ಅದೊಂದು ಸಾಮಾಜಿಕ ಕೆಲಸವೆಂಬುದನ್ನು, ಕನ್ನಡದ ಕೆಲಸವೆಂಬುದನ್ನು ಸಾರಿ ಹೇಳಿದರು. ಲಿಂಗಾಯತ ಪುರಾತನ ಸಾಹಿತ್ಯಮಾಲೆ ಇತ್ಯಾದಿಯಾಗಿ ಶರಣರ ವಚನ, ಸ್ವರವಚನ, ಪ್ರಾಚೀನಕಾವ್ಯ ಸಾಹಿತ್ಯದ ಬಹುದೊಡ್ಡ ಆಕರಕೋಶವನ್ನು ನಾಡಿಗೆ ನೀಡಿದ ಕೀರ್ತಿ ಶ್ರೀಗಳಿಗೆ ಸಲ್ಲುತ್ತದೆ. ಸಕಲಜೀವಾತ್ಮರಿಗೆ ಲೇಸನ್ನೇ ಬಯಸುವ ಬಸವತತ್ವದಲ್ಲಿ ಅಗಾಧವಾದ ನಂಬಿಕೆ ಇಟ್ಟುಕೊಂಡಿದ್ದ ಶ್ರೀಗಳು ಗದುಗಿನ ಮಠವನ್ನು ಸರ್ವಜನಾಂಗದ ಶಾಂತಿಯ ತೋಟವನ್ನಾಗಿ ರೂಪಿಸಿದ್ದರು. ಪ್ರತ್ಯೇಕ ಲಿಂಗಾಯತ ಧರ್ಮದ ಬದ್ಧತೆಯೆಂದರೆ ಪೂಜ್ಯರಿಗೆ ಬಸವತತ್ವದ ಅನುಷ್ಠಾನವೇ ಹೊರತು ಬೇರೇನೂ ಆಗಿರಲಿಲ್ಲ. ಅವರ ದೃಷ್ಟಿಯಲ್ಲಿ ಧರ್ಮವೆಂದರೆ ವಿಶಾಲ ಅರ್ಥದಲ್ಲಿ ಮನುಷ್ಯನನ್ನು ಮುನ್ನಡೆಸುವ ಒಂದು ವಾಹಕ. ಪ್ರತ್ಯೇಕ ಅಥವಾ ಸ್ವತಂತ್ರ ಧರ್ಮದ ಬೇಡಿಕೆ ಬಂದಾಗ ಅದಕೊಬ್ಬ ಸ್ಥಾಪಕ, ಸಿದ್ಧಾಂತ, ಮತ್ತು ಸಾಮಾಜಿಕ ವ್ಯವಸ್ಥೆ ಬೇಕಾಗುತ್ತದೆ. ಲಿಂಗಾಯತ ಧರ್ಮದ ಸ್ಥಾಪಕ ಬಸವಣ್ಣ. ಸಿದ್ಧಾಂತ ಮನುಷ್ಯರೆಲ್ಲರೂ ಸಮಾನರು ಎನ್ನುವುದು (ವಚನಸಿದ್ಧಾಂತ). ಭಾಷೆ ಕನ್ನಡ. ಸಾಮಾಜಿಕ ವ್ಯವಸ್ಥೆಯ ವಿಷಯಕ್ಕೆ ಬಂದರೆ ಇದರಲ್ಲಿ ಎಲ್ಲ ಜಾತಿಯ ಜನರೂ ಬರುತ್ತಾರೆ. ಈ ಧರ್ಮದಲ್ಲಿ ಸಾಮಾಜಿಕ ವ್ಯವಸ್ಥೆ ಇದೆ ಎನ್ನುವುದಕ್ಕೆ ಇದೇ ಸಾಕ್ಷಿ ಎಂಬುದು ಸ್ವಾಮೀಜಿಗಳ ಬಸವತತ್ವ ನಿಲುವಾಗಿತ್ತು. ಅಸ್ಪೃಶ್ಯತೆ, ಅನಕ್ಷರತೆ ಮತ್ತು ಮೌಢ್ಯ ಜಾತಿಯ ಹೆಸರಲ್ಲಿ ಸಾಮಾಜಿಕ ದೌರ್ಜನ್ಯಕ್ಕೆ ಒಳಗಾಗಿದ್ದ ಜಾಟವಾ (ಸಮಗಾರ) ಜನಾಂಗಕ್ಕೆ ಬಸವತತ್ವಗಳಾದ ಗುರು-ಲಿಂಗ-ಜಂಗಮ-ಕಾಯಕ-ದಾಸೋಹಗಳೆಂಬ ಪಂಚತತ್ವಗಳನ್ನು ಪರಿಚಯಿಸಿದರು. ಉತ್ತರ ಭಾರತದ ದೆಹಲಿ, ಉತ್ತರಪ್ರದೇಶ, ಹರಿಯಾಣ, ಪಂಜಾಬ, ಮತ್ತಿತರ ರಾಜ್ಯಗಳಲ್ಲಿ ಹರಡಿದ್ದ ಈ ಜನಾಂಗಕ್ಕೆ ಇಷ್ಟಲಿಂಗದ ದೀಕ್ಷೆ ನೀಡಿದರು. ಶ್ರೀಗಳಿಗೆ ಬಸವಣ್ಣನೇ ಭವಿಷ್ಯ, ಬಸವಣ್ಣನೇ ಭರವಸೆ, ಬಸವಣ್ಣನೇ ಪರಂಪರೆ ಹೀಗಾಗಿ ಬಸವತತ್ವದ ಆದರ್ಶಗಳನ್ನು ಬದುಕಿನುದ್ದಕ್ಕೂ ಆಚರಿಸಿ ತೋರಿಸಿದರು. ಭಾಲ್ಕಿಯ ಪೂಜ್ಯ ಡಾ. ಬಸವಲಿಂಗ ಪಟ್ಟದೇವರು ಸ್ಮರಿಸಿಕೊಳ್ಳುವಂತೆ "ಕರ್ನಾಟಕದಲ್ಲಿ ಬಸವತತ್ವ ತುಂಬಿ ತುಳುಕುತ್ತಿದೆ. ಮಹಾರಾಷ್ಟ್ರದಲ್ಲಿ ಯಾರೂ ಇಲ್ಲ. ತೆಲಂಗಾಣದಲ್ಲಿ ಯಾರೂ ಇಲ್ಲ. ನಮ್ಮ ಮಠ ಗಡಿಭಾಗದಲ್ಲಿದೆ. ಮಹಾರಾಷ್ಟ್ರದಲ್ಲಿ ಕಾರ್ಯಮಾಡಿದರೆ ಒಳ್ಳೆಯದು ಎಂದಿದ್ದರಂತೆ." ಪೂಜ್ಯರ ಈ ಮಾತನ್ನು ಅನುಪಾಲನೆಗೆ ತರಬೇಕೆಂದು ವಿದ್ವಾಂಸರಾದ ಡಾ. ಎಂ. ಎಂ. ಕಲಬುರ್ಗಿ ಅವರು ಸೂಚಿಸಿದಂತೆ "ಮಹಾರಾಷ್ಟ್ರ ಬಸವ ಪರಿಷತ್ತು" ಎಂಬ ಹೆಸರಿನಲ್ಲಿ ಮರಾಠಿಯಲ್ಲಿ ಬಸವಸಾಹಿತ್ಯವನ್ನು ಪ್ರಕಟಿಸಲು ಮುಂದಾದೆವು ಎನ್ನುತ್ತಾರೆ. ಮಹಾರಾಷ್ಟ್ರದಲ್ಲಿ ಬಸವಸಾಹಿತ್ಯದೊಂದಿಗೆ ಬಸವರಂಥ, ಬಸವಣ್ಣನವರ ರೂಪಕ ಪ್ರದರ್ಶನದೊಂದಿಗೆ ೩೬ ಜಿಲ್ಲೆಗಳಲ್ಲಿ ೬೦ ಜನರ ಯಾತ್ರೆ ಬಸವತತ್ವ ಪ್ರಸಾರ ಕಾರ್ಯಕ್ಕೆ ಮುಂದಾದದ್ದು ಗದುಗಿನ ಶ್ರೀಗಳವರ ಪ್ರೇರಣೆಯಿಂದ ಎಂಬುದನ್ನು ಸ್ಮರಿಸುತ್ತಾರೆ.

ಪುಸ್ತಕ ಪ್ರಕಟಣೆಯಲ್ಲಿ, ಆಚರಣೆಯಲ್ಲಿ ಬಸವತತ್ವವನ್ನು ಅಳವಡಿಸಿಕೊಂಡಿದ್ದ ಶ್ರೀಗಳು ಪ್ರತ್ಯೇಕ ಲಿಂಗಾಯತ ಧರ್ಮಪರ ಹೋರಾಟದಲ್ಲಿ ಸಕ್ರೀಯರಾಗಿದ್ದರಲ್ಲದೇ ಲಿಂಗಾಯತ ಪ್ರತ್ಯೇಕ ಧರ್ಮದ ಹೋರಾಟ ಪ್ರಾರಂಭವಾಗಿದ್ದೇ ಗದುಗಿನ ಶ್ರೀ ತೋಂಟದಾರ್ಯಮಠದ ಡಾ.ಸಿದ್ಧಲಿಂಗ ಮಹಾಸ್ವಾಮಿಗಳಿಂದ. ಹೊತ್ತವರಿಗೆ ಹೆಗಲ ನೋವು ಗೊತ್ತಾಗುತ್ತದೆಯೇ ಹೊರತು ಹೊರಿಸಿಕೊಂಡವರಿಗೆ ಹೇಗೆ ಗೊತ್ತಾಗುತ್ತದೆ.? ಎಂದು ಘರ್ಜಿಸಿದ ಡಾ. ತೋಂಟದಸಿದ್ಧಲಿಂಗ ಮಹಾಸ್ವಾಮಿಗಳು ಲಿಂಗಾಯತ ಧರ್ಮ ಅವೈದಿಕ ಧರ್ಮ-ಮನುಷ್ಯರನ್ನು ಪ್ರೀತಿಸುವ ಧರ್ಮ, ಕಾಯಕಧರ್ಮ ಎಲ್ಲರೂ ಸಮಾನರೆಂದು ಕಾಣುವ ಧರ್ಮ ಇದನ್ನು ಸಾರಿದಾತ ವಿಶ್ವಗುರು ಬಸವಣ್ಣ. ನಮ್ಮ ನಾಡಿನ ಸಾಂಸ್ಕೃತಿಕ ನಾಯಕ ಬಸವಣ್ಣ. ಆತನ ತತ್ವಗಳು ಜಾಗತಿಕ ಮಾನ್ಯತೆ ಪಡೆದಿವೆ. ಇಂಥ ಬಸವತತ್ವವನ್ನು ಬದುಕಿನಲ್ಲಿ ಆಚರಿಸುವ ಉದ್ದೇಶದಿಂದ ಲಿಂಗಾಯತ ಪ್ರತ್ಯೇಕ ಧರ್ಮದ ಅಗತ್ಯವಿದೆ ಎಂದು ಪ್ರತಿಪಾದಿಸುವುದರ ಮೂಲಕ ಸತ್ಯದ ನಿರೂಪಣೆಗೆ ಸಂಘರ್ಷ ಅನಿವಾರ್ಯ ಎಂದು ಕರೆಕೊಟ್ಟಿದ್ದ ಪೂಜ್ಯ ಡಾ. ತೋಂಟದಸಿದ್ಧಲಿಂಗ ಮಹಾಸ್ವಾಮಿಗಳು ಅಕ್ಷರಶಃ ಬಸವತತ್ವ ಮಹಾದಂಡನಾಯಕರಾಗಿ ಮುಂಚೂಣಿಯಲ್ಲಿದ್ದರು. ಈಗ ಅವರಿಲ್ಲ ಆದರೆ ಅವರು ಬಿಟ್ಟು ಹೋದ ಬಸವತತ್ವದ ಸಂದೇಶಗಳು ನಮ್ಮ ಜೊತೆಗಿವೆ. ಆ ಸಂದೇಶಗಳೇ ನಮಗೆ ಮಾರ್ಗದರ್ಶನ! ನಮ್ಮ ಬದುಕಿಗೆ ಸಂವಿಧಾನ!

■■

# ಮಾತೃಸ್ವರೂಪಿ

● ಡಾ. ರಾಜೇಂದ್ರ ಎಸ್. ಗಡಾದ

ಭಕ್ತರಿಗೆ ಗುರುವಾಗಿ, ನೊಂದವರಿಗೆ ಆಶ್ರಯದಾತರಾಗಿ, ಹಸಿದವರಿಗೆ ಅನ್ನದಾತರಾಗಿ ಮಠಕ್ಕೆ ಪೀಠಾಧಿಪತಿಗಳಾಗಿ ತಮ್ಮ ವಿಶಿಷ್ಠ ಆಲೋಚನೆ, ಪ್ರಖರ ವೈಚಾರಿಕ ಚಿಂತನೆಗಳಿಂದ ದಿಟ್ಟವಾದ ಹೋರಾಟಗಳಿಂದ ಅಪರೂಪವೆನ್ನಬಹುದಾದ ಪುಸ್ತಕಗಳಿಂದ ನಾಡಿನ ಮನೆ ಮಾತಾಗಿದ್ದ ಗದುಗಿನ ಶ್ರೀ ತೋಂಟದಾರ್ಯಮಠದ ಡಾ. ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳು ಒಮ್ಮಿಂದೊಮ್ಮೆಲೆ ನಮ್ಮನ್ನೆಲ್ಲಾ ಅಗಲಿ ಎತ್ತ ಹೋದರು? ಏಕೆ ಇಷ್ಟು ಬೇಗ ನಮ್ಮಿಂದ ದೂರವಾದರು? ಎಂಬ ಭಾವನೆ ಒಂದೆಡೆ ಒಂದೇ ಸವನೆ ಕಾಡುತ್ತಿದ್ದರೂ ಅವರೊಡನೆ ಕಳೆದ ಮೂರು ದಶಕದ ಅಪರೂಪದ ಕ್ಷಣಗಳ ನೆನಪುಗಳು ಅವರು ಎಲ್ಲೂ ಹೋಗಿಲ್ಲ ಇಲ್ಲಿಯೇ ನಮ್ಮೊಡನೆ ಇದ್ದಾರೆ ಎಂಬ ಸಮಾಧಾನ ಇನ್ನೊಂದಡೆ ಮೂಡಿ ಬರುತ್ತಿರುವುದು ನನಗೆ ಅಚ್ಚರಿಯನ್ನುಂಟು ಮಾಡಿದೆ.

ಕಳೆದ ಮೂರುವರೆ ದಶಕಗಳಿಂದ ಶ್ರೀಗಳ ಸಾಧನೆ ಸಿದ್ಧಿಗಳನ್ನು ಹತ್ತಿರದಿಂದ ಕಂಡ ನನಗೆ, ಅವರು ಒಬ್ಬ ಮಠದ ಸ್ವಾಮಿಗಳಷ್ಟೇ ಆಗಿದ್ದಲ್ಲ. ಪ್ರೀತಿಸಿ ಸಾಂತ್ವನ ಹೇಳುವ ತಾಯಿಯಾಗಿದ್ದರು; ಮುಖ ನೇವರಿಸಿ ಶಿಸ್ತು ಸಂಯಮ ತಿಳಿಸುವ ಕಾಳಜಿಯುಳ್ಳ ತಂದೆಯಾಗಿದ್ದರು; ಬಯ್ದು ಕಿವಿಹಿಂಡಿ ಬುದ್ಧಿ ಹೇಳುವ ಹಿರಿಯ ಅಣ್ಣನಾಗಿದ್ದರು; ಬೆನ್ನು ಚಪ್ಪರಿಸಿ ಹುರಿದುಂಬಿಸುವ ಗುರುವಾಗಿದ್ದರು. ಸನ್ಮಾರ್ಗದ ದಾರಿ ತೋರುವ ಮಾರ್ಗದರ್ಶಕರಾಗಿದ್ದರು.

ಬಾಲ್ಯದಿಂದಲೂ ನನಗಷ್ಟೇ ಅಲ್ಲ ನನ್ನ ಕುಟುಂಬದ ಸದಸ್ಯರೆಲ್ಲರಿಗೂ ಗದುಗಿನ ಶ್ರೀ ತೋಂಟದಾರ್ಯಮಠದ ಜಾತ್ರೆಯೆಂದರೆ ತುಂಬಾ ಅಚ್ಚುಮೆಚ್ಚು. ಪ್ರತಿವರ್ಷದ ಜಾತ್ರೆಯಲ್ಲಿ ನಮ್ಮ ತಂದೆ ಪುಟ್ಟ ಮಕ್ಕಳಾದ ನಮ್ಮನ್ನು ಶ್ರೀಮಠಕ್ಕೆ ಕರೆದುಕೊಂಡು ಹೋಗಿ ಗದ್ದುಗೆಗೆ ಕಾಯಿ ಕರ್ಪೂರ ಮಾಡಿಸಿಕೊಂಡು ರಥ ಬೀದಿಯಲ್ಲಿ ಸುತ್ತಾಡಿಸಿಕೊಂಡು ತಿಂಡಿ ತಿನಿಸುಗಳನ್ನು ಆಟಿಕೆಗಳನ್ನು ಕೊಡಿಸಿಕೊಂಡು ಮತ್ತೆ ಮಠಕ್ಕೆ ಕರೆತಂದು ಅಲ್ಲಿ ಕೆಲವು ಕಾಲ ಕುಳ್ಳಿರಿಸಿ ಅಲ್ಲಿಯ ಸ್ವಾಮಿಗಳನ್ನು ದೂರದಿಂದಲೇ ನಮಗೆ ತೋರಿಸಿ ಮರಳಿ ಮನೆಗೆ ಕರೆತರುತ್ತಿದ್ದ ನೆನಪುಗಳು ನನಗೆ ಇನ್ನೂ ಹಚ್ಚ ಹಸಿರಾಗಿವೆ. ಆ ವೇಳೆಯಲ್ಲಿ ನಮಗೆ ಶ್ರೀಗಳ ದರ್ಶನ ಭಾಗ್ಯ ದೊರೆಯುತ್ತಿದ್ದುದು, ಜಾತ್ರೆಯಲ್ಲಿ ತಿಂದ ತಿಂಡಿ ತಿನಿಸುಗಳಷ್ಟೇ ತೃಪ್ತಿಯನ್ನು ನೀಡುತ್ತಿತ್ತು.

ನಾನು ಹೈಸ್ಕೂಲ ಕಟ್ಟೆ ಹತ್ತಿದಾಗ ನಾನೊಬ್ಬನೇ ಗೆಳೆಯರೊಂದಿಗೆ ಬಂದು ಶ್ರೀಮಠದ ಜಾತ್ರೆಯಲ್ಲಿ ಪಾಲ್ಗೊಂಡು ಉತ್ತತ್ತಿ ತೂರಿ ತೇರನೆಳೆದು ಹಣ್ಣು ಕಾಯಿ ಮಾಡಿಸಿಕೊಂಡು ಹೋಗುತ್ತಿದ್ದೆನು, ಜೊತೆಗೆ ಜಾತ್ರೆಯಲ್ಲಿ ಆರಿಸಿಕೊಂಡು ಹೋದ ಉತ್ತತ್ತಿಗಳನ್ನು ಮನೆಯವರಿಗೆಲ್ಲ ಪ್ರಸಾದವೆಂದು ಹಂಚಿ ಸಂಭ್ರಮಗೊಳಿಸುತ್ತಿದ್ದ ನೆನಪುಗಳು ಮರೆಯಲು ಸಾಧ್ಯವೇ?

ಪೂಜ್ಯ ಶ್ರೀಗಳನ್ನು ಜಾತ್ರೆ ಕಾರ್ಯಕ್ರಮಗಳಲ್ಲಿ ಅದುವರೆಗೂ ದೂರದಿಂದಲೇ ಕಂಡಿದ್ದು ನಾನು ಅವರನ್ನು ಹತ್ತಿರದಿಂದ ಪ್ರಥಮವಾಗಿ ಕಂಡದ್ದು ೧೯೯೦ರಲ್ಲಿ. ನಮ್ಮ ಕುಟುಂಬಕ್ಕೆ ಆತ್ಮೀಯರಾದ ಹಾವೇರಿ ಜಿಲ್ಲೆಯ ಶಿಕ್ಷಕರೊಬ್ಬರು ತಮ್ಮ ಊರಿನ ಧಾರ್ಮಿಕ ಕಾರ್ಯಕ್ರಮಕ್ಕೆ ಪೂಜ್ಯರಿಗೆ ಆಹ್ವಾನ ನೀಡಲು ಬಂದಾಗ ಜೊತೆಗೆ ನನ್ನನ್ನು ಕರೆದುಕೊಂಡು ಹೋಗಿದ್ದರು. ಆವಾಗಲೇ ನಾನು ಪೂಜ್ಯರನ್ನು ಹತ್ತಿರದಿಂದ ಕಂಡಿದ್ದು ಎಲ್ಲರಂತೆ ಸಾಮಾನ್ಯ ಹಾಸುಗೆಯ ಮೇಲೆ ಕುಳಿತು ಆತ್ಮೀಯವಾಗಿ ಉಭಯ ಕುಶಲೋಪರಿ ಮಾಡುತ್ತಿದ್ದ ಶ್ರೀಗಳು, ನನ್ನನ್ನು ಕಂಡು ಈ ಹುಡುಗ ಯಾರು? ನಿಮಗೆ ಏನಾಗಬೇಕು ಈ ಬಾಲಕ ಎಂದು ಆ ಶಿಕ್ಷಕರನ್ನು ಕೇಳಿ, ನನ್ನಿಂದಲೇ ನನ್ನ ಹೆಸರು, ಊರು, ವಿದ್ಯಾಭ್ಯಾಸ ಎಲ್ಲವನ್ನೂ ಕೇಳಿಸಿಕೊಂಡಿದ್ದರಲ್ಲದೆ ಕಲ್ಲು ಸಕ್ಕರೆ ಕೊಟ್ಟು ಆಶೀರ್ವದಿಸಿ ಹೊಟ್ಟೆತುಂಬ ಭರ್ಜರಿ ಉಪಹಾರ ಮಾಡಿಸಿ

# ಶ್ರೀ ಸಂಗಮೇಶ್ವರ ನಿಲಯ, ಪಿ ಅಂಡ್ ಟಿ ಕ್ವಾಟರ್ಸ್ ಎದುರು ರಾಜೀವ ಗಾಂಧಿನಗರ ಗದಗ-೫೮೨೧೦೧

ಕಳುಹಿಸಿಕೊಟ್ಟಿದ್ದರು. ಇಷ್ಟು ದೊಡ್ಡ ಮಠದ ಸ್ವಾಮಿಗಳೊಬ್ಬರು ನನ್ನಂಥ ಚಿಕ್ಕ ಹುಡುಗನೊಂದಿಗೆ ಮಾತನಾಡಿ ಮೈನೇವರಿಸಿದ್ದು ನನಗೆ ಅತೀವ ಹೆಮ್ಮೆ ಆನಂದವನ್ನುಂಟು ಮಾಡಿತ್ತಲ್ಲದೇ ಅಂದು ಮರಳಿ ಮನೆಗೆ ಬಂದ ಮೇಲೆ ಮನೆಯವರಿಗೆಲ್ಲ, ಗೆಳೆಯರಿಗೆಲ್ಲ ಆ ಸುದ್ದಿಯನ್ನು ಪದೇ ಪದೇ ಹೇಳಿ ಸಂಭ್ರಮಪಟ್ಟಿದ್ದೆ.

"ಚೆನ್ನಾಗಿ ಅಭ್ಯಾಸ ಮಾಡು ಮಠದ ಶಿವಾನುಭವಗಳನ್ನು ಕೇಳು" ಎಂದು ಅಂದು ಶ್ರೀಗಳು ಹೇಳಿದ ಮಾತುಗಳು ನನಗೆ ಅರ್ಥವಾಗಿದ್ದಿಲ್ಲ. ಶ್ರೀಮಠದ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು ಪ್ರತಿ ಸೋಮವಾರ ತಡವಾಗಿ ಮನೆಗೆ ಹಿಂದಿರುಗುತ್ತಿದ್ದ ಹಾಗೂ ಇವತ್ತು ಪೂಜ್ಯರು ಈ ವಿಷಯ ಹೇಳಿದರು. ಹೀಗೆ ಮಾಡಬೇಕು ಎಂದು ನಮಗೆಲ್ಲ ಹೇಳುತ್ತಿದ್ದ ಅಣ್ಣ ಪ್ರಕಾಶ ಗಡಾದನ ಮಾತುಗಳನ್ನು ಕೇಳಿ ನನ್ನನ್ನು ಶಿವಾನುಭವಕ್ಕೆ ಕರೆದುಕೊಂಡು ಹೋಗು ಎಂದು ಕೇಳಿಕೊಂಡಾಗ ಐದಾರು ಸಲ ಅವನೊಂದಿಗೆ ಹೋಗಿ ಶ್ರೀಗಳ ನುಡಿಗಳನ್ನು ಕೇಳಿದಾಗ ಅವು ನನಗೆ ತುಂಬಾ ಹಿಡಿಸಿದವಷ್ಟೇ ಅಲ್ಲ. ನಾನು ಮುಂದೆ ಸ್ವತಂತ್ರವಾಗಿ ಶಿವಾನುಭವಗಳಲ್ಲಿ ಪಾಲ್ಗೊಳ್ಳುವಂತೆ ಪ್ರೇರೇಪಿಸಿದವು. ಅವಾಗಲೇ ನನಗೆ ಶಿವಾನುಭವಗಳೆಂದರೇನು? ಅಲ್ಲಿ ಏನು ಜರುಗುತ್ತದೆ ಎಂಬ ಸ್ಪಷ್ಟ ಪರಿಕಲ್ಪನೆ ಬಂದದ್ದು.

ಪೂಜ್ಯರ ಜೀವಿತಾವಧಿಯಲ್ಲಿ ಅನೇಕ ಸಲ ಅವರನ್ನು ಹತ್ತಿರದಿಂದ ಕಾಣುವ ಸೌಭಾಗ್ಯ ನನಗೊದಗಿ ಬಂದಿದ್ದರೂ, ಪ್ರತಿ ಬಾರಿಯ ಅವರ ಭೇಟಿ, ಪ್ರಸನ್ನವಾದ ಅವರ ಮುಖ, ಏನೋ ಒಂದು ರೀತಿಯ ಸಂಚಲನವನ್ನುಂಟು ಮಾಡುತ್ತಿತ್ತು. ನನಗೆ ಎಂತಹದೋ ಉತ್ಸಾಹವನ್ನು ನೀಡುತ್ತಿತ್ತು. ನನಗೆ ತುಂಬಾ ಆತ್ಮೀಯರು ನಾಡಿನ ಹಿರಿಯ ಮಕ್ಕಳ ಸಾಹಿತಿಗಳು ಆಗಿದ್ದ ವಿಜಾಪುರದ 'ಸಿಸು' ಸಂಗಮೇಶ ಅವರು ನಮ್ಮ ಮನೆಗೆ ಬಂದಾಗ ಒಂದಿಷ್ಟು ಇತ್ತೀಚಿನ ಪುಸ್ತಕಗಳನ್ನು ನೀಡಿ ಇವನ್ನು ತೋಂಟದಾರ್ಯಮಠಕ್ಕೆ ಹೋಗಿ ಖುದ್ದಾಗಿ ಶ್ರೀಗಳನ್ನು ಕಂಡು ಕೊಟ್ಟು ಬನ್ನಿರಿ. ಈಗಾಗಲೇ ಈ ಕುರಿತು ಅವರಿಗೆ ಪತ್ರ ಹಾಕಿದ್ದೇನೆ ಎಂದು ಹೇಳಿದರು. ನಾನು ಆ ಪುಸ್ತಕಗಳನ್ನು ತೆಗೆದುಕೊಂಡು (೧೯೯೨) ಸಂಜೆ ಶ್ರೀಮಠಕ್ಕೆ ಹೋಗಿ ಪೂಜ್ಯರಿಗೆ ನೀಡಿದೆ. ಅವರು ಪುಸ್ತಕಗಳನ್ನು ಸ್ವೀಕರಿಸಿ 'ಸಿಸು' ಅವರ ಮಕ್ಕಳ ಸಾಹಿತ್ಯ ಸೇವೆಯನ್ನು ಪ್ರಶಂಸಿಸಿ ಮಕ್ಕಳ ಸಾಹಿತ್ಯ ರಚನೆ, ಮುದ್ರಣ, ಮಾರಾಟದ ತೊಂದರೆಗಳನ್ನು ಏನೂ ಅರಿಯದ ನನ್ನೊಂದಿಗೆ ಬಹಳ ಹೊತ್ತು ಹಂಚಿಕೊಂಡರಲ್ಲದೆ ಮಕ್ಕಳ ಸಾಹಿತ್ಯಕ್ಕೆ ಬಿಜಾಪೂರದ ಕೊಡುಗೆಯನ್ನು ವಿವರಿಸಿ ಅದರ ಮಹತ್ವವನ್ನು ನನಗೆ ಮನಗಾಣಿಸಿದರು. ಅದುವರೆಗೂ ಕೆಲ ಬಿಡಿ ಮಕ್ಕಳ ಪದ್ಯ, ಪ್ರೀತಿ–ಪ್ರೇಮ ಕುರಿತಾದ ಕವನ ಚುಟುಕುಗಳನ್ನು ಬರೆದಿದ್ದ ನಾನು ಶ್ರೀಗಳ ಪ್ರಭಾವಶಾಲಿ ಮಾತುಗಳನ್ನು ಕೇಳಿ ನನ್ನ ಲೇಖನಿಯನ್ನು ಇನ್ನು ಮುಂದೆ ಮಕ್ಕಳ ಸಾಹಿತ್ಯಕ್ಕಾಗಿ ನೀಡಬೇಕೆಂದು ನಿರ್ಧರಿಸಿಬಿಟ್ಟೆ ಬಹುಶಃ ಆ ವೇಳೆಯಲ್ಲಿ ನಾನು ತೆಗೆದುಕೊಂಡ ನಿರ್ಧಾರ ಮಕ್ಕಳ ಸಾಹಿತ್ಯ ಕ್ಷೇತ್ರದಲ್ಲಿ ಇಂದು ನಾನು ಗುರುತಿಸಿಕೊಳ್ಳಲು ಕಾರಣವಾದದ್ದನ್ನು ಮರೆಯಲು ಸಾಧ್ಯವೇ ಇಲ್ಲ.

ನಾಡಿನಲ್ಲಿಯೇ ಪುಸ್ತಕದ ಸ್ವಾಮೀಜಿ ಎಂದು ಪ್ರಸಿದ್ಧವಾಗಿದ್ದ ಶ್ರೀಗಳ ಪುಸ್ತಕ ಪ್ರೀತಿ ತುಂಬಾ ಅಗಾಧವಾದುದು ಮತ್ತು ಅನುಪಮವಾದುದು. ಹೀಗಾಗಿಯೇ ಅವರು ಒಂದು ವಿಶ್ವವಿದ್ಯಾಲಯದ ಪ್ರಸಾರಾಂಗ ಮಾಡುವಷ್ಟು ಸಾಧನೆ ಮಾಡಲು ಸಾಧ್ಯವಾದದ್ದು. ನಾನು ೧೯೯೮ರಲ್ಲಿ ಗದಗ ಭಾಗದ ಹಿರಿಯ ಲೇಖಕರು, ನಿವೃತ್ತ ಶಿಕ್ಷಕ ಸಾಹಿತಿಗಳಾದ ಎನ್. ಜಿ. ಜಾಡಗೌಡರ ಅವರ ಪ್ರಕಟಿತ ಮತ್ತು ಪ್ರಸಾರಿತ ಚಿಂತನೆಗಳನ್ನು ಆಯ್ದು ಬೆಳಕಿನ ಹಾದಿ ಎಂಬ ಹೆಸರಿನಲ್ಲಿ ಚಿಂತನ ಸಂಕಲನವನ್ನು ಹೊರತರುತ್ತಿರುವ ವಿಷಯವನ್ನು ಪೂಜ್ಯರ ಮುಂದೆ ಪ್ರಸ್ತಾಪಿಸಿ ಅದಕ್ಕೊಂದು ಹಾರೈಕೆ ಬರೆದುಕೊಡಬೇಕೆಂದು ತುಂಬಾ ಅಂಜಿಕೆಯಿಂದ ವಿನಮ್ರವಾಗಿ ಕೇಳಿಕೊಂಡೆ ಅದಕ್ಕೆ ಅವರು ತುಂಬಾ ಸಂತೋಷಪಟ್ಟು ಒಳ್ಳೆಯ ಕೆಲಸ ಮಾಡುತ್ತಿದ್ದಿಯಾ, ಬೇಗ ಪ್ರಕಟಣೆ ಮಾಡು ಎಂದು ಹಾರೈಸಿದರಲ್ಲದೇ ಅರ್ಥಪೂರ್ಣವಾದ ಶುಭ ಹಾರೈಕೆಯನ್ನು ಬರೆದುಕೊಟ್ಟರು. ಅಷ್ಟೇ ಅಲ್ಲ ಆ ಕೃತಿಯನ್ನು ಶಿವಾನುಭವದಲ್ಲಿ ಅದ್ದೂರಿಯಾಗಿ ಬಿಡುಗಡೆ ಮಾಡಿ ನನ್ನಿಂದಲೇ ಪುಸ್ತಕ ಪರಿಚಯ ಭಾಷಣ ಮಾಡಿಸಿದರು. ನೂರಾರು ಪುಸ್ತಕಗಳನ್ನು ತಾವು ಪ್ರಕಟಿಸಿದ್ದರು ಕೂಡಾ ಒಂದು ಸಣ್ಣ ಪುಸ್ತಕ ಹೊರತಂದ ನನ್ನನ್ನು ಶ್ರೀಗಳು ಆಶೀರ್ವಚನದಲ್ಲಿ ತುಂಬಾ ಪ್ರಶಂಸಿಸಿದರು. ಇದೇ ಜಾಡಗೌಡರ ಅವರ ಮಹತ್ವಾಕಾಂಕ್ಷಿ ಕೃತಿಯಾದ 'ಶರಣ ಸಾಮ್ರಾಟ' ಹಸ್ತಪ್ರತಿಯನ್ನು ತೆಗೆದುಕೊಂಡು ಜಾಡಗೌಡರ ಸರ್ ಜೊತೆಗೆ ಇದರ ಪ್ರಕಟಣೆ ಬಹಳ ದಿನಗಳಿಂದ ಹಾಗೆಯೆ ಉಳಿದಿದೆ. ಇದಕ್ಕೆ ತಾವು ದಾರಿ ತೋರಿಸಬೇಕೆಂದು ವಿನಂತಿಸಿದೆ. ಅದಕ್ಕೆ ಪೂಜ್ಯರು ಇದು ಬಸವಣ್ಣನವರ ಕುರಿತು ಉತ್ತಮ ಕಾದಂಬರಿಯಾಗಿದೆ ಇದು ಸಮರಸ ಪತ್ರಿಕೆಯಲ್ಲಿ

ಧಾರವಾಹಿಯಾಗಿ ಬಂದದ್ದನ್ನು ನಾನು ಓದಿದ್ದೇನೆ ಎಂದು ನಮ್ಮೀರ್ವರಿಗೂ ಹೇಳುತ್ತಾ ರಾಜೇಂದ್ರ ಈ ಕಾದಂಬರಿಯನ್ನು ಪ್ರಿಂಟು ಮಾಡಿಸು ನಿನಗೆ ಆ ಸಾಮರ್ಥ್ಯ ಇದೆ ಎಂದು ಹೇಳಿದರಲ್ಲದೆ ಅದಕ್ಕೊಂದು ಅರ್ಥಪೂರ್ಣವಾದ ಹಾರೈಕೆಯನ್ನು ಬರೆದುಕೊಟ್ಟರು ಅಷ್ಟೇ ಅಲ್ಲ ಆ ಕೃತಿಯನ್ನು ಸಹ ನನ್ನಿಂದಲೇ ಪ್ರಕಾಶನಗೊಳಿಸಿ ಅದನ್ನೂ ಸಹ ಶಿವಾನುಭವದಲ್ಲಿ ವೈಭವದಿಂದ ಬಿಡುಗಡೆ ಮಾಡಿ ಆ ಕೃತಿಯ ಕುರಿತು ನನ್ನಿಂದಲೇ ಮಾತನಾಡಿಸಿ ನನ್ನನ್ನು ಜಾಡಗೌಡರ ಅವರೊಂದಿಗೆ ಸನ್ಮಾನಿಸಿ ಕೈತುಂಬ ಕಾಣಿಕೆಯನ್ನು ನೀಡಿದರು. ಪ್ರಕಾಶನ ಕ್ಷೇತ್ರದಲ್ಲೂ ನಾನು ಉತ್ತಮವಾದ ಕೆಲಸ ಮಾಡಲು ತೊಡಗಿಸಿದ ಕೀರ್ತಿ ಗದುಗಿನ ತೋಂಟದ ಶ್ರೀಗಳಿಗೆ ಸಲ್ಲುತ್ತದೆ.

ಪೂಜ್ಯರ ಈ ರೀತಿಯ ನಿರಂತರ ಪ್ರೋತ್ಸಾಹದಿಂದಾಗಿಯೇ ನಾನು ನನ್ನ ಪೂಜ್ಯ ವಿದ್ಯಾಗುರುಗಳಾದ ಖ್ಯಾತ ಲೇಖಕಿ ಡಾ. ಸರೋಜನಿ ಚವಲಾರ ಅವರೊಂದಿಗೆ ಪ್ರಸಿದ್ಧ ಗ್ರಾಹಕ ಚಳುವಳಿಯ ನೇತಾರ ಡಾ. ಅನಂತ ಹುಯಿಲಗೋಳ ಅವರ ಆಯ್ದ ಲೇಖನಗಳ ನಾಲ್ಕು ಸಂಪುಟಗಳನ್ನು (೧೩೦೦ ಪುಟ) ಹೊರತರುವಂತಾದೆನು. ಈ ಕೃತಿಗಳಿಗೂ ಕೂಡ ಪೂಜ್ಯರೆ ಶುಭನುಡಿ ಬರೆದು ಹಾರೈಸಿ ನನ್ನ ಕೆಲಸವನ್ನು ಶ್ಲಾಘಿಸಿದರು. ಈ ಎಲ್ಲ ಬೆಳವಣಿಗೆಗಳಿಂದ ತುಂಬಾ ಹತ್ತಿರವಾದ ಶ್ರೀಗಳು ಭೇಟಿಯಾದಾಗಲೆಲ್ಲ ಯಾವ ಪುಸ್ತಕ ಬರೆಯುತ್ತಿದ್ದೀಯಾ, ಏನು ಮುದ್ರಣ ನಡೆದಿದೆ ಎಂದು ವಿಚಾರಿಸುತ್ತಿದ್ದರು. ಒಮ್ಮೆ ಆರೋಗ್ಯ ವಿಷಯ ಕುರಿತಾದ ಕಾರ್ಯಕ್ರಮವೊಂದನ್ನು ಶ್ರೀಮಠದ ಶಿವಾನುಭವದಲ್ಲಿ ಏರ್ಪಡಿಸಿದ್ದೆ ಆವಾಗ ಭಕ್ತಿಸೇವೆ ವಹಿಸಿಕೊಳ್ಳಬೇಕಾದ ವ್ಯಕ್ತಿಯೊಬ್ಬರು ಕೈಕೊಟ್ಟಾಗ ನಮ್ಮ ತಂದೆಯವರೇ ಭಕ್ತಿಸೇವೆಯನ್ನು ವಹಿಸಿಕೊಂಡರು. ಆ ಸಂದರ್ಭದಲ್ಲಿ ನನ್ನ ತಂದೆ ತಾಯಿ ಸಹೋದರನ್ನೆಲ್ಲಾ ಶ್ರೀಮಠಕ್ಕೆ ಕರೆಯಿಸಿ ಆಶೀರ್ವದಿಸಿದ ಪೂಜ್ಯ ಶ್ರೀಗಳು. ನನ್ನ ತಂದೆಯ ಎದುರಿಗೆ 'ತುಂಬಾ ಶ್ಯಾಣ್ಯಾ ಮಗನನ್ನು ಹಡೆದಿದ್ದೀರಿ, ಅಂವಾ ನಿಮ್ಮ ಕೀರ್ತಿಯನ್ನು ಬೆಳಗಸ್ತಾನ, ಸಾಹಿತ್ಯದಲ್ಲಿ ಹೆಸರಮಾಡ್ತಾನ' ಎಂದು ಅವರ ಎದುರಿಗೆ ನನ್ನನ್ನು ಹೊಗಳಿದ್ದನ್ನು ನಾನು ಮರೆಯಲು ಸಾಧ್ಯವೆ ?

ಪೂಜ್ಯ ಶ್ರೀಗಳ ಒಂದು ವಿಶೇಷ ಗುಣವೆಂದರೆ ಒಮ್ಮೆ ಭೇಟಿಯಾದವರ ಬಗ್ಗೆ ಅವರ ಚರಿತ್ರೆ ಕೇಳಿ ತಿಳಿದುಕೊಂಡರೆ ಸಾಕು ಹಲವಾರು ವರ್ಷಗಳವರೆಗೂ ಅವರ ಬಗ್ಗೆ ಶ್ರೀಗಳು ನೆನಪಿಟ್ಟುಕೊಳ್ಳುತ್ತಿದ್ದರು. ಅವರ ನೆನಪಿನ ಶಕ್ತಿ ಅದ್ಭುತವಾಗಿತ್ತು. ನಾನು ಬೇರೆ ಸಂದರ್ಭದಲ್ಲಿ ಅವರನ್ನು ಭೇಟಿಯಾದಾಗ ಮನೆಯಲ್ಲಿ ಅಪ್ಪ ಹೇಗಿದ್ದಾರೆ? ಆರೋಗ್ಯ ಹೇಗಿದೆ ಎಂದು ವಿಚಾರಿಸುತ್ತಿದ್ದರು. ನನ್ನ ಅಪ್ಪ ಕಳೆದ ವರ್ಷ ನಿಧನರಾದಾಗ ಸುದೀರ್ಘವಾದ ಪತ್ರವೊಂದನ್ನು ಬರೆದು ಸಾಂತ್ವನ ಹೇಳಿದ್ದರಷ್ಟೇ ಅಲ್ಲಾ ಖುದ್ದಾಗಿ ಯೋಗಕ್ಷೇಮ ವಿಚಾರಿಸಿದ್ದರು. ಪೂಜ್ಯ ಶ್ರೀಗಳ ಮಾತಿನ ಆರಂಭ ನನಗೆ ತುಂಬಾ ಪ್ರೀಯವಾದದ್ದು ಅವರು ತಪ್ಪದೇ ಹೇಳುತ್ತಿದ್ದ 'ಬಸವಾದಿ ಪ್ರಮಥರನ್ನು ನೆನೆದು' ಎಂಬ ಮಾತು ನನ್ನ ಮೇಲೆ ತುಂಬಾ ಪರಿಣಾಮವನ್ನುಂಟುಮಾಡುತ್ತಿತ್ತು ಅದು ಎಷ್ಟರ ಮಟ್ಟಿಗೆ ಎಂದರೆ ನನ್ನ ಮಗನಿಗೆ 'ಪ್ರಮಥ' ಎಂಬ ಹೆಸರನ್ನೇ ಇಡುವಂತೆ ಪ್ರೇರೇಪಿಸಿತು. (ನನ್ನ ಮಗನ ಹೆಸರು ಪ್ರಮಥ ಗಡಾದ)

ಪೂಜ್ಯ ಶ್ರೀಗಳಿಗೆ ಮಕ್ಕಳೆಂದರೆ ಅತೀವ ಪ್ರೇಮ. ಮಕ್ಕಳ ಅಕ್ಕರೆಯ ನೆಹರು ಅವರಂತೆಯೇ ಪೂಜ್ಯಶ್ರೀಗಳು ಕೂಡಾ ಮಕ್ಕಳನ್ನು ತುಂಬಾ ಪ್ರೀತಿಸುತ್ತಿದ್ದರು ಮತ್ತು ಗೌರವಿಸುತ್ತಿದ್ದರು. ಮಠಕ್ಕೆ ಬರುವ ಮಕ್ಕಳನ್ನು ಜಾತಿ, ಅಂತಸ್ತು, ಯಾವುದನ್ನು ಲೆಕ್ಕಿಸದೇ ಪ್ರೀತಿಯಿಂದ ಮೈದಡವಿ ಆಶೀರ್ವದಿಸಿ ಹಣ್ಣು, ಕಲ್ಲು ಸಕ್ಕರೆ ಕೊಟ್ಟು ಹರಿಸುತ್ತಿದ್ದರು. ಶಿವಾನುಭವ ಸೇರಿದಂತೆ ಬೇರೆ ಬೇರೆ ಸಂದರ್ಭಗಳಲ್ಲಿ ಮಕ್ಕಳ ಪ್ರತಿಭೆಗೆ ತಕ್ಕ ಅವಕಾಶಗಳನ್ನು ಕಲ್ಪಿಸುತ್ತಿದ್ದರು. ಒಮ್ಮೆ ನಾನು ಒಂದು ವರ್ಷದ ನನ್ನ ಮಗನನ್ನು ಎತ್ತಿಕೊಂಡು ಬನ್ನಿ ಮುಡಿಯುವ ಕಾರ್ಯಕ್ರಮಕ್ಕೆ ಹೋಗಿ ನನ್ನ ಮಗನಿಂದ ಶ್ರೀಗಳಿಗೆ ಬನ್ನಿಯನ್ನು ಕೊಡಿಸಿದೆ ಆಗ ಶ್ರೀಗಳು ನನ್ನ ಮಗನನ್ನು ಎತ್ತಿಕೊಂಡು ತಲೆಯ ಮೇಲೆ ಕೈಇಟ್ಟು ನಿನ್ನಂತೆ ಗುಂಡು ಗುಂಡಾಗಿದ್ದಾನೆ ಮಗ ಎಂದು ಹೇಳಿದರಲ್ಲದೇ ಅವನ ಕೈಗೆ ಗರಿಗರಿಯಾದ ನೂರು ರೂಪಾಯಿ ನೋಟೊಂದನ್ನು ಕಾಣಿಕೆಯಾಗಿ ನೀಡಿದರು. ಆ ನೂರರ ನೋಟು ಇಂದಿಗೂ ಕೂಡ ನನ್ನ ಮಗನ ಹತ್ತಿರ ಕಳೆದ ಹತ್ತು ವರ್ಷಗಳಿಂದ ಜೋಪಾನವಾಗಿಯೇ ಇದೆ.

ಪೂಜ್ಯ ಶ್ರೀಗಳ ಇನ್ನೊಂದು ದೊಡ್ಡಗುಣವೆಂದರೆ ಪ್ರತಿಭೆಯನ್ನು ಗುರುತಿಸಿ ಗೌರವಿಸುವುದು. ಪೂಜ್ಯರ ಈ ಕ್ರಮ ತುಂಬಾ ಅನುಕರಣೀಯವಾದುದು ಮತ್ತು ಶ್ಲಾಘನೀಯವಾದುದು. ಯಾವುದೇ ವಯಸ್ಸಿನ, ಯಾವುದೇ ವರ್ಗದ ಯಾರೇ ಆಗಿರಲಿ ಸರ್ಕಾರದಿಂದಲೋ ಅಥವಾ ಖಾಸಗಿ ಸಂಸ್ಥೆಯಿಂದಲೋ ಪ್ರಶಸ್ತಿ, ಪುರಸ್ಕಾರ, ಬಹುಮಾನಗಳನ್ನು ಪಡೆದಿದ್ದನ್ನು ಪತ್ರಿಕೆಯಲ್ಲಿ ಓದಿ

ಅಂತಹವರನ್ನು ಗುರುತಿಸಿ ಆ ಪ್ರತಿಭೆಗಳನ್ನು ಶ್ರೀಮಠಕ್ಕೆ ಆಹ್ವಾನಿಸಿ ಶಿವಾನುಭವದಲ್ಲಿ ಸನ್ಮಾನಿಸುವುದು ಶ್ರೀಗಳಿಗೆ ಹಂಡೆ ಹಾಲು ಕುಡಿದಷ್ಟು ಸಂತೋಷವಾಗುತ್ತಿತ್ತು. ಪ್ರಶಸ್ತಿ ಪುರಸ್ಕೃತ ವ್ಯಕ್ತಿಗಿಂತಲೂ ಹೆಚ್ಚು ಪೂಜ್ಯರು ಸಂಭ್ರಮಿಸುತ್ತಿದ್ದನ್ನು ನಾನು ಹಲವಾರು ಸಲ ನೋಡಿ ಖುಷಿಪಟ್ಟಿದ್ದೇನೆ. ನನಗೆ ಡಾಕ್ಟರೇಟ್ ದೊರೆತ ಸಂದರ್ಭದಲ್ಲಿ, ಬೆಳಗಾವಿ ನಾಗನೂರ ರುದ್ರಾಕ್ಷಿಮಠದ ಹರ್ಡೇಕರ ಮಂಜಪ್ಪ ರಾಜ್ಯಮಟ್ಟದ ಮಕ್ಕಳ ಸಾಹಿತ್ಯ ಪ್ರಶಸ್ತಿ ಪಡೆದಾಗ, ಜಿಲ್ಲಾ ಮಕ್ಕಳ ಸಾಹಿತ್ಯ ವೇದಿಕೆಯ ಅಧ್ಯಕ್ಷನಾದಾಗ, ತಾಲೂಕಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷನಾದಾಗ, ಭಾಲ್ಕಿಯ ಡಾ. ಚನ್ನಬಸವ ಪಟ್ಟದೇವರು ಮಕ್ಕಳ ಸಾಹಿತ್ಯ ಪ್ರಶಸ್ತಿ ಬಂದಾಗ, ಕರ್ನಾಟಕ ವಿದ್ಯಾವರ್ಧಕ ಸಂಘ ಶ್ರೇಷ್ಠ ಮಕ್ಕಳ ಸಾಹಿತ್ಯ ಪ್ರಶಸ್ತಿ ನೀಡಿದಾಗ ಇಂತಹ ಹಲವಾರು ಸಂದರ್ಭಗಳಲ್ಲಿ ಪೂಜ್ಯ ಶ್ರೀಗಳು ನನ್ನನ್ನು ಶ್ರೀಮಠಕ್ಕೆ ಆಹ್ವಾನಿಸಿ ಮೈಸೂರು ಪೇಠಾ ತೊಡಿಸಿ, ಹಣ್ಣು ಪುಸ್ತಕಗಳನ್ನಿಟ್ಟು ಹೂಮಳೆಗರೆದಿದ್ದನ್ನು ನನ್ನ ಜೀವನದಲ್ಲಿ ಎಂದಿಗೂ ಮರೆಯಲು ಸಾಧ್ಯವಿಲ್ಲ. ಅಂತಹ ಸಂದರ್ಭದಲ್ಲಿ ನನ್ನನ್ನು ಕುರಿತು ಶ್ರೀಗಳು ಆಡಿದ ಮಾತುಗಳು ನಾನು ಸಾಹಿತ್ಯ ಕ್ಷೇತ್ರದಲ್ಲಿ ಬೆಳೆಯಲು ತುಂಬಾ ಕಾರಣವಾಯಿತೆಂಬುದನ್ನು ಪ್ರಾಂಜಲ ಮನಸ್ಸಿನಿಂದ ಒಪ್ಪಿಕೊಳ್ಳುತ್ತೇನೆ.

ಪೂಜ್ಯ ಶ್ರೀಗಳು ಪ್ರತಿ ಶಿವಾನುಭವದಲ್ಲಿ ನೀಡುವ ಹೊಸ ಹೊಸ ವಿಚಾರಗಳು, ಆಲೋಚನೆಗಳು, ನನ್ನನ್ನು ಎಷ್ಟೋ ಬಾರಿ ರೋಮಾಂಚನಗೊಳಿಸಿವೆ. ಅವರ ಮಾತುಗಳು ನನ್ನ ಅನೇಕ ಕವಿತೆಗಳಿಗೆ, ಲೇಖನಗಳಿಗೆ ವಸ್ತುಗಳಾಗಿವೆ. ನನಗೆ ಹಲವಾರು ಸಲ ಉಪನ್ಯಾಸ ನೀಡಲು ಅವಕಾಶ ಕಲ್ಪಿಸಿದ್ದಾರೆ. ನನ್ನಿಂದ ಪರಿಚಯ ಲೇಖನ, ಬಿನ್ನವತ್ತಳೆ, ವಿಶೇಷ ಬರಹಗಳನ್ನು ಬರೆಯಿಸಿದ್ದಾರೆ. ಪ್ರತ್ಯಕ್ಷವಾಗಿ, ಪರೋಕ್ಷವಾಗಿ ನಾನು ಬೆಳೆಯಲು ಮೂಲ ಕಾರಣರಾಗಿದ್ದರೆ. ಆರಂಭದಲ್ಲಿ ನನಗೆ ತಮ್ಮ ವಿದ್ಯಾಪೀಠದಲ್ಲಿ (ಹಾವೇರಿ ಜಿಲ್ಲೆಯ ನರೇಗಲ್ಲದ ಎಸ್.ಎಸ್.ಪಿ. ಪ್ರೌಢಶಾಲೆಯಲ್ಲಿ) ಶಿಕ್ಷಕನಾಗುವ ಭಾಗ್ಯವನ್ನು ಶ್ರೀಗಳು ಕರುಣಿಸಿದ್ದರು. ನನ್ನ ಸೇವಾ ಬದುಕು ಆರಂಭವಾದದ್ದೆ ಶ್ರೀಮಠದ ವಿದ್ಯಾಪೀಠದಿಂದಲೇ ಎಂಬ ಹೆಮ್ಮೆ ನನಗಿದೆ. ಹೀಗೆ ಪೂಜ್ಯರು ನನ್ನ ಅರಿವಿನ ಕ್ಷಿತಿಜವನ್ನು ವಿಸ್ತರಿಸುವಲ್ಲಿ ನಾನು ಸಾಹಿತ್ಯ ಹಾಗೂ ಸಂಘಟನಾ ಕ್ಷೇತ್ರದಲ್ಲಿ ಅಲ್ಪಸಾಧನೆಯನ್ನು ಮಾಡುವಲ್ಲಿ, ನನ್ನ ಬದುಕನ್ನು ಸುಂದರವಾಗಿ ಕಟ್ಟಿಕೊಳ್ಳುವಲ್ಲಿ ಕಾರಣಿಕರ್ತರಾಗಿದ್ದಾರೆ. ಅವರಿಂದ ನಾನು ಪಡೆದದ್ದು ಅಪಾರವಾಗಿದೆ. ನಾನು ಅವರಿಗೆ ಏನೂ ನೀಡಲಾಗಲಿಲ್ಲ ಎಂಬ ಭಾವನೆ ನನ್ನನ್ನು ಕಾಡುತ್ತಿದ್ದರೂ ಮನೆಯ ಶೋಕೇಸುಗಳಲ್ಲಿ ರಾರಾಜಿಸುತ್ತಿರುವ ಶ್ರೀಗಳು ತಮ್ಮ ಅಮೃತಹಸ್ತದಿಂದ ಕೊಡಮಾಡಿದ ಫಲಕಗಳು, ಸ್ಮರಣಿಕೆಗಳು, ಪೂಜ್ಯರು ಎಲ್ಲೂ ಹೋಗಿಲ್ಲ ನಮ್ಮ ಮನೆಯಲ್ಲಿಯೆ, ನನ್ನ ಮನದಲ್ಲಿಯೇ ಸದಾಕಾಲ ಇದ್ದಾರೆಂಬ ಸಮಾಧಾನವನ್ನು ನೀಡುತ್ತಿವೆ.

■■

---

**ಪಾಪಿಯಧನ ಪ್ರಾಯಶ್ಚಿತ್ತಕ್ಕಲ್ಲದೆ ಸತ್ಪಾತ್ರಕ್ಕೆ ಸಲ್ಲದಯ್ಯಾ।**
**ನಾಯ ಹಾಲು ನಾಯಿಗಲ್ಲದೆ ಪಂಚಾಮೃತಕ್ಕೆ ಸಲ್ಲದಯ್ಯಾ!**
**ನಮ್ಮ ಕೂಡಲ ಸಂಗನ ಶರಣರಿಗಲ್ಲದೆ**
**ಮಾಡುವ ಅರ್ಥವು ವ್ಯರ್ಥ ಕಂಡಯ್ಯಾ.**

**–ಬಸವಣ್ಣ**

ಸತ್ಯ ಶುದ್ಧ ಕಾಯಕದಿಂದ ಪ್ರಾಪ್ತವಾದುದನ್ನು ಅರ್ಪಿಸಿದರೆ ಮಾತ್ರ ಭಗವಂತನು ಸ್ವೀಕರಿಸುತ್ತಾನೆ. ಮೋಸ, ವಂಚನೆಯಿಂದ ಗಳಿಸಿದುದನ್ನು ಭಗವಂತನು ಸ್ವೀಕರಿಸಲಾರ. ನಾಯಿಯ ಹಾಲು ನಾಯಿಮರಿಗೆ ಮಾತ್ರ ಉಪಯುಕ್ತ. ಅದು ಪಂಚಾಮೃತಕ್ಕೆ (ಭಗವಂತನಿಗೆ) ಸಲ್ಲಲಾರದು. ಹಾಗೆಯೇ ಪಾಪ ಕಾರ್ಯಗಳಿಂದ ಪ್ರಾಪ್ತವಾದುದು ಪ್ರಾಯಶ್ಚಿತ್ತಕ್ಕೆ, ಪಾಪಿಗಳಿಗೆ ಮಾತ್ರ ಸಲ್ಲುತ್ತದೆ, ಶರಣ–ಸಂತರಿಗೆ ಸಲ್ಲಲಾರದು. ಶರಣರಿಗೆ ಸಂತರಿಗೆ ತನ್ಮೂಲಕ ಭಗವಂತನಿಗೆ ಸಮರ್ಪಿತವಾಗದ ಸಂಪತ್ತು ಎಷ್ಟಿದ್ದರೂ ಅದು ನಿರರ್ಥಕವಾದುದು ಎಂಬ ಭಾವ.

# ಹರಳಯ್ಯ–ಮಧುವರಸರು

● ಸಿದ್ಧಯ್ಯ ಪುರಾಣಿಕ

ಶರಣಸಮಾಜದ ನಕ್ಷತ್ರಲೋಕದಲ್ಲಿ ತತ್ತ್ವಕ್ಕಾಗಿ ಜೀವತೆತ್ತ ಧೀರತೆಯ ಧ್ರುವತಾರೆಗಳಾಗಿ ಬೆಳಗುತ್ತಲಿರುವರು ಹರಳಯ್ಯ ಮಧುವರಸರು. ಭಾರತ ದೇಶಕ್ಕೆ, ಹಿಂದೂ ಸಮಾಜಕ್ಕೆ ಕ್ಷಯರೋಗವಾಗಿ ಅಂಟಿಕೊಂಟು ಬಂದಿದ್ದ, ಈಗಲೂ ಅಲ್ಲಲ್ಲಿ ಹರಡಿಕೊಂಡಿರುವ, ಅಸ್ಪೃಶ್ಯತೆಯ ನಿವಾರಣೆಗಾಗಿ ಆಹುತಿಯಾದ ಹುತಾತ್ಮರವರು. ದೇಶಕ್ಕಾಗಿ, ಧರ್ಮಕ್ಕಾಗಿ, ಹೆಣ್ಣಿನ ಮಾನರಕ್ಷಣೆಗಾಗಿ, ಸ್ವಾಮಿನಿಷ್ಠೆಗಾಗಿ ಹುತಾತ್ಮರಾದವರ ಉದಾಹರಣೆಗಳು ವಿರಳವಲ್ಲ ವಿಶ್ವದ ಇತಿಹಾಸದಲ್ಲಿ. ಆದರೆ ಹರಳಯ್ಯ ಮಧುವರಸರ ಬಲಿದಾನವೇ ಬೇರೆ ರೀತಿಯದು. ಇಂದಿಗೂ ಜಗತ್ತಿನ ನಾನಾ ಭಾಗಗಳಲ್ಲಿ ವರ್ಣಭೇದ, ಜಾತಿಭೇದ ಮುಂತಾದ ಅನೇಕ ರೂಪಗಳಲ್ಲಿ ಬೇರು ಬಿಟ್ಟಿರುವ ಮಾನವ ಮಾನವರಲ್ಲಿಯ ಮೇಲು ಕೀಳಿಗೆ, ತಾರತಮ್ಯಭಾವಕ್ಕೆ, ಭೇದಬುದ್ಧಿಗೆ, ಅಸಹನೆಗೆ, ವಿಷಮತೆಗೆ ಕೊಡಲಿಯೇಟಾಗಲು ಬಯಸಿ ತಮ್ಮ ಆತ್ಮ ಒಪ್ಪಿದ ಅಮರತತ್ತ್ವಕ್ಕೆ ತಾವೇ ಆಹುತಿಯಾದ ಅನುಪಮ ಹುತಾತ್ಮರಿವರು.

ಕಲ್ಯಾಣದ ಕೇರಿಯೊಂದರಲ್ಲಿ ಕುಟೀರವೊಂದು ಕಂಗೊಳಿಸುತ್ತಿತ್ತು. ಅಲ್ಲಿಂದ 'ಸ್ಥೂಲ, ಸೂಕ್ಷ್ಮ, ಕಾರಣಗಳೆಂಬ ಮೂರು ಕಂಬವ ನೆಟ್ಟು, ಆಗು ಹೋಗೆಂಬ ದಡಿಗೋಲಿನಲ್ಲಿ ಅಗಡದ ಎಮ್ಮೆಯ ಚರ್ಮವ ತೆಗೆದು, ಉಭಯನಾಮವೆಂಬ ನಾರಿನಲ್ಲಿ ತಿತ್ತಿಯನೊಪ್ಪವ ಮಾಡಿ, ಭಾವವೆಂಬ ತಿರುಗುಡಿನಲ್ಲಿ ಸರ್ವಸಾರವೆಂಬ ಕಾರದ ನೀರ ಹೊಯ್ದು, ಅಟ್ಟೆಯ ದುರ್ಗಣವ ಕೆಟ್ಟು ಮೆಟ್ಟುವರೆ ಅವರಿಗೆ ಮೆಟ್ಟಿಸ ಬಂದೆ ಮೆಟ್ಟಡಿಯ ಚಪ್ಪಲ' ಎಂಬ ಸ್ವರ ತೇಲಿ ಬರುತ್ತಿತ್ತು. ಅದು ಶಿವಶರಣ ಹರಳಯ್ಯನ ಕುಟೀರ. ಹೆಂಡತಿಯ ಹೆಸರು ಕಲ್ಯಾಣಿ, ಮಗನ ಹೆಸರು ಶೀಲವಂತಯ್ಯ.

**ಎಲ್ಲರಿಗೆ ಕಾಯಕವುಳ್ಳ ಕಟ್ಟಿನ ನೇಮ**
**ಹರಳ್ಳಯ್ಯಗಳಿಗೆ ವ್ರತ ಬಂದು–ಶರಣರ**
**ಮೆಲ್ಲಡಿಗಳಿಗೆ ಚರಣವ**
**ಚರಣವ ಗೈವುತ ಶರಣಾಳಿಗೀವುತ**
**ಕರುಣದಿಂದವರು ಕುಡುವುದನು ಕೈಕೊಂಡು**
**ಹರನ ಜಂಗಮಕೆ ಉಣಿಸುವ**

ಹುಟ್ಟಿನಿಂದ ಹೊಲೆಯನಾದರೂ ಶಿವಕಲೆಯ ನೆಲೆಯನ್ನರಿತು ಶರಣನಾಗಿದ್ದ ಹರಳಯ್ಯ.

**ಕುಲದಲ್ಲಿ ಹೊಲೆಯನವ ಹೊಲಬಿನಲ್ಲಿ ಹೊಲೆಯಲ್ಲ**
**ಹೊಲೆಯ ನೆಲೆಬಲ್ಲ ಘನಶರಣ–ಹರಳಯ್ಯ**
**ನೆಲಸಿ ಕಲ್ಯಾಣಪುರದೊಳಗೆ**
**ತನುಮನಧನ ಸವೆಸಿ ಮನೆಯ ಕಾಯಕ ಮಾಡಿ**
**ಅನುಭಾವಿಯಾದ ಹರಳಯ್ಯ–ಮಂಟಪಕೆ**
**ಮಣಿಮಾಲೆಯಾದ ಶಿವಮತಕೆ**

ಹೊಲೆಯನಾಗಿ ಹುಟ್ಟಿ ಶಿವಮತದ ಮಣಿಮಾಲೆಯಾಗುವುದು ಸಾಮಾನ್ಯ ಸಾಧನೆಯೆ? ಸಾಮಾನ್ಯರನ್ನು ಅಸಾಮಾನ್ಯರನ್ನಾಗಿ ಮಾಡಿದುದೇ ಶರಣ ಧರ್ಮದ ಶ್ರೇಷ್ಠತೆ. ಹರಳಯ್ಯನಿದಕ್ಕೆ ಹೆಮ್ಮೆಯ ನಿದರ್ಶನ. ಒಮ್ಮೆ ಕಲ್ಯಾಣದ ಬೀದಿಯಲ್ಲಿ ಬಸವಣ್ಣನವರು ಹೊರಟಿದ್ದರು. ಇಕ್ಕೆಲದ ಭಕ್ತಸಮೂಹ ಶರಣೆನ್ನಲು ತಾವೂ ಶರಣೆನ್ನುತ್ತ ಹೊರಟಿದ್ದರು. ನೋಡುವ ಕಣ್ಗಳಿಗೆ ಹಬ್ಬದಂತಿತ್ತು ಆ ನೋಟ. ಹರಳಯ್ಯನು 'ಶರಣು ಬಸವಯ್ಯ' ಎಂದು ತನ್ನ ಭಕ್ತಿಯ ಕಾಣಿಕೆಯನ್ನು ಅರ್ಪಿಸಿದ.

**ಪೊಡ್ವಾಡ ಪುರುಷನೆ ಪರವಾದಿದಲ್ಲಣನೆ**
**ಪಾವನ ಮೂರ್ತಿ ಪುರುಷವೆ ಬಸವಣ್ಣ**
**ದೇವ ನಿಮ್ಮಡಿಗೆ ಶರಣಾರ್ಥಿ**
**ಶರಣೆಂದ ಹರಳನಿಗೆ ಮರಳಿ ಬಸವೇಶ್ವರನು**
**ಶರಣು ಶರಣಾರ್ಥಿ ಎನುತಲಿ ತಾ ತನ್ನ**
**ಅರಮನೆಗಾಗಿ ನಡೆದನು**

ಹರಳಯ್ಯನ ಕರುಳು ಕಿವುಚಿದಂತಾಯಿತು, 'ಇಂದೆಂಥ ಪ್ರಮಾದವಾಯಿತು. ನಾನು ಒಮ್ಮೆ ಶರಣೆಂದರೆ ಅಣ್ಣನವರು ಎರಡು ಸಲ ಶರಣೆಂದು ಹೋದರಲ್ಲ. ಅವರು ಎರಡು ಸಲ ಶರಣೆಂದಾಗ ನಾನು ಕಲ್ಲಿನ ಕಂಬದಂತೆ ನಿಂತುಬಿಟ್ಟೆನಲ್ಲ. ಅವರ ಅಡಿಗಳ ಹುಡಿಯಲ್ಲಿ ಹೊರಳಿ ಮಡಿಯಾಗಬಾರದಿತ್ತೆ!

**ಶರಣೆಂದು ನಾನೆಂದೆ ಶರಣು ಶರಣೆಂದಾತ**
**ಶರಣೊಂದ ಮೇಲೆ ಹೊರಿಸಿದನು–ಬಸವನಿಗೆ**
**ಶರಣ ನಾ ಹೇಗೆ ತೀರಿಸಲಿ?**

ಎಂದು ಹಳಹಳಿಸತೊಡಗಿದ, ತಳಮಳಿಸತೊಡಗಿದ ಹರಳಯ್ಯ. ಕಲ್ಯಾಣ ಗುಣಗಳೇ ಹೆಣ್ಣಾಗಿ ಹುಟ್ಟಿದಂತಿದ್ದ ಕಲ್ಯಾಣಿ ಹೇಳಿದಳು: 'ಸುಮ್ಮನೆ ಸುಯ್ಯುವಿರೇಕೆ? ಅಣ್ಣನವರಿಗೊಂದು ಜೋಡು ಪಾದರಕ್ಷೆ ಮಾಡೋಣ. ಅವುಗಳನ್ನು ಅವರ ಶ್ರೀ ಚರಣಗಳಿಗೆ ಅರ್ಪಿಸಿ 'ಕ್ಷಮಿಸಿ'ರೆಂದು ಕೇಳಿಕೊಳ್ಳೋಣ. ಕರುಣಾನಿಧಿಗಳಾದ ಅವರು ಕ್ಷಮಿಸದಿರರು.

ಹೆಂಡತಿಯ ಸಲಹೆ ಹರಳಯ್ಯನಿಗೆ ಒಪ್ಪಿತವಾಯಿತು. ಅವರಿಬ್ಬರೂ ಇನ್ನಿಂದು ವಿಚಾರ ಮಾಡಿದರು. ಎಲ್ಲರಿಗೂ ಸಲ್ಲಿಸುವ ಪಾದರಕ್ಷೆಗಳನ್ನು ಅಣ್ಣನವರಿಗೂ ಅರ್ಪಿಸಿದರೆ ಹೇಗೆ? ಅವರಿಗಾಗಿ ಸಿದ್ಧಗೊಳಿಸುವ ಪಾದರಕ್ಷೆಗಳಲ್ಲಿ ಏನಾದರೂ ವಿಶೇಷತೆ ಇರಲೇಬೇಕು. ತಮ್ಮಿಬ್ಬರ ತೊಡೆಯ ಚರ್ಮದ ಮೇಲು ಹೊದಿಕೆ ಆ ಚೆಮ್ಮಾವುಗೆಗಳಿಗಿರಬೇಕು.

**ಮರುದಿನವೆ ಹರಳಯ್ಯ ಕೊರೆದ ಬಲದೊಡಿ ಚರ್ಮ**
**ಹರನೆಂದು ಮಡದಿಯೆಡದೊಡೆಯ–ತಾ ಕೊಯ್ದು**
**ಭರದಿ ಹದಮಾಡಿ ಒಣಗಿಸಿದ**

ಆಮೇಲೆ ತನ್ನ ಕಾಯಕದ ಕೌಶಲ್ಯವನ್ನೆಲ್ಲ ಬಳಸಿ ಬೆಳಗುವ ಚೆಮ್ಮಾವುಗೆಗಳನ್ನು ಮಾಡಿದ.

**ಒಪ್ಪವನಿಕ್ಕಿದ ಎಪ್ಪತ್ತುಗೊಂಡೆಯ**
**ಸರ್ಪನ ಹೆಡೆಗೈಯುತಲಿ ಚೆಮ್ಮಾವುಗೆಯ**
**ಸುಪ್ಪಾಣಿಯಿಂದ ನಯವಿಟ್ಟು**

ಮರುದಿನ ಸ್ನಾನಮಾಡಿ ನೊಸಲಿನಲ್ಲಿ ಭಸಿತವನ್ನಿಟ್ಟು ಕಂಠಕರಗಳಲ್ಲಿ ರುದ್ರಾಕ್ಷಿ ಶೋಭಿಸುತ್ತಿರಲು 'ಸದ್ಭಕ್ತಿ ಸೀಮೆ ಪರಂಜ್ಯೋತಿ ಹರಳಯ್ಯ' ಆ ಪಾದರಕ್ಷೆಗಳನ್ನು ಶುಭ್ರವಸ್ತ್ರದಲ್ಲಿ ಸುತ್ತಿಟ್ಟುಕೊಂಡು ಧರ್ಮಸ್ವರೂಪ ಬಸವಣ್ಣನವರ ಅರಮನೆಗೆ ಹೋದನು. ಅಲ್ಲಿ ಅರಮನೆಯ ಅಂಗಳದಲ್ಲಿ ನಿಂತು ನಾಲ್ದೆಸೆಗೆ ನೋಟವನ್ನು ಹರಿಸಿ ನೋಡಿದ:

**ಕಿಕ್ಕಿರಿದು ಜನ ಬಂದು ಸಕ್ಕರೆಗೆ ಇರಿವೆಗಳು**
**ಮುಕ್ಕರಿದವೊ ವಚನ ಅಮೃತಕೆ ಎಂಬಂತೆ**
**ಉಕ್ಕಿ ಅರಮನೆಯ ಹೊರಸೂಸಿ**

ಈ ಜನಸಂದಣಿಯನ್ನು ದಾಟಿ ಹೋಗಿ ಅಣ್ಣನವರನ್ನು ಕಾಣುವುದೆಂತು ಎಂದು ಹರಳಯ್ಯ ದಿಙ್ಮೂಢನಾಗಿ ನಿಂತುಬಿಟ್ಟ. ಕಣ್ಣರಿಯದಿದ್ದರೂ ಕರುಳರಿಯದೇ? ಬಸವಣ್ಣನವರಿಗೆ ಹರಳಯ್ಯ ಬಂದುದು ಹೇಗೋ ಗೊತ್ತಾಯಿತು.

**ಶಿವನಾಣೆ ಬಸವನಿಗೆ, ಶಿವಭಕ್ತಪರಿತ್ಯಾಗಿ**
**ತವಕದಲಿ ಬಂದ ಬಾಗಿಲಕೆ–ಹರಳಯ್ಯ**
**ಶಿವರೂಪವೆಂದು ನಮಿಸಿದನು**

ಇಷ್ಟಕ್ಕೆ ಬಿಡಲಿಲ್ಲ ಬಸವಣ್ಣ. ಸತಿ ನೀಲಾಂಬೆಯಿಂದಲೂ ಶರಣೆನ್ನಿಸಿದರು. ಹರಳಯ್ಯನಿಗೆ ಗಾಯದ ಮೇಲೆ ಬರೆ ಕೊಟ್ಟಂತಾಯಿತು. ಒಂದು ಶರಣಿನ ಹೊರೆಯನ್ನಿಳುಹಿ ಹೋಗಲೆಂದು ಬಂದರೆ ಭಕ್ತಜನ ಭಾಗ್ಯ ಶುಭೋದಯ ಬಸವಣ್ಣನವರು ತನಗೇ ಮತ್ತೆ ನಮಿಸಬೇಕೆ? ಸಾಲದುದಕ್ಕೆ ತಾಯಿ ನೀಲಮ್ಮನವರಿಂದಲೂ ಶರಣೆನ್ನಿಸಬೇಕೆ? ಶಿವಶಿವಾ, ಇನ್ನಷ್ಟು ಅಧೋಗತಿಗೆ ಇಳಿದೆನಲ್ಲ ಗತಿ ಯಾವುದು ಎಂದು ಮಿಡುಕುತ್ತಲಿದ್ದ ಮೃಡಶರಣ ಹರಳಯ್ಯನನ್ನು ಸಂತೈಸುತ್ತ ಬಸವಣ್ಣ ಹೇಳಿದ ಹರಳಯ್ಯ, ಹೊಲೆಯಲ್ಲಿ ಹುಟ್ಟಿದೆನೆಂಬ ಭಾವನೆಯನ್ನು ಇನ್ನಾದರೂ ಬಿಟ್ಟುಬಿಡು.

**ಹೊಲೆಯಲಲ್ಲದೆ ಲೋಕ ತಲೆಯಲ್ಲಿ ಹುಟ್ಟುವುದೆ?**
**ಹೊಲೆಯ ಎಣಿಸಿದರೆ ಕುಲವುಂಟೆ? ಶರಣರಿಗೆ**
**ಹೊಲಬುಳಿದು ಬೇರೆ ಕುಲವುಂಟೆ?**

ಹೊಲೆಗಂಡಲ್ಲದೆ ಪಿಂಡದ ನೆಲೆಗಾಶ್ರಯವಿಲ್ಲ. ಜಲಬಿಂದುವಿನ ವ್ಯವಹಾರ ಒಂದೇ. ಕರ್ಣದಲಿ ಜನಿಸಿದವರುಂಟೆ ಜಗದೊಳಗೆ? ಯಾಕೆ ಹಗಲೆಲ್ಲ ಹೊಲೆಯ ನಾನು ಎಂಬ ಭಾವನೆಯಿಂದ ಬಳಲುತ್ತಲಿರುವಿರಿ? ಯಾರು ಹೇಳುವರು ನೀವು ಹೊಲೆಯರೆಂದು. ಹಾಗೆ ಹೇಳುವವರೇ ಹೊಲೆಯರು. ಕೊಲ್ಲುವನೆ ಮಾದಿಗನು; ಹೊಲಸು ತಿಂಬುವನೆ ಹೊಲೆಯ. ಶಿವಭಕ್ತರಾಗಿ ಭವವನ್ನು ಗೆದ್ದ ನೀವು ಹೊಲೆಯರೆ? ಅಲ್ಲಲ್ಲ ನೀವು ಶರಣರು. ಶರಣರ ಕಾಯವೇ ಕೈಲಾಸ. ಕೈಲಾಸಕ್ಕೆ ನಾನು ನಮಿಸಿದರೆ ತಪ್ಪೆ?

ಹರಳಯ್ಯನಿಗೆ ಏನುತ್ತರ ಕೊಡಬೇಕೆಂಬುದು ತಿಳಿಯಲಿಲ್ಲ. ಅವನು ಕಲಿತವನಲ್ಲ; ಆದರೆ ಆತ್ಮಶ್ರೀಯನ್ನು ಸಂಪಾದಿಸಿದವ. 'ಯತೋ ವಾಚೋ ನಿವರ್ತಂತೇ' ಆ ಸ್ಥಿತಿಯನ್ನು ಪಡೆದವ. ಅಣ್ಣನವರ ಅಮೃತವಾಣಿಗೆ ಉತ್ತರವಾಗಿ ಏನನ್ನು ತಾನೆ ನುಡಿಯಬಲ್ಲ? ನಾಲಗೆ ಮಾಡಲಾಗದುದನ್ನು ಕಣ್ಣು ಮಾಡಿತು. ಆನಂದದ ಅಶ್ರುಗಳನ್ನು ಉಕ್ಕಿಸಿತು. ಅವುಗಳಿಂದ ಅಣ್ಣನವರ ಪಾದ ತೊಳೆಯುತ್ತ ಹರಳಯ್ಯನೆಂದ; 'ಆವುದು ತಪ್ಪು ಆವುದು ಒಪ್ಪೆಂಬುದನ್ನು ನಾನೇನ ಬಲ್ಲೆ ತಂದೆ? ಎನ್ನ ಭರಭಾರ ನಿಮ್ಮದು. ಎನ್ನ ಯೋಗಕ್ಷೇಮ ನಿಮ್ಮದು. ಎನ್ನ ಹಾನಿವೃದ್ಧಿ ನಿಮ್ಮದು, ನಾನು ತಮಗಾಗಿ ತಂದಿರುವ ಈ ಚೆಮ್ಮಾವುಗೆಗಳನ್ನಾದರೂ ಸ್ವೀಕರಿಸಿ ನನ್ನ ಕುಲಕೋಟಿಯನ್ನೆಲ್ಲ ಉದ್ಧರಿಸುವ ಕೃಪೆ ಮಾಡಿರಿ !'

ಬಸವಣ್ಣನವರು ಬಿಚ್ಚಿ ನೋಡಿದರೆ ಹರಳಯ್ಯನಿತ್ತ ಗಂಟನ್ನು. ಶರಣಸತಿ ಲಿಂಗಪತಿಯ ಮದುವೆಗಾಗಿ ನೆಯ್ದ ಜೋಡು ಬಾಸಿಗಗಳಂತೆ ಕಂಡವಾ ಕೆರಗಳವರಿಗೆ. ಅವುಗಳಿಗಂಟಿದ್ದ ಮನುಷ್ಯ ಚರ್ಮವನ್ನು ಕಂಡು ಚಕಿತರಾಗಿ ಕೇಳಿದರು. 'ಇದೇತರ ಚರ್ಮ ಹರಳಯ್ಯ?'

'ಇದು ನನ್ನ ಮತ್ತು ಕಲ್ಯಾಣಿಯ ತೊಡೆಯ ಚರ್ಮ... ತಂದೆ' 'ತೊಡೆಯ ಚರ್ಮ ! ಇದೆಂಥ ಘೋರಕೃತ್ಯವನ್ನು ಗೈದಿರುವಿರಿ ಹರಳಯ್ಯನವರೆ ! ಯಾವ ಪಾಪಕ್ಕಾಗಿ ಈ ಪ್ರಾಯಶ್ಚಿತ್ತವೆಂದುಕೊಂಡಿರಿ?' ತಾವು ಅಂದು ನಾನೊಂದು ಸಲ ಶರಣೆಂದುದಕ್ಕೆ ಪ್ರತಿಯಾಗಿ ಎರಡು ಸಲ ಶರಣೆಂದುದಕ್ಕೆ ತಂದೆ

'ನಭತೋ ನ ಭವಿಷ್ಯತಿ ನಿಮ್ಮ ಶ್ರೀ ಹರಳಯ್ಯ ! ಭಕ್ತಿಯ ಇತಿಹಾಸದಲ್ಲಿಯೇ ನೀವೂ ನಿಮ್ಮ ಸತಿ ಕಲ್ಯಾಣಮ್ಮನೂ ತೋರಿರುವ ಈ ಆತ್ಮ ನೈವೇದ್ಯಕ್ಕೆ ಪ್ರತಿಯಿಲ್ಲ! ಇಂಥ ಚರ್ಮದ, ಕರ್ಮವ ಕಳೆದ ನಿರ್ಮಲದೇಹಿ ಶರಣನ ಮೈದೊವಲ ಹೊದ್ದ ಚೆಮ್ಮಾವುಗೆಗಳನ್ನು ನಾನು ಮೆಟ್ಟಲೆ? ಶಿವಶಿವಾ, ಈ ನುಡಿ ಸುಡದೆ? ಹರಳಯ್ಯ, ಇವುಗಳನ್ನು ಕಾಲಿನಿಂದ ಮೆಟ್ಟಲಾರೆ, ಇದೋ ತಲೆಯ ಮೇಲಿಟ್ಟು ಕುಣಿಯುವೆ. (ತಲೆಯ ಮೇಲಿಟ್ಟು ಭಕ್ತಿಯ ಉದ್ವೇಗದಿಂದ) ಅಯ್ಯಾ ನಿಮ್ಮ ಶರಣರ ಚೆಮ್ಮಾವುಗೆಗೆ ಈ ಪೃಥ್ವಿ ಸರಿಬಾರದಯ್ಯ !'

ಇದೇನನ್ನು ಮಾಡಿದಿರಿ ಬಸವರಸರೆ ! ನನ್ನನ್ನು ಇನ್ನಷ್ಟು ರಸಾತಳಕ್ಕೆ ನೂಕಿಬಿಟ್ಟಿರಲ್ಲ! ಅಯ್ಯೋ ! ಪಾಪ ತೊಳೆದುಕೊಳ್ಳಲೆಂದು, ಮನದ ತಾಪ ಕಳೆದುಕೊಳ್ಳಲೆಂದು, ಬಂದು ಇನ್ನಷ್ಟು ಪಾಪ ಲೇಪಿಸಿಕೊಂಡು ಹಿಂದಿರುಗಬೇಕಾಯಿತಲ್ಲ ! ತಂದೆ, ಕಂದನನ್ನೀರೀತಿ ಪಾಪಕೂಪದಲ್ಲಿ ನೂಕಬಹುದು?

ನೀನು ಪಾಪಿಯೆ ಹರಳಯ್ಯ? ಪಾಪಿಗಳ ಪಾಪಹರಣ ಮಾಡುವ ಪವಿತ್ರಾತ್ಮ ನೀನು. ಸುಮ್ಮನೆ ಮಮ್ಮಲ ಮರುಗಬೇಡ. ಈ ಚೆಮ್ಮಾವುಗೆಗಳನ್ನು ಮೆಟ್ಟುವ ಯೋಗ್ಯತೆ ಕೂಡಲ ಸಂಗನೊಬ್ಬನಿಗೆ ಮಾತ್ರ ಇದೆ. ಇವುಗಳನ್ನೊಯ್ದು ಶಿವನ ಶ್ರೀ ಚರಣಗಳೆಂದು ಕಾಯ್ದಿರಿಸಿರಿ. ಅವುಗಳನ್ನು ಮುಟ್ಟಿದವರ ಮನದ ಮೈಲಿಗೆ ಕಳೆದು ಮತಿಗೆ ಮಂಗಳ ದೊರೆವುದು! ನಿರುಪಾಯನಾಗಿ ಹರಳಯ್ಯ ಹಿಂದಿರುಗಿ ಹೊರಟ. ಹಾದಿಯಲ್ಲಿ ಮಧುವರಸರೂ ಹೊರಟಿದ್ದರು.

**ಹನ್ನೆರಡುಸಾವಿರ ಚೆನ್ನ ಕರಣಿಕರಿಗೆ**
**ಮಾನ್ಯಗಜಸಿಂಹ ಮಧುವರಸ ಊಟಕೆ**
**ತನ್ನ ಅರಮನೆಗೆ ಬರುತಿರ್ದ ॥**

ಮಂಗಳವಾಡದಲ್ಲಿ ಮೊದಲು ಬಿಜ್ಜಳರಾಯನಲ್ಲಿ ಅಧಿಕಾರಕ್ಕೆ ಸೇರಿಕೊಂಡಿದ್ದ ಮಧುವರಸನು ಮುಂದೆ ಬಿಜ್ಜಳನು ಕಲ್ಯಾಣಕ್ಕೆ ಬರಲು ಅವನೊಡನೆ ಕಲ್ಯಾಣಕ್ಕೆ ಬಂದು ಒಬ್ಬ ಶ್ರೇಷ್ಠ ಅಧಿಕಾರಿಯಾದ. ಹುಟ್ಟಿನಿಂದ ಬ್ರಾಹ್ಮಣ, ವಿಚಾರದಲ್ಲಿ ಸನಾತನಿ. ಸಹಜವಾಗಿಯೇ ಬಸವಣ್ಣನವರ ವರ್ಣಸಂಕರ ಮಾರ್ಗಕ್ಕೆ ವಿರೋಧಿ. ವರ್ಣಾಶ್ರಮ ವ್ಯವಸ್ಥೆಯಲ್ಲಿ ಅವನಿಗೆ ಪ್ರಾಮಾಣಿಕವಾದ ವಿಶ್ವಾಸ. ಹರಳಯ್ಯನನ್ನು ನಿಲ್ಲಿಸಿ ಕೇಳಿದ.

**ಏನು ಹರಳನೆ ಹೇಳು ಏನು ಬಗಲೊಳು ಗಂಟು**
**ಏನು ಎಲ್ಲಿಂದ ಬರವಾಯ್ತು ಹೇಳೆನೆಗೆ**
**ಏನು ತೋರೆನೆಗೆ ಬಗಲೊಳಗೆ**

ಹರಳಯ್ಯ ಹೌಹಾರಿದ. ಅಣ್ಣನವರು ಮೆಟ್ಟಲು ನಿರಾಕರಿಸಿದ ಆ ಪಾದರಕ್ಷೆಗಳನ್ನು ಮಧುವರಸ ಮೆಟ್ಟಲು ಮನಸು ಮಾಡಿದರೆ? ಅವನ ಸಂಶಯ ನಿಜವಾಯಿತು. ಆ ಮೆಟ್ಟುಗಳನ್ನು ನೋಡಿ, ಬಸವಣ್ಣನವುಗಳನ್ನು ಮೆಟ್ಟಲು ನಿರಾಕರಿಸಿದುದನ್ನು ಕೇಳಿ ಮಧುವರಸನಿಗೆ ಅವುಗಳನ್ನು ಮೆಟ್ಟಿಯೇತೀರಬೇಕೆಂಬ ದುಷ್ಟ ಬುದ್ಧಿಯುಂಟಾಯಿತು. ಹರಳಯ್ಯ ಪರಿಪರಿಯಿಂದ ತಿಳಿಸಿ ಹೇಳಿದರೂ ಕೇಳದೆ ಮೆಟ್ಟಿದ. ಮೈಗೆಲ್ಲ ಬೆಂಕಿಯಿಟ್ಟಂತಾಯಿತು. ಅದರ ಉರಿಪನ್ನೇನು ಹೇಳುವುದು?

**ಸುಣ್ಣ ಕುದಿಗುಣಿಯೊಳಗೆ ಹಣ್ಣಾಗಿ ಬೆಂದಂತೆ**
**ಎಣ್ಣೆ ಬಲುಕಾಸಿ ಕಣ್ಣೊಳಗೆ ಸುರಿದಂತೆ**
**ಡೊಣ್ಣೆ ಮುಳ್ಳುಗಳು ನೆಟ್ಟಂತೆ !**

ಮನೆಗೆ ಬಂದು ಮಧುವರಸ ಮದ್ದು ತಿಂದ, ನೀರು ಮಿಂದ, ಏನೇನೋ ಮಾಡಿಕೊಂಡ. ಮೈಯುರಿ ಹೋಗಲಿಲ್ಲ. ಒಮ್ಮೆ ಒಂದು ವಿಚಿತ್ರ ನಡೆಯಿತು. ಮಧುವರಸರ ಸ್ನಾನಕ್ಕೆ ನೀರು ತರುತ್ತಲಿದ್ದ ಮಾದೇವಿ ಮಾಡಿದ ವಿಚಿತ್ರವಿದು.

**ಹೊರಳಿದವು ದಿನಮಾಸ ಬರಲು ಪುಣ್ಯದ ದಿನವು**
**ಹಿರಿ ದಾದಿ ಮರೆತು ಮನೆಗೆಲಸ ನೋಡಿದಳು**
**ನೆರೆಯೋಣಿ ದೊಂಬರಾಟಗಳ**

ಹೊತ್ತು ಮುಣುಗಿತು ಶಿವನೆ, ಕತ್ತಲಾಯಿತು, ನೀರ ಎತ್ತ ದೂರ ಹೋಗಿ ತರಲೆಂದು ಆಕೆ ಯೋಚಿಸುತ್ತಿರಲು ಎದುರಿಗೊಂದು ಬಚ್ಚಲಗುಂಡಿ ಕಾಣಿಸಿತು.

**ಹರಳ ಬಳಸಿದ ನೀರು ಹರಿದು ಬಚ್ಚ ಗುಂಡಿ**
**ಮೆರೆಯುವದು ಇಂದು ಕಲ್ಯಾಣ-ಕೇರಿಯೊಳು**
**ಹರಳಯ್ಯ ಗುಂಡಿ ಶಿವತೀರ್ಥ**

ಆ ಶಿವತೀರ್ಥದಿಂದಲೇ ಅಂದು ನೀರು ತಂದುಬಿಟ್ಟಳು. ಆ ನೀರನ್ನು ಮೀಯುತ್ತಲೇ ಮಧುವರಸನ

ಮೈಯುರಿ ಮಾಯವಾಯಿತು. ಅವನಿಗಾದ ಆಶ್ಚರ್ಯಕ್ಕೆ ಇತಿಮಿತಿಯಿಲ್ಲ ! ಮಾದೇವಿಯನ್ನು ಕರೆಸಿ ಕೇಳಿದನು.

**ಇದು ಎಲ್ಲಿಂದ ನೀರು ತಂದೆ ಮಾದೇವಿ?**
**ತಪ್ಪಾಯಿತು ಕ್ಷಮಿಸಿ ದೊರೆಯೆ ತಪ್ಪಿಲ್ಲ, ನನ್ನ**
**ಉದ್ಧಾರವಾಯಿತು. ಭಯ ಬೇಡ, ನಿಜ ಹೇಳು ಶರಣ**
**ಹರಳಯ್ಯನ ಬಚ್ಚಲಗುಂಡಿಯಿಂದ ತಂದೆ ದೊರೆಯೆ**

ಮಧುವರಸನಿಗಾಗ ಹೊಳೆಯಿತು–ಅಂದು ಗೈದ ಅವಿವೇಕ ತನ್ನನ್ನು ತಿಂದು ತೇಗಿತೆಂದು. ಪಶ್ಚಾತ್ತಾಪದಿಂದ ದಗ್ಧವಾಯಿತವನ ಸೊಮ್ಮಿನ ಹೆಮ್ಮೆ, ಹುಟ್ಟಿನ ಹೇವ, ಕುಲಮದ, ಹರಳಯ್ಯನಿಗೆ ಕಳಿಸಿಲು ಉಡುಗೊರೆಯನ್ನು ಸಿದ್ಧಗೊಳಿಸತೊಡಗಿದ ಹರಳಯ್ಯನ ಹೃದಯವನ್ನು ಬಲ್ಲ ಮಾದೇವಿ ಹೇಳಿದಳು. ಮಧುವರಸ

**ಕಟ್ಟಿದರೇನು, ಕೊಟ್ಟು ಕಳುಹಿದರೇನು**
**ಮುಟ್ಟುವರಲ್ಲ ಪರಸೊಮ್ಮನೆಂದಳು ತಾ**
**ಕೊಟ್ಟಳುತ್ತರವ ಮಹಾದೇವಿ**

ಮಧುವರಸ ಹರಳಯ್ಯನ ಋಣ ತೀರಿಸುವುದೆಂತು ಎಂದು ದೀರ್ಘವಾಗಿ ಆಲೋಚಿಸಿದ, ಕೊನೆಗೆ.

**ಅಡಿಗಡಿಗೆ ವಂದಿಸುವೆ, ನಡೆವೆ ನಾನಲ್ಲಿಗೆ**
**ಕುಡುವೆನು ನನ್ನ ಮಗಳನು ಎಂದೆನುತ**
**ನುಡಿದನು ಮಧುವರಸ ಮುದದಿಂದ ॥**

ಅಹುದು ಹರಳಯ್ಯನಿಗೊಬ್ಬ ವಜ್ರದ ಹರಳಿನಂತ ಮಗನಿದ್ದಾನೆ. ನನಗೊಬ್ಬ ರತ್ನದಂಥ ಮಗಳಿದ್ದಾಳೆ. ಅವಳನ್ನು ಹರಳಯ್ಯನ ಮಗನಿಗೆ ಕೊಟ್ಟುಬಿಟ್ಟರೆ ನನ್ನ ತಪ್ಪು ತೊಳೆದು ಹೋಗುತ್ತದೆ. ಎಂದು ತೀರ್ಮಾನಿಸಿ ಹರಳಯ್ಯನ ಮನೆಗೆ ಹೋಗುತ್ತಾನೆ. ಹರಳಯ್ಯನು ಕಕ್ಕಾವಿಕ್ಕಿಯಾಗುತ್ತಾನೆ.

**ತಂದೆನು ಮಗಳನು ಇಂದು ನಿಮ್ಮಲ್ಲಿಗೆ**
**ಸಂದುದು ಎಂದು ಭಸಿತವನಿಟ್ಟರ**
**ಇಂದು ನಿಮ್ಮಡಿಗೆ ಎರಗುವೆ**

ಇಂದು ನಿಮ್ಮಡಿಗೆ ಎರಗುವೆ ಎಂದು ಮಧುವರಸ ಮಾತಿಗೆ ಮೊದಲು ಮಾಡಲು ಹರಳಯ್ಯ ಅವಾಕ್ಕಾಗಿಬಿಟ್ಟ. ಇದು ಸಲ್ಲದ ಶರೀರ ಸಂಬಂಧವೆಂದು ವಿರೋಧಿಸಿದ. ಆದರೆ ಮಧುವರಸನ ಹೃದಯ ಪರಿವರ್ತನೆ ಪರಿಪೂರ್ಣವಾಗಿ ಆಗಿದ್ದಿತು. ಮುಂದಿಟ್ಟ ಹೆಜ್ಜೆಯನ್ನು ಹಿಂದಿಡಲು ಅವನು ಒಪ್ಪಲಿಲ್ಲ. ಇಬ್ಬರೂ ಲಿಂಗಾಂಗಿಗಳಾಗಿ ಶಿವಮತಕ್ಕೆ ಸೇರಿದ್ದರಾಗಿ ಅದು ಇಬ್ಬರು ಶಿವಭಕ್ತರ ನಡುವಣ ಶರೀರ ಸಂಬಂಧ–ವಿಪ್ರ ಅಂತ್ಯಜರ ನಡುವಣ ಸಂಬಂಧವಲ್ಲ ಎಂದು ಬಸವಾದಿ ಪ್ರಮಥರೂ ಈ ಕಾರ್ಯಕ್ಕೆ ಶುಭಮಸ್ತು ಎಂದರು. ಮದುವೆ ನಡೆದುಹೋಯಿತು. ಶರಣರ ಬಳಗವೆಲ್ಲ ಸಂತೋಷ ಸಾಗರದಲ್ಲಿ ಮುಳುಗಿತು ತಮ್ಮ ಸಮಾನತೆಯ ತತ್ತ್ವ ಗೆದ್ದಿತೆಂದು. ಆದರೆ ಈ ತತ್ತ್ವಕ್ಕೆ ವಿರೋಧಿಗಳಾಗಿದ್ದ ಸನಾತನಿಗಳು ಸುಮ್ಮನಿರಲಿಲ್ಲ. ಪ್ರಳಯವೇ ಸಮೀಪಿಸಿದಂತೆ ಅವರಿಗೆನಿಸಿತು.

**ಅಪರಾಧ ನಡೆಯಿತು ವಿಪರೀತ ಬಂದಿದೆ**
**ತಪಸಿಗಳ ತಂಡ ಇರುವಲ್ಲಿ ಮಧುವರಸ**
**ಶ್ವಪಚರಿಗೆ ಹೆಣ್ಣ ಕೊಡಬಹುದೆ?**

ಎಂಬ ಪ್ರಶ್ನೆ ಬಿಜ್ಜಳ ಭೂಪಾಲ ಕಿವಿಯವರೆಗೂ ಹೋಯಿತು. ಅರಸ ಕರೆಸಿ ಮಧುವರಸನನ್ನು 'ಹೊಲೆಯರಿಗೆ ಹೆಣ್ಣು ಕೊಡಬಹುದೆ ವಿಪ್ರನಾದ ನೀನು? ಮಧುವರಸನು ಅಷ್ಟರೊಳಗಾಗಿಯೇ ಶ್ರೇಷ್ಠ ಶರಣನಾಗಿ ಬಿಟ್ಟಿದ್ದ. ಅಮೃತದ ಸೆಲೆಯಂತೆ ಅವನ ಉತ್ತರ ಹೊರಹೊಮ್ಮಿತು.

ಹೊಲೆಯ ಹೊಲೆಯನ್ನೆನ್ನುವಿರಿ ಯಾರು ಹೊಲೆಯರಲ್ಲ ದೊರೆಯೆ? ಎಲ್ಲರೂ ಹೊಲೆಯಲ್ಲಿ ಹುಟ್ಟಿ ಹೊಲೆಯಲ್ಲಿ ಬೆಳೆಯುವವರೇ. ಮೂವರು ಸಮಗಾರರ ಬಾಯಲ್ಲಿ ಐವರು ಹಾರುವರು ಹಾರೈಸುತ್ತಿದ್ದಾರೆ. ಒಬ್ಬನಿಗೆ ಕೊಂಬ ಕೊಟ್ಟ, ಒಬ್ಬನಿಗೆ ಕೊಳಗ ಕೊಟ್ಟ, ಒಬ್ಬನಿಗೆ ಗರ್ಭವ ಕೊಟ್ಟ, ಒಬ್ಬನಿಗೆ ಏನೂ ಇಲ್ಲದೆ ತಬ್ಬಿಬ್ಬಾಯ್ತು–ಮಾದಿಗರ ಮನೆಯ ಹೊಕ್ಕು ಮಾದಗಿತ್ತಿಯರ ತಿಂದ ಅರ್ಕೇಶ್ವರ ಲಿಂಗವನರಿತ ಕಾರಣ ! ಇನ್ನೂ ತಿಳಿಯದೆ? ಊರೊಳಗಣ ದೇವಾಲಯದಲ್ಲಿ ಐವರು ಹೊಲೆಯರು ಹೊಕ್ಕು ದೇವರ ಪೂಜಿಸುತ್ತಿದ್ದಾರೆ. ಹೊಲೆಯರು ಮುಟ್ಟಿ ದೇವಾಲಯ ಹೊರಗಾಯಿತ್ತು. ದೇವರೊಳಗಡೆ ಕುಲಜರು ಹೊಲಬುದಪ್ಪಿ ಹೊಲೆಗೊಳಗಾಯಿತ್ತು–ಆರ್ಕೇಶ್ವರ ಲಿಂಗವನರಿತ ಕಾರಣ.

ಈ ಬೆಡಗಿನ ವಚನಗಳಲ್ಲಿ ಅಡಗಿದ ಅರ್ಥ ಬಿಜ್ಜಳನಿಗೆ ತಿಳಿಯಲಿಲ್ಲ. ಬಸವಣ್ಣನವರನ್ನು ಕೇಳಿದ. ಇಬ್ಬರೂ ಶಿವಮತವನ್ನು ಸ್ವೀಕರಿಸಿರುವರಾಗಿ ಮಧುವರಸ ವಿಪ್ರನಾಗಿ ಉಳಿದಿಲ್ಲ. ಹರಳಯ್ಯ ಹೊಲೆಯನಾಗಿ ಉಳಿದಿಲ್ಲ ದೊರೆಗಳೆ. ಇದೊಂದು ಸಜಾತೀಯ ವಿವಾಹ, ವಿಜಾತೀಯ ವಿವಾಹವಲ್ಲ. ದೊರೆಗಳದನ್ನು ದೊಡ್ಡದನ್ನಾಗಿ ಮಾಡಬಾರದು.

ಬಿಜ್ಜಳ ಬುದ್ಧಿ ಬಸವಣ್ಣನವರ ವಾದವನ್ನು ಒಪ್ಪಿತು. ಆದರೆ ಅವರ ಹೃದಯ ಒಪ್ಪಲಿಲ್ಲ. ಪ್ರತಿಗಾಮೀ ಶಕ್ತಿಗಳು ಪ್ರಗತಿಪರ ಶಕ್ತಿಗಳ ಮೇಲೆ ವಿಜಯ ಪಡೆದುವು. ಜಗತ್ತಿನಲ್ಲಿ ಸಮಾನತೆಯ ಸಸಿಯು ಹಸಿರಾಗಿ ಉಳಿಯಲು ಹರಳಯ್ಯ ಮಧುವರಸರ ರಕ್ತ ಬಸಿಯಿತು. ಅವರಿಬ್ಬರಿಗೂ ಮರಣದಂಡನೆಯಾಯಿತು.

**ಹೂವಿನಾ ಮಳೆಯಾಗಿ ಹೂವಿನಾ ತೇರೇರಿ**
**ಹೂವಾದರವರು ಶಿವಪದಕೆ ಶಿವಶರಣ**
**ಪಾವನದ ಮಾಲೆ ಸೇರಿದರು ।**

ಜಗತ್ತಿನಲ್ಲಿ ತತ್ತ್ವನಿಷ್ಠೆಗೆ, ಬಲಿದಾನಕ್ಕೆ, ಆತ್ಮಾರ್ಪಣಕ್ಕೆ ಬೆಲೆಯಿರುವವರೆಗೆ ಹರಳಯ್ಯ ಮಧುವರಸರಿಬ್ಬರೂ ಸಗೌರವ ಸ್ಮರಿಸಲ್ಪಡುವರು. ಅವರ ಎಳಹೂಟೆಯ ತರುವಾಯ ಕಲ್ಯಾಣದಲ್ಲಿ ಬಿಜ್ಜಳನ ವಧೆಯಾಯಿತು. ಬಸವಣ್ಣನವರು ಮೊದಲೇ ಸಂಗಮಕ್ಷೇತ್ರಕ್ಕೆ ಹೋಗಿಬಿಟ್ಟಿದ್ದರು. ಚೆನ್ನಬಸವಣ್ಣ, ಕಿನ್ನರಿ ಬ್ರಹ್ಮಯ್ಯ, ಮಾಚಯ್ಯ ಮೊದಲಾದ ಶರಣಕುಲಮಣಿಗಳ ನೇತೃತ್ವದಲ್ಲಿ ಹೊರಟ ಶರಣ ಸಮೂಹವನ್ನು ಅಳಿಯ ಬಿಜ್ಜಳನು ಬೆನ್ನಟ್ಟಿದ. ಅಲ್ಲಲ್ಲಿ ಯುದ್ಧಗಳಾದುವು. ರಕ್ತದ ಕಾಲುವೆಗಳು ಹರಿದುವು. ಕಲ್ಯಾಣ ಹಾಳುಬಿದ್ದಿತು. ಶರಣರ ಬಳಗ ಬಯಲಾಯಿತು. ಆದರೂ ಹರಳಯ್ಯ ಮಧುವರಸರ ಬಲಿದಾನ ವ್ಯರ್ಥವಾಗಲಿಲ್ಲ. ಅವರ ರಕ್ತ ಕಲ್ಯಾಣದ ನೆಲದಲ್ಲಿ ಇಂಗಿ ಕನ್ನಡ ನಾಡಿನಲ್ಲಿ ಅನೇಕ ಕಡೆಗೆ ಶರಣಧರ್ಮದೀಪಕರಾಗಿ ಹುಟ್ಟಿ ಶಿವಶರಣರ ಜ್ಯೋತಿಪ್ರಕಾಶವಾಗಿ ಹರಡಿತು. ಇಂದಿಗೂ ಕಲ್ಯಾಣದ ಕಣಕಣದಿಂದ ಅವರ ಅಮರ ಕಥೆ ನಿನದಿಸುತ್ತಲಿದೆ.

**ಹರನ ಶಿಖರದ ಮೇಲೆ ಸಿರಿಗಂಧಮರ ಹುಟ್ಟಿ**
**ಕಿರೀಟದೊಳು ಎರಡು ಗಿಣಿ ಕೂತು ಹಾಡಿದವು**
**ಹರಳಯ್ಯನೆಂಬ ಹಳೆ ಕಥೆಯ...**

■■

## ಹರಳಯ್ಯ

ಹರಳಯ್ಯ ಬಿಜಾಪುರ ಜಿಲ್ಲೆಯವನು. ಈಗಲೂ ಬಿಜಾಪುರದಿಂದ ಇಪ್ಪತ್ತು ಮೈಲಿ ದೂರದಲ್ಲಿ ಹರಳಯ್ಯನ ಕ್ಷೇತ್ರವಿದೆ. ಅಲ್ಲಿ ಈತನ ಹೆಸರಿನ ಒಂದು ದೇವಾಲಯ ಇರುವುದಲ್ಲದೆ ಹರಳಯ್ಯನ ತೀರ್ಥವಿರುವುದನ್ನು ಕಾಣಬಹುದಾಗಿದೆ. ಜನರು ಭಕ್ತಿಯಿಂದ ವರ್ಷಕ್ಕೊಮ್ಮೆ ಅಲ್ಲಿ ಪರ್ವವನ್ನು (ಪರ) ನಡೆಸುತ್ತಾರೆ. ಅಲ್ಲದೆ ಆತನನ್ನು ಕುರಿತು ರಚಿಸಿದ ತ್ರಿಪದಿಗಳನ್ನು ಹಾಡಿಕೊಂಡು ನಲಿಯುತ್ತಾರೆ. ಈ ತ್ರಿಪದಿಗಳನ್ನು ಡಾ. ಸಿದ್ಧಯ್ಯ ಪುರಾಣಿಕರ ಶರಣ ಚರಿತಾಮೃತ ಕೃತಿಯಲ್ಲಿ ಕಾಣಬಹುದಾಗಿದೆ.

ಹರಳಯ್ಯ ಸ್ವಭಾವತಃ ಮಹಾಶಿವಭಕ್ತ. ಈತ ಬಸವಾದಿ ಶರಣರ ಲೋಕೋದ್ಧಾರದ ವಿಷಯವನ್ನು ತಿಳಿದು ತನ್ನ ಹೆಂಡತಿ ಕಲ್ಯಾಣಮ್ಮನೊಂದಿಗೆ ಕಲ್ಯಾಣಕ್ಕೆ ಬಂದು ನೆಲೆಸಿ, ಲಿಂಗದೀಕ್ಷೆಯನ್ನು ಪಡೆದು ಚಪ್ಪಲಿ ಹೊಲಿಯುವ ಕಾಯಕ ಕೈಕೊಂಡಿರುತ್ತಾನೆ. ಜೊತೆಗೆ ಜಂಗಮ ದಾಸೋಹ ಮಾಡುತ್ತಾ, ಅನುಭವ ಮಂಟಪದ ಕಾರ್ಯಕಲಾಪದಲ್ಲಿ ಭಾಗವಹಿಸುತ್ತ ಶರಣ ಜೀವನ ನಡೆಸುತ್ತಿರುತ್ತಾನೆ.

ಈತನಿಗೆ ಸದ್ಗೃಹಿಣಿಯಾದ ಕಲ್ಯಾಣಮ್ಮ ಎಂಬ ಪತ್ನಿ ಶೀಲವಂತ ಎಂಬ ಮಗನಿರುತ್ತಾನೆ. ಸದ್ಗೃಹಿಣಿ ಕಲ್ಯಾಣಮ್ಮ, ಸದ್ಗುಣಿ ಮಗ ಶೀಲವಂತ ಸತ್ಯಶುದ್ಧ ಕಾಯಕ ಈತನ ಬದುಕಿನ ಉಸಿರಾಗಿರುತ್ತದೆ. ಈ ದಂಪತಿಗಳು ಪರಸ್ಪರ ಒಬ್ಬರನ್ನೊಬ್ಬರು ವಿಚಾರಿಸದೆ ಯಾವ ಕೆಲಸ ಕಾರ್ಯಗಳನ್ನು ಕೈಕೊಳ್ಳುತ್ತಿರಲಿಲ್ಲ. ಅಷ್ಟೊಂದು ಅನ್ಯೋನ್ಯ ದಾಂಪತ್ಯ ಅವರದಾಗಿತ್ತು. ಇದರಿಂದಾಗಿ ಅವರ ಸಂಸಾರದಲ್ಲಿ ಸಾಮರಸ್ಯತೆ ಹೆಚ್ಚಾಗಿಯೇ ಎದ್ದು ಕಾಣುತ್ತಿತ್ತು. ಇವರಿಗೆ ತಕ್ಕ ಮಗನಾಗಿ ಶೀಲವಂತನೂ ಇದ್ದ.

ಕಲ್ಯಾಣಮ್ಮ ಶರಣರ ಸಂಗದಿಂದ, ಅವರು ಒದಗಿಸಿಕೊಟ್ಟ ಅಪೂರ್ವ ಪರಿಸರದಿಂದ ಪ್ರಭಾವಿತಳಾಗಿ, ತನು–ಮನ–ಧನ ಶುಚಿತ್ವವನ್ನು ಕಾಪಾಡಿಕೊಂಡು ದಾಸೋಹ ಸೇವೆಯನ್ನೇ ಉಸಿರಾಗಿಸಿಕೊಂಡ ಒಬ್ಬ ಅನುಭಾವಿ ಶರಣೆಯಾಗಿದ್ದರೆ, ನಿರಕ್ಷಕ ಕುಕ್ಷಿಯಾಗಿದ್ದರೂ, ಬಸವಾದಿ ಶರಣರ ಲೋಕೋದ್ಧಾರದ ವಿಷಯಗಳನ್ನು ತಿಳಿದು, ಅವುಗಳನ್ನು ತಮ್ಮ ಜೀವನದಲ್ಲಿ ಆಚರಣೆಗೆ ತರುವುದರ ಮೂಲಕ, ಕೀಳರಿಮೆಯನ್ನು ತೊರೆದು, ತಾವು ಕೀಳುಕುಲದವರು ತಮ್ಮ ಜಾತಿ ಕನಿಷ್ಟ ಎನ್ನುವ ಅನಿಷ್ಟ ವಿಚಾರಗಳನ್ನು ಸುಟ್ಟುಹಾಕಿ, ಸಾತ್ವಿಕ ಪರಿಸರವನ್ನು ಕಾಯ್ದುಕೊಂಡು, ಮಗನಿಗೂ ಒಳ್ಳೆಯ ಸಂಸ್ಕಾರ ಕೊಟ್ಟು ಬೆಳೆಸುವುದರ ಮೂಲಕ ಆದರ್ಶ ಜೀವನಕ್ಕೊಂದು ಮಾದರಿಯಾಗಿದ್ದ ಹರಳಯ್ಯ.

**ಡಾ. ಆರ್. ಶಿವಣ್ಣ**
ಕೃತಿ: ೧೨ನೇ ಶತಮಾನದ ಶರಣರು

# ಶರಣರು ಮತ್ತು ಜನಪದ

● ಎ. ಎಂ. ಗೊರಚಿಕ್ಕನವರ

ಹನ್ನೆರಡನೇ ಶತಮಾನದ ಕಾಲಘಟ್ಟ ಹಲವಾರು ವೈಶಿಷ್ಟ್ಯಗಳನ್ನು ಜಗತ್ತಿಗೆ ಪರಿಚಯಿಸಿದ ಅವಧಿಯಾಗಿದೆ. ಜಗತ್ತಿನ ಯಾವ ಮೂಲೆಯಲ್ಲಿಯೂ ಹನ್ನೆರಡನೇ ಶತಮಾನದ ಬಸವಾದಿ ಶಿವಶರಣರಂತಹ ಮೇರು ವ್ಯಕ್ತಿತ್ವಗಳನ್ನು ಕಾಣಲು ಸಾಧ್ಯವಿಲ್ಲ. ಬಸವಾದಿ ಶರಣರೆಲ್ಲರ ಬದುಕು, ವಚನ ಸಾಹಿತ್ಯ ರಚನೆ, ಕಲ್ಯಾಣ ಕ್ರಾಂತಿಯ ನೆನಪುಗಳು, ಕಾಯಕ ದಾಸೋಹಕ್ಕೆ ನೀಡಿದ ಪ್ರಾಧ್ಯಾನ್ಯತೆಗಳು ಸೇರಿದಂತೆ ಹತ್ತುಹಲವಾರು ಅಂಶಗಳನ್ನು ಜನಪದರು ತಮ್ಮ ಹಾಡಿನಲ್ಲಿ, ಆಚರಣೆಗಳಲ್ಲಿ, ಹಂತಿಪದ, ಕುಟ್ಟುವ ಪದಗಳಲ್ಲಿ, ಹಬ್ಬ ಹರಿದಿನಗಳಲ್ಲಿ ಮುಕ್ತ ಕಂಠದಿಂದ ವರ್ಣಿಸಿರುವದನ್ನು ಕಾಣುತ್ತೇವೆ. ಈ ಜನಪದ ಸಾಹಿತ್ಯ ರಾಜಾಶ್ರಯದ ಹಂಗಿನಲ್ಲಿ ಬೆಳೆದ ಸಾಹಿತ್ಯವಲ್ಲ, ಗುರುಕುಲ, ವಿಶ್ವವಿದ್ಯಾಲಯಗಳಂತಹ ಶಿಕ್ಷಣ ಕೇಂದ್ರಗಳ ಪ್ರಭಾವದಿಂದ ಬೆಳೆದು ಬಂದ ಸಾಹಿತ್ಯವಲ್ಲ. ಈ ಜನಪದ ಸಾಹಿತ್ಯ ನಾಡಿನ ಅನಕ್ಷರಸ್ಥರ, ಬದುಕಿನ ಅನುಭವಗಳನ್ನುಂಡವರ, ಹಗಲಿರುಳಗಳನ್ನು ಲೆಕ್ಕಿಸದೇ ಹೊಲ–ಗದ್ದೆಗಳಲ್ಲಿ ಕಾಯಕದಲ್ಲಿ ತೊಡಗಿದ್ದವರ ಉದಾತ್ತ ಚಿಂತನೆಗಳ ಒಕ್ಕೂಟ ಎನಿಸಿದೆ. ಇಲ್ಲಿ ಮನರಂಜನೆಯಂತಹ ಅಂಶಗಳು ಅಧಿಕವಾಗಿ ಕಂಡು ಬಂದರೂ; ಮನೋವಿಕಾರಗಳನ್ನು ದೂರಮಾಡುವ ಅನೇಕ ಮೌಲ್ಯಗಳು ಅಡಕವಾಗಿರುವುದನ್ನು ಕಾಣುತ್ತೇವೆ.

ಶರಣರ ಬದುಕು, ಆದರ್ಶ ಸಂದೇಶಗಳು, ಜನಸಾಮಾನ್ಯರಿಗೆ ಹತ್ತಿರವಾಗಿ ಸ್ಪಂದಿಸಿದ ಸಂಗತಿಗಳು ಸಹಜವಾಗಿ ಜನಪದರನ್ನು ಆಕರ್ಷಿಸಿವೆ. ಕಾಲಕಳೆದಂತೆಲ್ಲಾ ಇವರನ್ನು ದೈವತ್ವಕ್ಕೆ ಏರಿಸಿ ಸ್ಮರಿಸಿರುವದನ್ನು ಕಾಣುತ್ತೇವೆ. ಒಕ್ಕಲುತನದ ಕೃಷಿ ಕಾಯಕದಲ್ಲಿ ತೊಡಗುವ ರೈತ ಸಮುದಾಯ, ಮನೆಯಲ್ಲಿ ಕುಟ್ಟುವ ಬೀಸುವ ಕೆಲಸದಲ್ಲಿ ನಿರತರಾಗುತ್ತಿದ್ದ ಗ್ರಾಮೀಣ ಭಾಗದ ತಾಯಂದಿರು ಶರಣರನ್ನು ನೆನೆದ ಬಗೆ ಅವರನ್ನು ಸ್ಮರಿಸಿದ ಚಿಂತನೆಗಳು ಒಂದು ಹಿರಿದಾದ ಸಾಂಸ್ಕೃತಿಕ ಲೋಕಕ್ಕೆ ಮತ್ತೊಂದು ಸಾಂಸ್ಕೃತಿಕ ಲೋಕ ಸಲ್ಲಿಸಿದ ಗೌರವವೆಂಬಂತೆ ಕಂಡುಬರುತ್ತವೆ.

ನಮ್ಮ ನೆಲದ ಜನಪದರು ಶರಣರನ್ನು ನೆನೆಯುತ್ತಾ ಬಂದ ಕಾರಣಕ್ಕೆ ಶರಣಸಂಕುಲದ ಚಿಂತನೆಗಳು ಈ ನೆಲದಲ್ಲಿ ಮತ್ತಷ್ಟು ಗಟ್ಟಿತನ ಹೊಂದಿ ಮುಂದುವರೆದುಕೊಂಡು ಬಂದವು. ಈ ಬಗೆಯಲ್ಲಿ ಅನೇಕ ಜನಪದ ತ್ರಿಪದಿಗಳನ್ನು, ಹಂತಿಪದಗಳನ್ನು, ಜನಪದ ಕಥನಗಳನ್ನು, ಒಗಟುಗಳನ್ನು, ಗುರುತಿಸಬಹುದಾಗಿದ್ದು, ನಮ್ಮ ನಾಡಿನ ಹಲವಾರು ವಿದ್ವಾಂಸರು, ಸಂಶೋಧಕರು, ಸಾಹಿತ್ಯಾಸ್ತಕರು ಈ ಕುರಿತಾಗಿ ವಿಶೇಷ ಗಮನಹರಿಸಿ ಇಂತಹ ಗ್ರಾಮೀಣ ಸಂಸ್ಕೃತಿಯ ಜನಪದ ಸಾಹಿತ್ಯದ ಅನೇಕ ಸಂಗ್ರಹಯೋಗ್ಯ ಅಧ್ಯಯನ ಯೋಗ್ಯ ಅಂಶಗಳನ್ನು ಸಂಗ್ರಹಿಸುವ ಕೃತಿರೂಪದಲ್ಲಿ ಕಟ್ಟಿಕೊಡುವ ಕಾರ್ಯಮಾಡಿದ್ದು ಶ್ಲಾಘನೀಯ ಎನ್ನಬಹುದು. ಆಧುನಿಕತೆಯ ಈ ದಿನಮಾನಗಳಲ್ಲಿ ಜನಪದ ಸಾಹಿತ್ಯದ ಶ್ರೇಷ್ಠ ಮೌಲ್ಯಗಳು, ಶರಣ ಸಾಹಿತ್ಯದ ವಿಚಾರಧಾರೆಗಳು, ಜನಸಮುದಾಯಕ್ಕೆ, ವಿದ್ಯಾರ್ಥಿವರ್ಗಕ್ಕೆ, ಹತ್ತಿರವಾಗುವ ಮೂಲಕ ಬದುಕಿನ ಸಾಧನೆಗೆ ಸಾಮರಸ್ಯದ ಬದುಕಿಗೆ ಪ್ರೇರಕ ಎನಿಸಬೇಕಿದೆ.!

ವಚನ ಸಾಹಿತ್ಯ ಇತರ ಸಾಹಿತ್ಯಗಳಿಗಿಂತ ಭಿನ್ನವಾಗಿ ಕಾಣಲು ಅನೇಕ ಕಾರಣಗಳುಂಟು; ಕೆಲವರ ಸ್ವತ್ತಾಗಿ ಇದ್ದ ಸಂಸ್ಕೃತದ ಹೊರತಾಗಿ ಜನರ ದೈನಂದಿನ ಬಳಕೆಯ ಆಡುಭಾಷೆಯಲ್ಲಿ ಕನ್ನಡದಲ್ಲಿ ವಚನಗಳನ್ನು ರಚಿಸಿದರು. ವ್ಯಾಕ್ಯರಣ, ಛಂದಸ್ಸು, ಅಲಂಕಾರ, ಪ್ರಾಸಗಳಂತಹ ಸಾಂಪ್ರದಾಯಿಕ ಭಾಷಾಶಿಸ್ತುಗಳಿಗೆ ಭಿನ್ನವಾಗಿ ಈ ಸಾಹಿತ್ಯ ಬೆಳದುಬಂದಿತು. ದೇವರು, ಧರ್ಮ, ಪೂಜೆಯಂತಹ ಸೀಮಿತ ಸಂಗತಿಗಳಿಗೆ ಈ ಸಾಹಿತ್ಯ ಒಳಪಡದೇ ಜನಜೀವನದ ಬದುಕಿನ ಆಯಾಮಗಳನ್ನು, ಜಟಿಲ ಸಮಸ್ಯೆಗಳನ್ನು ವೈಚಾರಿಕ ನೆಲೆಯಲ್ಲಿ ಚರ್ಚಿಸುವ ಫಲವಾಗಿ ಬಹುಮುಖ ಎಳೆಗಳನ್ನು ಹೊಂದಿದ

ಸಂಶೋಧನಾ ವಿದ್ಯಾರ್ಥಿ, ಕನ್ನಡ ವಿಶ್ವವಿದ್ಯಾಲಯ ಹಂಪಿ ಕೂಡಲಸಂಗಮ ೯೪೮೨೮೯೬೦೮

ಶ್ರೀಮಂತ ವಚನ ಸಾಹಿತ್ಯ ರೂಪುಗೊಂಡಿತು. ಭಾಷೆಯ ಕಾರಣಕ್ಕಾಗಿ ಬಳಸಿದ ದೃಷ್ಟಾಂತ ಉದಾಹರಣೆಗಳ ಕಾರಣಕ್ಕಾಗಿ ಅವಶ್ಯಕತೆಗಳನ್ನು ಪರಿಹರಿಸುವ ಅಂಶಗಳ ಉಲ್ಲೇಖದ ಕಾರಣಕ್ಕಾಗಿ ವಚನ ಸಾಹಿತ್ಯವೂ ಕೂಡಾ ಜನಪದ ಸಾಹಿತ್ಯದಷ್ಟೇ ಜನರ ಹತ್ತಿರಕ್ಕೆ ಬಂದಿತು. ತಾಳೆಗರಿ ತಾಡೋಲೆಗಳಲ್ಲಿ ಮೂರ್ತರೂಪ ಪಡೆದು ಬೇರೆ ಬೇರೆ ಭಾಗಗಳಲ್ಲಿ ಪಸರಿಲು ಕಾರಣ ಎನಿಸಿದವು.

ಪಾರಂಪರಿಕ ಕೃಷಿಪದ್ಧತಿ ದೂರವಾದಂತೆಲ್ಲಾ ಕೆಲವು ಪದಗಳು ಕೃಷಿಪರಿಕರಗಳ ಹೆಸರುಗಳು ಕೂಡಾ ಇವತ್ತಿನ ತಲೆಮಾರಿನ ಜನಕ್ಕೆ ಪರಿಚಯ ಇಲ್ಲವಾದಂತಾದವು. ಜತ್ತಿಗಿ, ಮಿಣಿ, ಕಣ್ಣಿ, ರ್‍ಯಾಗೋಲು, ಆರೆತ್ತಿನ ಹಂತಿ, ಮೇಟಿ, ತತ್ರಾಣಿ, ಕುಡಗೋಲು, ಗಲ್ಲಿಪ, ಕೊಮ್ಮನಸು ಹೀಗೆ ಅನೇಕ ಕೃಷಿ ಹಿನ್ನಲೆಯ ಪದಗಳು ನಮ್ಮ ತಲೆಮಾರಿನ ಬಹುತೇಕ ಜನತೆಗೆ ಇವು ಅಪರಿಚಿತ ಎನಿಸಿವೆ. ರಾಶಿಯನ್ನು ಮಾಡುವ ಕಾಲಕ್ಕೆ ತಿಂಗಳು, ಎರಡ್ಮೂರು ತಿಂಗಳುಗಂಟಲೆ ಹೊಲಗಳಲ್ಲಿ ಉಳಿಯುತ್ತಿದ್ದ ಒಕ್ಕಲಿಗರು ಶಿವಶರಣರ ಕುರಿತಾಗಿ ಅನೇಕ ಹಂತಿ ಪದಗಳನ್ನು ಹಾಡುತ್ತಿದ್ದರು ಈ ಬಗೆಯಲ್ಲಿ ಜನಪದ ಹಂತಿಯು ಹಾಡಿನ ಆಯ್ದುಭಾಗವೊಂದನ್ನು ಗಮನಿಸುವದಾದರೆ.......

**ಶರಣರ ನೆನದಾರ ಸರಗೀಯ ಇಟ್ಟಾಂಗ**
**ಅರಳಿದ ಮಲ್ಲಿಗೆ ಮುಡಿದ್ಹಾಂಗ । ಕಲ್ಯಾಣದ**
**ಶರಣರ ನೆನಿಯೋ ಎಲೆ ಮನವೆ ॥**

ಕೃಷಿ ಕಾಯಕದ ಒಕ್ಕಲಿಗರಿಗೆ ಶರಣ ಪರಂಪರೆಯ ಬಗ್ಗೆ ಅಪಾರವಾದ ಭಕ್ತಿ, ಅಭಿಮಾನ ಅವರ ಮಹಿಮೆಗಳನ್ನು ವರ್ಣಿಸುವದು ಅವರಿಗೆ ದೈವವನ್ನು ನೆನದಂತಹ ಸಂತೃಪ್ತಭಾವ, ಶಿವನನ್ನು, ಬಸವಣ್ಣನನ್ನು, ಲಿಂಗಯ್ಯನನ್ನು ಮಠದ ಪೂಜ್ಯರನ್ನು ಭಕ್ತಿ ತುಂಬಿದ ಕಂಠದಿಂದ ವರ್ಣಿಸುವ ಇವರು ಕಲ್ಯಾಣದ ಶರಣರ ನೆನದರೆ ಅರಳುವ ಮಲ್ಲಿಗೆ ಮುಡಿದಹಾಗೆ ಎಂದು ಹೇಳುವಲ್ಲಿ ಅವರು ಶರಣರ ಬಗ್ಗೆ ಹೊಂದಿರುವ ನಿಲವುಗಳು ಕಂಡುಬರುತ್ತವೆ.

ಡಾ. ಬಿ. ಎಸ್. ಗದ್ದಗಿಮಠರವರ ಕನ್ನಡ ಜಾನಪದ ಗೀತೆಗಳು ಎಂಬ ಮಹಾಪ್ರಬಂಧದಲ್ಲಿ ಹಲವಾರು ಜನಪದ ತ್ರಿಪದಿ, ಕಥನ ಹಾಡುಗಳನ್ನು ಶರಣರಿಗೆ ಸಂಬಂಧಿಸಿದಂತೆ ಉಲ್ಲೇಖಿಸಿ ಅರ್ಥಪೂರ್ಣ ವಿವರಣೆಗಳನ್ನು ನೀಡಿರುವದನ್ನು ಕಾಣುತ್ತೇವೆ. ಕಲ್ಯಾಣದ ಬಸವಯ್ಯ, ಕಿನ್ನರಿಬೊಮ್ಮಯ್ಯ, ಹೂಗಾರಮಾದಯ್ಯ, ಕುಂಬಾರಗುಂಡಯ್ಯ, ಮಾದಾರಚೆನ್ನಯ್ಯ ಮೊದಲಾದ ಶರಣರ ಕುರಿತಾದ ಜನಪದ ಸಾಹಿತ್ಯದ ನೆಲೆಯ ಅವಲೋಕನ ಈ ಕೃತಿಯಲ್ಲಿ ವಿಶಿಷ್ಟ ಪೂರ್ಣವಾಗಿ ಕಂಡುಬರುತ್ತದೆ. ಆಯಗಾರ ಸಂಸ್ಕೃತಿ ಕೆಲವೊಂದು ಹಳ್ಳಿಗಳಲ್ಲಿ ಕಂಡುಬರುತ್ತದೆಯಾದರೂ ಸಹ ಈ ಹಿಂದಿನ ದಶಕಗಳಲ್ಲಿ ಆಯಗಾರರ ಬಗ್ಗೆ ಇರಲಾದ ನಂಬಿಕೆ, ಬಾಂಧವ್ಯ, ಪರಸ್ಪರ ಗೌರವ, ಸಹಕಾರದ ಭಾವನೆಗಳು ಇಂದು ಕಾಣುತ್ತಿಲ್ಲ ಹಣವೆಂಬ ಅನಿವಾರ್ಯ ಇಲ್ಲಿ ಎಲ್ಲವನ್ನು ಕೃತಕವಾಗಿಸುವಲ್ಲಿ ಕೃತಜ್ಞಾರಹಿತ ಎನಿಸುವಲ್ಲಿ ಯಶಸ್ಸು ಕಂಡಿದೆ ಎನ್ನಬಹುದು.

**ಬೂದನಿಗೆ ಬಾಸಿಂಗ ಭೂಮಿ ತಾಯಿಗೆ ದಂಡೆ**
**ಸಾಲ ಶರಣರಿಗೆ ಸರಮಾಲೆ । ಕಟಿಗೊಂಡು**
**ಮಾದಯ್ಯ ಗೆದ್ದ ಕೈಲಾಸ ॥**

ಈ ಜನಪದ ತ್ರಿಪದಿಯಲ್ಲಿ ಉಲ್ಲೇಖಗೊಂಡಿರುವ ಮಾದಯ್ಯ, ಹೂಗಾರ ಮಾದಯ್ಯನೇ ಇರಬೇಕೆಂದು ಕೆಲವರವಾದ, ಹೂಗಾರ ಕಸುಬುದಾರ. ಗ್ರಾಮೀಣ ಭಾಗದಲ್ಲಿ ಬಾಬುದಾರರ ಮಹತ್ವದ ಕಾರ್ಯಗಳು ಕಂಡುಬರುತ್ತವೆ. ಹೂಮಾಲೆ, ದಂಡೆ, ಬಾಸಿಂಗ ಕೊಡುವ ಇವರು ಸುಗ್ಗಿಯ ಕಾಲಕ್ಕೆ ಹೂಪತ್ರಿ, ಬಾಸಿಂಗ, ದಂಡೆ ಕೊಡುವದನ್ನು ಜನಪದರು ಮೇಲಿನಂತೆ ನೆನೆದಿರುವದನ್ನು; ಸಾಲ ಶರಣರು ಯಾರೆಂದೂ ನೋಡುವಾಗ ಸುಗ್ಗಿಯ ಉಪಕರಣಗಳೆನಿಸಿದ ರ್‍ಯಾಗೋಲು, ಸೆಳ್ಳು, ಜಂತೆ–ಗುಂಟೆ, ಹತಿಗಣ್ಣು, ಕರಿಬಂಟ, ಬಿಳಿಬಂಟ ಇವುಗಳೆಂದು ಅರ್ಥೈಸಬಹುದಾಗಿದೆ. ಸುಗ್ಗಿಯ ಸಾಹಿತ್ಯದ ಬಗ್ಗೆ ಡಾ.ಬಿ.ಎಸ್.ಗದ್ದಗಿಮಠರವರು ಜನಪದ ಹಿನ್ನಲೆಯಲ್ಲಿನ ವಿವರಣೆಗಳನ್ನು ವಿಶ್ಲೇಷಿಸುತ್ತಾ ಕೆಲವು ತ್ರಿಪದಿಗಳನ್ನು ಉಲ್ಲೇಖಿಸಿದ್ದು, ಅವುಗಳನ್ನು ಗಮನಿಸುವದಾದರೆ......

**ಕಣವೆ ಮಂಟಪವಾತೊ, ಗುಣವಂತ ಬಸವೇಶ**
**ಹೊಣೆಗಾರ ರೈತ ದಂಡೇಶ । ಕಣಮೇಟಿ**
**ಗಣೆಗುರುವು ಕಣಕೆ ಪ್ರಭುಲಿಂಗೊ ॥**

**ಮೂರು ಕಾಲಿನ ಮೆಟ್ಟು, ಮೂರು ಲಿಂಗಗಳೇನೊ**
**ತೂರುವನು ಜೀವಿ ಚಿತ್ಕಳೆಯು । ವಚನಗಳು**
**ತೂರಿದಾ ರಾಶಿ ಶಿವಮತಕೆ ॥**

**ಕಕ್ಕಯ್ಯ ಸೆಳ್ಳಾಗಿ, ಚೊಕ್ಕ ಮುತ್ತಿನ ರಾಶಿ**
**ಇಕ್ಕಲಿಯ ಎಂಟು ಕಟ್ಟುಗಳು । ಹುಲುಸಾಗಿ**
**ಉಕ್ಕಿದವು ರಾಶಿವಚನಗಳು ॥**

ಈ ಜನಪದ ತ್ರಿಪದಿಗಳಲ್ಲಿ ಕೃಷಿ ಹಿನ್ನಲೆಯ ಸಂಸ್ಕೃತಿ ಅನಾವರಣಗೊಂಡಂತೆ ಕಂಡರೂ ಇಲ್ಲಿ ಹನ್ನೆರಡನೆ ಶತಮಾನದ ಶಿವಶರಣರ ಬಗ್ಗೆ ಗ್ರಹಿಸಬಹುದಾದ ಅನೇಕ ಸ್ವಾರಸ್ಯಕರ ಅಂಶಗಳನ್ನು ಜನಪದರು ಗುರುತಿಸಿ ಹೊಗಳಿರುವದನ್ನೆ ಕಾಣುತ್ತೇವೆ. ರೈತರು ತಮ್ಮ ಸುಗ್ಗಿಯ ಕಣವನ್ನೇ ಅನುಭವಮಂಟಪಕ್ಕೆ ಹೋಲಿಸಿದ್ದಾರೆ. ಬಸವಣ್ಣನವರ ಹಾಗೂ ಅಲ್ಲಮಪ್ರಭುದೇವರ ಸ್ಥಾನಗಳನ್ನು ಗುರುತಿಸಿದ್ದಾರೆ. ರಾಶಿಯ ಸಂದರ್ಭದಲ್ಲಿ ಬಳಸುವ ಎತ್ತರವಾದ ಸಾಧನವಾದ ಮೆಟ್ಟು ಇದು ಮೂರು ಕಾಲಗಳನ್ನು ಹೊಂದಿದ್ದು ಇವನ್ನೇ ಮೂರು ಲಿಂಗಗಳಿಗೆ ಹೋಲಿಸಿದ್ದಾರೆ. ಡೋಹರಕಕ್ಕಯ್ಯ ಇಲ್ಲಿ ವಚನಗಳೆಂಬ ರಾಶಿಗೆ ಸೆಳ್ಳಾಗಿ ಹುಲುಸಾದ ವಚನ ರಾಶಿಯನ್ನು ತೂರುವರು ಎಂಬಲ್ಲಿ ವಚನಗಳು ಸಮೃದ್ಧವಾಗಿ ಬೆಳೆದುಬಂದವು ಎಂಬ ನಿಲುವನ್ನು ಕಾಣುತ್ತೇವೆ.

ಬೂಧ, ಬೂರಯ್ಯ ಎಂಬ ಪದಗಳು ಜನಪದ ಹಂತಿಪದ ಹಾಡುಗಳಲ್ಲಿ ಉಲ್ಲೇಖಗೊಂಡಿರುವದನ್ನು ಕಾಣುತ್ತೇವೆ. ಕಣದಲ್ಲಿ ಸೆಗಣಿಯಿಂದ ಮಾಡಿದ ಮೂರ್ತಿ ಇದರ ತಲೆಯ ಮೇಲೆ ಹಂತಿ ಕಟ್ಟಿದ ಎತ್ತುಗಳ ಬಾಲದ ಕೂದಲುಗಳನ್ನು ಚುಚ್ಚಿರುತ್ತಾರೆ. ಬೂದನನ್ನು ಹಂತಿಯ ಕಡಿಎತ್ತಿನ ಸಗಣಿಯಿಂದ ಮಾಡಿರುತ್ತಾರೆ. ಬೂದನು ಯಾರು? ಬೂದಪದದ ಹಿನ್ನೆಲೆ ಈ ಬಗ್ಗೆ ಅನೇಕ ಸಂಶೋಧಕರು ಗಮನಹರಿಸಿ ಅನೇಕ ಲಭ್ಯ ಎನಿಸುವ ತ್ರಿಪದಿಗಳ ಆಧಾರದಲ್ಲಿ ಬುದ್ಧಿವಂತಯ್ಯ, ಬುದ್ಧಯ್ಯ, ಬೂರಯ್ಯ ಎಂಬ ಹೆಸರುಗಳು ಇರುವದನ್ನು ಕಂಡು ಅಲ್ಲಮಪ್ರಭುದೇವರಿಗೆ ನೀಡಿದ ಮುಖ್ಯಸ್ಥಾನವನ್ನು ಇಲ್ಲಿ ಅವಲೋಕಿಸಬಹುದಾಗಿದೆ.

ವಿಧ್ಯಾನಿಧಿ ಪ್ರಕಾಶನ ಗದಗ ವತಿಯಿಂದ ಪ್ರಕಟಗೊಂಡ ಎಸ್.ಎಸ್. ಅಂಗಡಿಯವರ ಹಂತಿ-ಪಂತಿ ಪದಗಳು ಎಂಬ ಕೃತಿಯಲ್ಲಿನ ಬೂದ-ಬನದಮ್ಮ, ಕರಿಬಂಟ ಚರಗದ ಪದದಲ್ಲಿನ ಆಯ್ದ ಜನಪದ ತ್ರಿಪದಿಯೊಂದನ್ನು ಗಮನಿಸುವದಾದರೆ.

**ಬೂದಯ್ಯ ಬೂದಯ್ಯ ಎದ್ದು ತೂರಿದ ಮೆದವ**
**ಬಿದ್ದರಾಸೆಲ್ಲ ವಚನಗಳೊ । ಅಲ್ಲಮನು**
**ಹುದ್ದೆ ಏರ್ಯಾನೋ ಕಲ್ಯಾಣ ಗದ್ದುಗೆ ॥**

ಹನ್ನೆರಡನೆಯ ಶತಮಾನದ ಬಸವಾದಿ ಶಿವಶರಣರ ಬಗ್ಗೆ ಆ ಕಾಲಘಟ್ಟದ ಸಾಮಾಜಿಕ, ಧಾರ್ಮಿಕ, ಆರ್ಥಿಕ ಮುಂತಾದ ವಲಯಗಳಲ್ಲಿನ ಸುಧಾರಣೆಗಳ ಬಗ್ಗೆ ಇಂದಿಗೂ ಅನೇಕ ಅಧ್ಯಯನಗಳು ನಡೆಯುತ್ತಾಬರಲಾಗಿವೆ. ಅಂತೆಯೇ ಜನಪದರ ಹಾಗೂ ಶರಣರ ಈ ಕುರಿತಾಗಿಯೂ ಬಹುಆಯಾಮದ ಚಿಂತನೆಗಳು, ಚರ್ಚೆಗಳು ವಿಶ್ವವಿದ್ಯಾಲಯದ ಮಟ್ಟದಲ್ಲಿ ನಿರಂತವಾಗಿ ನಡೆಯುತ್ತಾ ಬಂದಿವೆ. ಅಂತೆಯೇ ಇನ್ನೊಂದು ಕಡೆಯಲ್ಲಿ ಭಕ್ತಿಯ ಪರಾಕಾಷ್ಠೆ, ಭಾವಾವೇಶ, ಪ್ರಾದೇಶಿಕ ಹಿನ್ನಲೆಯಲ್ಲಿನ ಗೊಂದಲ ಎನಿಸುವ ಉಲ್ಲೇಖಗಳು ಹಾಗೂ ಜನಪದ ನೆಲೆಯ ಆಕರಗಳು ಎಷ್ಟರ ಮಟ್ಟಿಗೆ ವಿಶ್ವಾಸಾರ್ಹ, ನಂಬಲರ್ಹ ಎಂಬ ಚರ್ಚೆಗಳು ಜಾಗೃತ ಸ್ವರೂಪದ ಪ್ರಶ್ನೆಗಳು ಇರುವದನ್ನು ಕಾಣುತ್ತೇವೆ. ವಚನಸಾಹಿತ್ಯ ಶರಣ ಸಮುದಾಯದ ಆದರ್ಶಗಳನ್ನು ಅರಿಯುವ ಹಲವಾರು ಮಾರ್ಗಗಳಲ್ಲಿ ಜನಪದ ಸಾಹಿತ್ಯದ ಮೂಲಕವು ಅನೇಕ ಹೊಸ ಹೊಸ ಸಂಗತಿಗಳನ್ನು ಅರಿಯಬಹುದಾಗಿದೆ. ಇಂದಿಗೂ ಕೂಡ ಅನೇಕ ಹಿರಿಯ ಕೃಷಿಕರಲ್ಲಿ, ಜನಪದಕಲಾವಿದರಲ್ಲಿ, ಕುಲಕಸಬುದಾರರಲ್ಲಿ ಅನೇಕ ಅಧ್ಯಯನ ಯೋಗ್ಯ ಸಂಗತಿಗಳು ಹನ್ನೆರಡನೇ ಶತಮಾನದ ಸಾಂಸ್ಕೃತಿಕ ಅಂಶಗಳನ್ನು ಅರಿಯುವ ದೃಷ್ಠಿಯಿಂದ ಸಾಕಷ್ಟು ಜನಪದ ಮೌಲ್ಯಗಳು, ತ್ರಿಪದಿಗಳು, ಹಾಡುಗಳು, ಕಥನಗಳು, ಕಂಡುಬರುತ್ತವೆ. ಅವುಗಳನ್ನು ಸಂಗ್ರಹಿಸುವ, ದಾಖಲಿಸುವ ಕಾರ್ಯ ನಡೆದು ಪರಿಷ್ಕೃತ, ವಿಶ್ಲೇಷಣೆ ನಡೆಯಬೇಕು. ಇವುಗಳಿಗೆ ಪೂರಕವಾಗಿ ಕಾರ್ಯಾಗಾರ, ವಿಚಾರ ಸಂಕಿರಣಗಳು, ಚರ್ಚಾಗೋಷ್ಠಿಗಳು, ಸಂಶೋಧನಾ ಕಾರ್ಯಗಳು ಕೂಡಾ ಹೆಚ್ಚೆಚ್ಚು ನಡೆಯಬೇಕು ಈ ಮೂಲಕ ಉಭಯ ಸಂಗತಿಗಳ ನೆಲೆಯಲ್ಲಿ ಹಲವಾರು ಅಧ್ಯಯನ ಯೋಗ್ಯ ಸಂಗತಿಗಳನ್ನು ಬೆಳಕಿಗೆ ತರುವ ಕಾರ್ಯ ನಡೆಯಬೇಕು. ಪಠ್ಯಪುಸ್ತಕ ರಚನೆಗೆ ಸಂಬಂಧಿಸಿದಂತೆಯೂ ಕೂಡಾ ಈ ಬಗೆಯ ಅವಲೋಕನ ಅವಶ್ಯಕ ಎನಿಸುತ್ತದೆ. ಅಂತೆಯೇ ಜನಪದ ಎಂಬುದು ಎಲ್ಲದಕ್ಕೂ ತಾಯಿಬೇರು ಎಂಬ ಮಾತು ಸತ್ಯ ಎಂಬುದು ಎಲ್ಲರೂ ಒಪ್ಪಲೇಬೇಕಾದ ಮಾತಾಗಿದೆ ಎನ್ನಬಹುದು.

■■

# ಶರಣರ ಕಾಯಕ ದಾಸೋಹ ಪರಿಕಲ್ಪನೆ

● ಚಂದ್ರಶೇಖರ ಹಿರೇಮಠ

ಶರಣ ಕೇಂದ್ರಗಳು ಕಾಯಕ ದಾಸೋಹಗಳ ಆಧಾರದ ಮೇಲೆ ಸಮೃದ್ಧ ಸಮಾಜವನ್ನು ನಿರ್ಮಿಸಿದವು, ಕಾಯಕ ಎಂದರೆ ದುಡಿಮೆ, ದಾಸೋಹ ಎಂದರೆ ವಿತರಣೆ, ಈ ಎರಡು ಅಂಶಗಳು ಸಮಾಜದಲ್ಲಿ ಬಹಳ ಪ್ರಾಮುಖ್ಯತೆ ಪಡೆದುಕೊಂಡಿದವೆ. ಅವುಗಳಿಗೆ ಶರಣರು ನೀಡಿದ ಅರ್ಥ ವ್ಯಾಪ್ತಿ ಬಹಳ ವಿಶಾಲವಾದದ್ದು, ಶರಣರ ಸಮಾಜದಲ್ಲಿ ಆಲಸಿಗಳಿಗೆ ಆಶ್ರಯವಿರಲಿಲ್ಲ ಕೇವಲ ಕಾಯಕದಲ್ಲಿ ನಿರತರಾಗಿರುವವರಿಗೆ ಮಾತ್ರ ಆಶ್ರಯವಿತ್ತು. ಈ ಸಮಾಜದಲ್ಲಿ ಸಂಗ್ರಹ ಮಾಡುವದು ಪಾಪವಾಗಿದ್ದಿತು. ಆಸ್ತಿ ಎಂಬುದು ಕಳುವಿನ ವಸ್ತು ಎನ್ನುವ ಪ್ರೆಂಚ ರಾಜನೀತಿಜ್ಞ ಪ್ರೋಧಾನ್‌ನ ಮಾತನ್ನು ಶರಣರು ಅವನಿಗಿಂತಲೂ ಏಳೆಂಟು ಶತಮಾನಗಳ ಮೊದಲೆ, ಮನಗಂಡಿದ್ದರು.

ಕಾಯಕ ಎಂಬುದು "ಕಾಯ" ಪದದಿಂದ ನಿಷ್ಪನ್ನವಾದದ್ದು, ಕಾಯ ಎಂದರೆ ದೇಹ ಅರ್ಥಾತ್ ದೈಹಿಕ ಪರಿಶ್ರಮ ಎಂದು ಅರ್ಥವಾಗುತ್ತದೆ. ಕ್ರಿಯೆ, ಕಾರ್ಯ, ಕರ್ತವ್ಯ, ಕೃತ್ಯ, ಮಾಟ, ಮುಂತಾದ ಪರ್ಯಾಯ ಪದಗಳಿಂದ ಬಂದುದೇ ಕಾಯಕ. ಸಂಸ್ಕೃತದಲ್ಲಿ ಕಾಯಿಕ ಶಬ್ದವನ್ನು ಗಮನಿಸಬಹುದು, ವಿ.ಎಸ್.ಆಪ್ಟೆಯವರ ಸಂಸ್ಕೃತ ನಿಘಂಟಿನಲ್ಲಿ ಅವರು ಅದಕ್ಕೆ Relating to the body,bodily, corporeal ಎಂಬ ಅರ್ಥಗಳನ್ನು ಕೊಟ್ಟಿದ್ದಾರೆ.ಅಂದರೆ ದೇಹ ಸಂಬಂಧವಾದದ್ದು ಎಂದು ಅದರ ಮುಖ್ಯ ಅರ್ಥ. ಕಾಯಕ ಎಂದರೆ ಸತ್ಕ್ರಿಯೆ, ಕರ್ಮ ಮೂಲವಾಗಿ ಬಂದಂತಹ ಕಾಯವನ್ನು ಕ್ರಿಯಾಮೂಲವನ್ನಾಗಿ ಮಾಡುವದೇ ಕಾಯಕ.ಕಾಯಕ್ಕೂ ಕಾಯಕಕ್ಕೂ ಅವಿನಾಭಾವ ಸಂಬಂಧವಿದೆ. ಮಣ್ಣುಬಿಟ್ಟು ಮಡಕೆ ಇಲ್ಲವೆಂಬಂತೆ, ಕಾಯಬಿಟ್ಟು ಕಾಯಕವಿಲ್ಲ. ಕಾಯಕಕ್ಕೆ ಕಾಯಬೇಕು, ಕಾಯಕ್ಕೆ ಕಾಯಕಬೇಕು. ಕಾಯದಲ್ಲಿ ಹೇಗೆ ಸ್ಥೂಲ, ಸೂಕ್ಷ್ಮ, ಕಾರಣ ಎಂದು ಮೂರು ಬಗೆಯೋ ಹಾಗೆಯೇ ಕಾಯಕದಲ್ಲಿಯೂ ಸ್ಥೂಲಕಾಯಕ, ಸೂಕ್ಷ್ಮಕಾಯಕ, ಕಾರಣಕಾಯಕ, ಎಂದು ಮೂರು ಬಗೆ.ಇವುಗಳನ್ನು ಶಿವಶರಣರು ತ್ರಿವಿಧ ದಾಸೋಹವೆಂದು ಕರೆದರು. ಕಾಯಕಕ್ಕೆ ಕ್ರಿಯಾಶಕ್ತಿಯೆ ಮೂಲ ಅಲ್ಲದೆ ಅದು ಒಂದು ಶಕ್ತಿಯು ಅಹುದು. ಕ್ರಿಯಾಶಕ್ತಿ, ಜ್ಞಾನಶಕ್ತಿ, ಇಚ್ಛಾಶಕ್ತಿ, ಈ ಮೂರು ಶಕ್ತಿಗಳ ಬೀಡು. ಈ ಮೂರಿಲ್ಲವಾದರೆ ಈ ಬಾಳು ಬರಿ ಗೋಳು. ಇವುಗಳಲ್ಲಿ ಕ್ರಿಯಾಶಕ್ತಿಯೇ ಪ್ರಧಾನ. ಜ್ಞಾನೇಚ್ಛಶಕ್ತಿಗಳಿಗೂ ಇದು ಸಹಾಯಕ. ಅರಿತುದುದನ್ನು, ಬಯಸಿದುದನ್ನು ಪಡೆಯಬೇಕಾದರೆ ಕ್ರೀಯಾಶಕ್ತಿ ಬೇಕು. ಕ್ರಿಯೆ ಇಲ್ಲದೆ ಅವೆರಡು ಸಫಲವಾಗವು ಎಂದಿದ್ದಾರೆ".

ಜೇಡರ ದಾಸಿಮಯ್ಯನ ವಚನದಲ್ಲಿ "ಕಾಯಕ" ಶಬ್ದ ಬಳಕೆಯಾಗಿಲ್ಲ, ಬಸವಣ್ಣನವರ ಮೂರು ವಚನಗಳಲ್ಲಿ ಕಾಯಕ ಶಬ್ದ ಬಳಕೆಯಾಗಿದ್ದು ವೃತ್ತಿ ಮಾಡುವ ಕೆಲಸ, ಎಂಬರ್ಥದಲ್ಲಿದೆ, ಅಲ್ಲಮನಲ್ಲಿ ಕಾಯಕ ಶಬ್ದಕ್ಕೆ ಬದಲಾಗಿ "ಮಾಟ"ಎಂಬ ಶಬ್ದ ಬಳಕೆಯಾಗಿದೆ. ನುಲಿಯ ಚಂದಯ್ಯ, ಆಯ್ದಕ್ಕಿ ಮಾರಯ್ಯಾ, ಲಕ್ಕಮ್ಮ, ಮೋಳಿಗೆ ಮಾರಯ್ಯ ಹಾಗೂ ಮಹಾದೇವಿ ಮುಂತಾದವರ ವಚನಗಳಲ್ಲಿ ಒಂದು ಸಿದ್ಧಾಂತವಾಗಿ ರೂಪುಗೊಳ್ಳುವುದನ್ನು ಗಮನಿಸಬಹುದು. ನುಲಿಯ ಚಂದಯ್ಯನ ವಚನಗಳಲ್ಲಿ ಕಾಯಕ ತತ್ವ ಅರಳುತ್ತಾ ಹೋಗುತ್ತದೆ , ಹುಲ್ಲಿನಿಂದ ಹಗ್ಗ ಹೊಸೆದು ಮಾರಿ ಅದರಿಂದ ಬಂದ ದ್ರವ್ಯದಿಂದ ದಾಸೋಹವನ್ನು ಮಾಡುವದು ನುಲಿಯ ಚಂದಯ್ಯನ ಧರ್ಮ ಹಾಗೂ ವೃತ್ತಿಯಾಗಿದ್ದಿತ್ತು. ಆ ವೃತ್ತಿ ಧರ್ಮ ಎಷ್ಟು ಪವಿತ್ರವೂ ಪರಮೋಚ್ಚವೂ ಆಗಿದ್ದಿತೆಂದರೆ ಶಿವ ಅದನ್ನು ಮೆಚ್ಚಿಕೊಂಡು ಲೋಕಕ್ಕೆ ಇಂಥ ಕಾಯಕಜೀವಿಯ ದರ್ಶನ ಮಾಡಿಸಬೇಕೆಂದುಕೊಂಡಿದ್ದನು. ಎಂಬುದು ಕತೆ.

ಆಯ್ದಕ್ಕಿ ಮಾರಯ್ಯ ಮತ್ತು ಲಕ್ಕಮ್ಮರ ಪ್ರಸಂಗದಲ್ಲಿ ಕಾಯಕ ಮತ್ತಷ್ಟು ವಿಶದಗೊಳ್ಳುತ್ತದೆ, ಶರಣರ ಅಂಗಳದಲ್ಲಿ ಚೆಲ್ಲಿರುವ ಅಕ್ಕಿಯನ್ನು ಆಯ್ದು ತರುವುದು ಅವನ ಉದ್ಯೋಗ–ವೃತ್ತಿ–ಕಾಯಕ. ಒಂದು ದಿನ ಅಲ್ಲಮ ಪ್ರಭುಗಳು ಅನುಭವ ಮಂಟಪದಲ್ಲಿ ಮನಮಗ್ನಯೋಗದಲ್ಲಿ ವರ್ಣನೆ ಮಾಡುವಾಗ ಆ ವರ್ಣನೆಗೆ ಮನ ಸೋತು ಮಾರಯ್ಯ

ಸಂಶೋಧನಾರ್ಥಿ, ಲೋಕಾಪುರ ತಾ. ಮುಧೋಳ ಜಿ. ಬಾಗಲಕೋಟ ಮೊ–೯೮೪೪೫೪೫೮೨೬೮೪

ತನ್ನ ಕಾಯಕವನ್ನೆ ಮರೆತುಬಿಟ್ಟು, ಮಾರಯ್ಯನು ಮನಮಗ್ನಯೋಗದಲ್ಲಿ ಮುಳುಗಿದ.ಆಗ ಮಡದಿ ಲಕ್ಕಮ್ಮಾ ಬಂದು ಗಂಡನನ್ನು ಎಚ್ಚರಿಸುತ್ತಾ "ಕಾಯಕ ನಿಂದಿತ್ತು ಹೋಗಯ್ಯಾ ಎನ್ನಾಳ್ದನೆ" ಎಂದಾಗ ಮಾರಯ್ಯ ಎಚ್ಚತ್ತು ಕಾಯಕಕ್ಕೆ ಹೊರಟ. ಆದರೆ ಮನಮಗ್ನಯೋಗದ ಭ್ರಾಂತಿಯಲ್ಲಿದ್ದ ಮಾರಯ್ಯ ದುಡಿಯದೆ ಶ್ರಮಿಸದೆ ಅಣ್ಣನವರ ಅಂಗಳದಲ್ಲಿ ರಾಶಿಯಾಗಿದ್ದ ಅಕ್ಕಿಯನ್ನು ಜೋಳಿಗೆಯಲ್ಲಿ ತುಂಬಿ ತಂದಾಗ, ಲಕ್ಕಮ್ಮ "ಈಸಕ್ಕಿಯಾಸೆ ನಿಮಗೇಕೆ? ಆಸೆಯೆಂಬುದು ಅರಸಿಂಗಲ್ಲದೆ ಶರಣರಿಗಲ್ಲ"ಎಂದು ಎಚ್ಚರಿಸಿದಾಗ ಎಚ್ಚತ್ತು ತಂದಿದ್ದ ಅಕ್ಕಿಯನ್ನು ಸುರಿದು ತನ್ನ ಕಾಯಕದಂತೆ ಅಕ್ಕಿಯನ್ನು ಆಯ್ದು ತಂದು ತನ್ನ ಕಾಯಕ ಮಾಡಿ, ಆ ಕಾಯಕದಿಂದ ಬಂದದ್ದರಿಂದ ದಾಸೋಹ ಮಾಡಿ ತೃಪ್ತಿ ಗೊಂಡನು ಎಂದು ಶೂನ್ಯ ಸಂಪಾದನೆಯಲ್ಲಿ ತಿಳಿಸಿದ್ದಾರೆ. ಶರಣರು ಪ್ರತಿಪಾದಿಸಿದ ಅತ್ಯಂತ ಪ್ರಮುಖವಾದ ಆರ್ಥಿಕ ತತ್ವವೆಂದರೆ ಕಾಯಕ ಸಿದ್ಧಾಂತ. ಅವರ ದೃಷ್ಟಿಯಲ್ಲಿ ಕಾಯಕದಿಂದಲೇ ಶರಣನಿಗೆ ಮುಕ್ತಿ. ದುಡಿಮೆಯಿಂದಲೇ ವ್ಯಕ್ತಿಯ ವಿಕಾಸ. ಶರಣರ ದೃಷ್ಟಿಯಲ್ಲಿ ಕಾಯಕ ಸತ್ಯಶುದ್ಧವಾಗಿರಬೇಕು. ಪ್ರಾಮಾಣಿಕವಾಗಿರಬೇಕು. ಕಾಯಕದಿಂದ ಯಾರಿಗೂ ವಿನಾಯತಿ ಇಲ್ಲ. ಕಾಯಕದಲ್ಲಿ ನಿರತನಾದವನು ಯಾರ ಹಂಗಿಗೂ ಒಳಗಾಗಬೇಕಾಗಿಲ್ಲ.

ಆಯ್ದಕ್ಕಿ ಮಾರಯ್ಯ ವಚನ ಒಂದರಲ್ಲಿ ಕಾಯಕದ ಮಹತ್ವ ಕುರಿತು ಹೀಗೆ ಹೇಳುತ್ತಾನೆ.

**ಕಾಯಕದಲ್ಲಿ ನಿರತನಾದಡೆ**
**ಗುರುದರುಶನವಾದರೂ ಮರೆಯಬೇಕು**
**ಲಿಂಗಪೂಜೆಯಾದರೂ ಮರೆಯಬೇಕು**
**ಜಂಗಮ ಮುಂದಿದ್ದರೂ ಹಂಗು ಹರಿಯಬೇಕು**
**ಕಾಯಕ ಕೈಲಾಸವಾದ ಕಾರಣ**
**ಅಮರೇಶ್ವರ ಲಿಂಗವಾಯಿತ್ತಾದರೂ ಕಾಯಕದೊಳಗು**

ಕಾಯಕದಲ್ಲಿ ನಿರತನಾದಾಗ ಎಲ್ಲವನ್ನು ಮರೆಯಬೇಕು ಏಕೆಂದರೆ ಕಾಯಕವೆ ಕೈಲಾಸವಾದುದಕ್ಕೆ, ಕಾಯಕದೊಳಗೆ ಅಮರೇಶ್ವರ ಲಿಂಗವನ್ನು ಕಾಣಬೇಕೆಂದಿದ್ದಾರೆ.ಈ ರೀತಿಯಾಗಿ ಮಾರಯ್ಯ ಕಾಯಕದ ಮಹತ್ವವನ್ನು ಸಾರಿದ್ದಾರೆ.

ಜಂಗಮರ ಕಾಯಕದಲ್ಲಿ ಪ್ರಮುಖವಾಗಿ ಮೂರು ವಿಧಾನಗಳಿವೆ.ಒಂದೊಂದು ವಿಧಾನವನ್ನು ಅನುಸರಿಸುವವರಿಗೆ ಒಂದೊಂದು ಹೆಸರಿರುತ್ತದೆ.ಅವು ಕ್ರಮವಾಗಿ ಇಂತಿವೆ.

೧. ತೆಕ್ಕೆಯ ಕಾಯಕ ೨. ಮುಳ್ಳಾವಿಗೆಯ ಕಾಯಕ ೩. ಶಸ್ತ್ರದ ಕಾಯಕ

**೧. ತೆಕ್ಕೆಯ ಕಾಯಕ :** ತೆಕ್ಕೆಯ ಕಾಯಕದಯ್ಯಗಳು ಊರೂರು ತಿರುಗುವ ಜಂಗಮರು.ಅವರು ಮಠದಲ್ಲಿ ವಾಸ್ತವ್ಯ ಹೂಡಿ, ಅಲ್ಲಿನ ಜಂಗಮರಿಂದ ಅಧರ್ಮಿಗಳ ಪಟ್ಟಿ ಪಡೆಯುತ್ತಾರೆ, ಅನಂತರ ಆ ಅಧರ್ಮಿಯ ಮನೆಯ ಮುಂದೆ ಸೂರ್ಯೋದಯಕ್ಕಿಂತ ಮೊದಲೇ ಹೋಗಿ ನಿಂತಿರುತ್ತಾರೆ. ಬಾಗಿಲು ತೆಗೆದ ಕೂಡಲೇ ಒಳನುಗ್ಗಿ ಮನೆಯಲ್ಲಿರುವ ನಡುಗಂಬಕ್ಕೆ ತೆಕ್ಕಿ ಬಡೆದುಕೊಳುತ್ತಾರೆ.ಆ ಅಧರ್ಮಿಯು ಗುರು ಹಿರಿಯರ ಕ್ಷಮೆ ಕೇಳಬೇಕು. ತಾನು ಅಧರ್ಮವನ್ನು ತ್ಯಜಿಸಿ ಧರ್ಮದ ಹಾದಿ ಹಿಡಿಯುತ್ತೇನೆಂದು ಸ್ವಾಮಿಗಳಿಗೆ ವಚನ ನೀಡುವವರೆಗೂ ಅವರು ಆ ಕಂಬವನ್ನು ಬಿಡುವದಿಲ್ಲಾ. ಅವರು ಕ್ಷಮೆ ಕೇಳುವವರೆಗೂ ಪೂಜೆಯಿಲ್ಲಾ, ಪ್ರಸಾದವಿಲ್ಲ. ಇದು ಒಂದು ದಿನವಾಗಬಹುದು,ಎರಡು,ಮೂರು ದಿನವಾಗಬಹುದು, ಒಂದು ವೇಳೆ ಅಧರ್ಮಿ ಇದಕ್ಕೆ ಬಗ್ಗದಿದ್ದರೆ ಸ್ವಾಮಿಗಳು ಅಲ್ಲೇ ಪ್ರಾಣತ್ಯಾಗ ಮಾಡಬಹುದು. ಅನಂತರ ಅಧರ್ಮಿಗೆ ಪಶ್ಚಾತಾಪವಾದರೂ ಆಗಬಹುದು. ಈ ಕಾಯಕ ಸಂಪೂರ್ಣವಾಗಿ ನಿಂತರೂ ಕೂಡ ಇತ್ತೀಚೆಗೆ ಒಂದೆರಡು ಉದಾಹರಣೆಗಳು ಬಿಜಾಪುರ ಜಿಲ್ಲೆಯಲ್ಲಿ ಬೆಳಕಿಗೆ ಬಂದಿವೆ. ಈಗ ಸಾಮಾನ್ಯವಾಗಿ ಈ ಕಾಯಕ ತನ್ನ ಪ್ರಾಶಸ್ತ್ಯವನ್ನು ಕಳೆದುಕೊಂಡಿದೆ.

**೨. ಮುಳ್ಳಾವಿಗೆ ಕಾಯಕ :** ಮುಳ್ಳಾವಿಗೆ ಕಾಯಕದಯ್ಯಗಳ ಕಾಯಕ ಮನೆಯ ಮುಂದೆ ಅಥವಾ ಬೀದಿಯ ಹಾಗೂ ಊರಿನ ಅಗಸಿಯ ಮಧ್ಯದಲ್ಲಿ ನಡೆಯುತ್ತದೆ. ಈ ಕಾಯಕವನ್ನು ಕುರಿತು ಉತ್ತಂಗಿ ಚನ್ನಪ್ಪನವರು ಇದೊಂದು ಅನುಭವ ಮಂಟಪದ ಕಾರ್ಯಗಳಲ್ಲೊಂದಾಗಿತ್ತೆಂದು ವಿವರಿಸುತ್ತಾ "ಮುಳ್ಳಾವಿಗೆಯ ಕಾಯಕವೆಂಬುದೊಂದು ಹೊಸ ತರಹದ ವಿಧಿಯು ಪ್ರಚಾರದಲ್ಲಿ ತರಲ್ಪಟ್ಟದ್ದು. ಪಾಪಿಗಳಾದವರು ತಮ್ಮ ಪಾಪದ ಬಗ್ಗೆ ಪಶ್ಚಾತಾಪ ಪಡುವಂತೆ ನಿರಪರಾಧಿಗಳಾದ ಶಿವಭಕ್ತರು ಮೊಳೆಗಳ ಮೇಲೆ ಉಪವಾಸ ನಿಂತುಕೊಳ್ಳುವರು. ಪಾಪಮಾಡದವನು ಒಬ್ಬನು, ದುಃಖ ಅನುಭವಿಸುವವನು ಇನ್ನೊಬ್ಬನು. ಕರ್ಮವಾದಕ್ಕೂ ಮಾನವನ ಸ್ವಭಾವಕ್ಕೂ ವಿರೋಧವಾಗಿ ತೋರುವ ಈ ಆತ್ಮಶುದ್ಧಿಯ ತತ್ತ್ವವು ಜಗತ್ತಿನಲ್ಲಿ ಸುಧಾರಿಸಿದ ಇತರ ಯಾವ ಸಮಾಜಗಳಲ್ಲಿಯೂ ಪ್ರಚಾರದಲ್ಲಿದ್ದಂತೆ ಕಂಡು ಬರುವುದಿಲ್ಲ" ಎಂದು ಹೇಳುತ್ತಾರೆ.ಆದರೆ ಶರಣರು ಇಂತಹ ಉಗ್ರಕಾಯಕಗಳನ್ನು ಅನುಸರಣೆಗೆ ತಂದವರಲ್ಲ.ಇದು ಬಹುಶಃ ಗಣಾಚಾರ ಕಾಯಕದ ವಿಶಿಷ್ಟ ಭಾಗವಾಗಿರಬಹುದು. ವಚನಗಳಲ್ಲಿಯು ಇದರ ಉಲ್ಲೇಖ ದೊರೆಯಲಾರದು. ಅಧರ್ಮಿಗಳ ಮನೆಯ ಮುಂದೆ ಚೂಪಾದ ಮೊಳೆಗಳನ್ನು ಜೋಡಿಸಿದ ಹಲಗೆಯ ಮೇಲೆ ಅಂಗಾಲನ್ನು ಊರಿ ನಿಲ್ಲುತ್ತಾರೆ.ಅಧರ್ಮಿಗಳ ಹೆಸರನ್ನು ಗಟ್ಟಿಯಾಗಿ ಹೇಳುತ್ತಾ

ಬಸವಾದಿ ಶರಣರ ಹೆಸರುಗಳನ್ನು ಸ್ಮರಿಸುತ್ತಾ, ಅಧರ್ಮಿಗೆ ಸದ್ಬುದ್ಧಿಸಯನ್ನು ಕೊಡಲೆಂದು ಶಿವನನ್ನು ಸ್ಮರಿಸುತ್ತಾ ನಿಂತರೆ, ಊರಿನ ಜನರೆಲ್ಲರು ಅಧರ್ಮಿಯನ್ನು ಶಪಿಸತೊಡಗುತ್ತಾರೆ. ಆಗ ತಪ್ಪನ್ನು ಒಪ್ಪಿಕೊಂಡು ಧರ್ಮಿಷ್ಠನಾಗುತ್ತಾನೆ. ಸ್ವಾಮಿಗಳು ರಕ್ತಸಿಕ್ತ ಪಾದಗಳನ್ನು ತೊಳೆದುಕೊಂಡು, ಸ್ನಾನ ಪೂಜಾದಿಗಳನ್ನು ಮುಗಿಸಿ ಪ್ರಸಾದ ಸ್ವೀಕರಿಸುತ್ತಾರೆ.

**೩. ಶಸ್ತ್ರ ಕಾಯಕ :** ಈ ಕಾಯಕದಲ್ಲಿ ಕೊನೆಯ ಪ್ರಯತ್ನವೆಂದು ಸಂಪೂರ್ಣ ತನ್ನ ಪ್ರಾಣವನ್ನೆ ಅರ್ಪಿಸಿ ಅವರನ್ನು ತಹಬದಿಗೆ ತರುವ ನಿಮಿತ್ಯ ಸೃಷ್ಟಿಸಿಕೊಂಡ ಕಾಯಕವೇ ಶಸ್ತ್ರಕಾಯಕ. "ಸೂರ್ಯೋದಯಕ್ಕೆ ಮುಂಚೆ ಅಧರ್ಮಿಯ ಮನೆಗೆ ಹೋಗಿ ಅವರ ಮನೆಯ ಮುಂದೆ ಹುರಿಯ ಒಂದು ಕೊನೆಯಲ್ಲಿರುವ ಕುಡುಗೋಲನ್ನು ಗೋಡೆಗೆ ನೇತು ಹಾಕಿ, ಮತ್ತೊಂದು ಕೊನೆಯಲ್ಲಿರುವ ಕುಡುಗೋಲನ್ನು ತಮ್ಮ ಕೈಯಲ್ಲಿ ಹಿಡಿದುಕೊಂಡು ರಸ್ತೆಯ ಮಧ್ಯಕ್ಕೆ ಬಂದು ನಿಲ್ಲುತ್ತಾರೆ ಹಾಗೂ ಗಟ್ಟಿಯಾಗಿ ಅಧರ್ಮಿಯ ಹೆಸರನ್ನು ಹೇಳುತ್ತಾ ಬಸವಾದಿ ಪ್ರಮಥರ ಹೆಸರನ್ನು ಸ್ಮರಿಸುತ್ತಾ, ಶಿವನ್ನು ಅವನಿಗೆ ಬುದ್ದಿಯನ್ನು ಕೊಡಲೆಂದು ಪ್ರಾರ್ಥಿಸುತ್ತಾರೆ. ಅವನಿಗೆ ಬುದ್ದಿ ಕೊಡದಿದ್ದರೆ ತನ್ನ ಶಿರವನ್ನೆ ತೆಗೆದುಕೊಳ್ಳುವೆನೆಂದು ನುಡಿಯುತ್ತಾರೆ,ಆಗ ಅಧರ್ಮಿ ತಪ್ಪೊಪ್ಪಿಕೊಂಡು ಧರ್ಮಿಷ್ಠನಾಗುತ್ತಾನೆ.

ಈ ಮೇಲಿನ ಕಾಯಕ ಜೀವಿಗಳು ದೈಹಿಕ–ಮಾನಸಿಕವಾಗಿ ತಮ್ಮದೇಹವನ್ನು ದಂಡಿಸಿ ಸಮಾಜದಲ್ಲಿನ ವ್ಯಕ್ತಿಗಳನ್ನು ಸನ್ಮಾರ್ಗದಲ್ಲಿ ನಡೆಸುತ್ತಿದ್ದರು ಎಂದು ತಿಳಿಯುತ್ತದೆ. ಕಾಯಕದಲ್ಲಿ ಇನ್ನು ಹಲವು ವಿಧಗಳಿವೆ ಅವುಗಳು–ಮಡಿವಾಳ ಕಾಯಕ, ಹೂ ಪತ್ರೆ ಕಾಯಕ, ಕನ್ನಡಿ ಕಾಯಕ, ಹಡಪದ ಕಾಯಕ, ಸತ್ತಿಗೆ ಕಾಯಕ, ಅರವಟ್ಟಿಗೆ ಕಾಯಕ, ವೈದ್ಯ ಕಾಯಕ, ನೂಲಿನ ಕಾಯಕ , ಕೃಷಿ ಕಾಯಕ, ಗ್ರಂಥ ಭಂಡಾರಿ ಕಾಯಕ, ಶಿವಾನುಭವ ಕಾಯಕ, ನಗೆಸುವ ಕಾಯಕ, ಹೀಗೆ ಕಾಯಕದಲ್ಲಿ ಹಲವು ವಿಧಗಳನ್ನು ಕಾಣುತ್ತೇವೆ.

**ದಾಸೋಹ**

ದಾಸೋಹ ಎಂದರೆ ನಾನು ದಾಸನಾಗಿದ್ದೇನೆ ಎಂದು ಅರ್ಥ. ಅಂದರೆ ವ್ಯಕ್ತಿ ತಾನೂ ದೇವರ ದಾಸ, ಸಮಾಜದ ದಾಸ ಎಂದು ಭಾವಿಸುವದೇ ದಾಸೋಹ ಶಬ್ದದ ಅರ್ಥ. ತಾನು ಕಾಯಕ ಮಾಡಿ ದುಡಿದು ಧರ್ಮಬದ್ಧವಾಗಿ ಪಡೆದ ಪ್ರತಿಫಲವನ್ನು ಸಮಾಜಕ್ಕೆಲ್ಲ ಹಂಚಿ ಅದರ ಸವಿಯನ್ನು ಸವಿಯುವುದೆ "ದಾಸೋಹ" ಎನ್ನುತ್ತಾರೆ.

ಅಲ್ಲಮನ ವಚನದಲ್ಲಿ "ಸೋಹಂ ಎಂದದೇನು, ದಾಸೋಹಂ ಎನ್ನದನ್ನಕ್ಕ" ಎಂಬ ಮಾತೊಂದಿದೆ. ನಾನು ಅದೇ ಆ ದೇವರೆ ಆಗಿದ್ದೇನೆ (ಸಃ+ಅಹಂ) ಎಂದರೆ ಅದರರ್ಥ(ದಾಸಃ+ಅಹಂ) ನಾನು ಸಮಾಜದ ಸೇವಕ, ದೇವರ ಸೇವಕ ಆಗದಿದ್ದರೆ ಪ್ರಯೋಜನವಾದರೂ ಏನು? ದಾಸೋಹವನ್ನು ಕುರಿತು ಈ ರೀತಿಯಾಗಿ ಹೇಳುತ್ತಾರೆ.

**ತಾನಿಲ್ಲದೆ ಮಾಡುವುದು ಕಾಯಕವಾಗಿ ಅಹಂಕಾರವ ಕೆಡಿಸಿತ್ತು, ತಾನಿಲ್ಲದೆ ಮಾಡುವುದು ದಾಸೋಹವಾಗಿ ಅಹಂಕಾರವ ಬಿಡಿಸಿತ್ತು, ತಾನಿಲ್ಲದೆ ಭಕ್ತಿಯಿಂದ ಪಡೆವುದು ಸಹಜ ಪ್ರಸಾದವಾಗಿ ಪರಿಣಮಿಸಿತ್ತು**

ಇಲ್ಲಿ ಮಾಡುವುದು, ನೀಡುವುದು ಹಾಗೂ ಪಡೆವುದು ಇವುಗಳ ಭಾವನೆಗಳು ಪ್ರಮುಖವಾಗುತ್ತವೆ. 'ತಾನೆಂಬ' ಅಹಂಕಾರವನ್ನು ತೊಡೆದು ಹಾಕಿ ಶಿವಭಾವನೆಯಿಂದ ಮಾಡಿದುದೆ ಕಾಯಕವಾಗುತ್ತದೆ. ನೀಡುವುದು ಅಥವಾ ಕೊಡುವದು ದಾಸೋಹವಾಗುತ್ತದೆ. ಪಡೆಯುವುದು ಪ್ರಸಾದವಾಗುತ್ತದೆ. ಕೊಡುವ ಬುದ್ಧಿ ಮಾನವರಲ್ಲಿ ಅಂತರಾತ್ಮದಿಂದ ಬೆಳೆದು ಬರಬೇಕು. ಅವನಲ್ಲಿ ಕಲ್ಯಾಣ ಗುಣಗಳು ಸಹಜವಾಗಿ ಬೆಳೆಯಬೇಕು.ಇಂತಹ ಮನೋಭಾವಗಳಿಂದ ದಾಸೋಹ ಉಗಮವಾಗಲು ಕಾರಣವಾಯಿತೆಂದು ಹೇಳಬಹುದು. ಈ ಧರ್ಮದಲ್ಲಿ ದಾಸೋಹ ಹೇಗೆ ಹುಟ್ಟಿಕೊಂಡಿತೆಂದು ಇತಿಹಾಸಕಾರರಲ್ಲಿ ಸ್ಪಷ್ಟವಾದ ದಾಖಲೆಗಳಿಲ್ಲ. ಕಾಲಾನುಕ್ರಮದಲ್ಲಿ ಮಾನವೀಯ ವೌಲ್ಯಗಳಿಂದ ದಾಸೋಹ ಬೆಳೆದಿರಬೇಕೆಂದು ತಿಳಿದುಬರುತ್ತದೆ. ಇಲ್ಲಿ ದಾಸೋಹ ಎಂದರೆ ತನು ಮನ ಶುದ್ಧರಾಗಿ ಗಳಿಸಿದ ಸಂಪತ್ತನ್ನು ದೀನರ, ಬಡವರ; ಅಬಲರ, ಹಿಂದುಳಿದವರ, ಉದ್ಧಾರಕ್ಕಾಗಿ ಬಳಸಿದರೆ ಅದು ದಾಸೋಹ ಎನಿಸಿಕೊಳ್ಳುತ್ತದೆ. ಅನುಕೂಲಸ್ಥರು ಇಲ್ಲದವರಿಗೆ ಅನ್ನ ಆಶ್ರಯಗಳನ್ನು ನೀಡಿ ಅವರ ನೋವಿಗೆ ಸ್ಪಂದಿಸುವುದೇ ದಾಸೋಹ ವ್ಯವಸ್ಥೆಯಾಗುತ್ತದೆ.

**ಶರಣರ ಪ್ರಕಾರ ದಾಸೋಹ**

೧. ಚನ್ನಬಸವಣ್ಣನವರು: ದಾಸೋಹ ಮಾಡುವ ಪರಮ ಸದ್ಭಕ್ತನ ತನು ಶುದ್ಧ,ಮನ ಶುದ್ಧ,ನಡೆ ಶುದ್ಧ, ನುಡಿ ಎಲ್ಲ ಪಾವನವು.

೨. ಸಿದ್ಧರಾಮ: ನಮ್ಮ ಕಪಿಲ ಸಿದ್ಧಮಲ್ಲನ ನೋಡುವಡೆ ದಾಸೋಹವೇ ಬೇಕು.

೩. ಮಡಿವಾಳ ಮಾಚಯ್ಯ: ದಾಸೋಹ ಮಾಡುವದೆ ಶಿವಾಚಾರ.

೪. ಶಿವಲೆಂಕ ಮಂಚಣ್ಣ: ಕಾಯಕವೆಂದು ಕಾಯವ ಬಳಲಿಸದೆ, ತನು ಕರಗದೆ, ಮನ ನೋಯದೆ, ಕಾಡಿ ಬೇಡಿ ಮಾಡುವುದು ದಾಸೋಹವೇ?

೫. ಮೇದಾರ ಕೇತಯ್ಯ: ಕೇತನ ದಾಸೋಹ ಒರೆಗೆ ಹಚ್ಚುವರಾರು, ಹರ ಸೋತು ಶರಣನಾದ.

೬. ಬಹುರೂಪಿ ಚೌಡಯ್ಯ: ಕುಣಿಯುವುದೆ ಕಾಯಕವು, ತಣಿಯುವುದೆ ದಾಸೋಹವು ತಣಿದ ಜಂಗಮ ಶಿವಕೋಟಿ!

ದಾಸೋಹದ ಪ್ರಕಾರಗಳು ಅಂತರಂಗ ದಾಸೋಹ, ಬಹಿರಂಗ ದಾಸೋಹ, ಗುರು ದಾಸೋಹ, ಲಿಂಗ ದಾಸೋಹ, ಜಂಗಮ ದಾಸೋಹ, ಅನ್ನದಾಸೋಹ, ಜ್ಞಾನ ದಾಸೋಹ, ಅನುಭಾವ ದಾಸೋಹ, ಅಧ್ಯಾತ್ಮ ದಾಸೋಹ, ಸೋಪಾಧಿಕ ದಾಸೋಹ, ನಿರುಪಾಧಿಕ ದಾಸೋಹ, ಸಾಹಿತ್ಯ ದಾಸೋಹ, ಅಷ್ಟಾವರಣ ದಾಸೋಹಗಳು, ಷಟಸ್ಥಲ ದಾಸೋಹಗಳು, ಭಕ್ತಿ ದಾಸೋಹ, ಮಮಕಾರ ದಾಸೋಹ, ಸಹಜ ದಾಸೋಹ, ಆರೂಢ ದಾಸೋಹ ಈ ರೀತಿಯಾಗಿ ದಾಸೋಹದಲ್ಲಿ ಹಲವು ವಿಧಗಳಿವೆ.

**ಸೋಹಂ–ಶಿವೋಹಂ–ದಾಸೋಹಂ**

**ಸೋಹಂ ಎಂಬುದು ಅಂತರಂಗದ ಮದ ನೋಡಯ್ಯ**
**ಶಿವೋಹಂ ಎಂಬುದು ಬಹಿರಂಗದ ಮದ ನೋಡಯ್ಯ**
**ಈ ದ್ವಂದ್ವವನಳಿದು ದಾಸೋಹಂ ಎಂದೆನಿಸಯ್ಯ**
**ಕಪಿಲಸಿದ್ಧ ಮಲ್ಲಿಕಾರ್ಜುನಯ್ಯ**

ಸೋಹಂ–ನಾನೇ ಅವನು ಎನ್ನುವಲ್ಲಿ ಒಂದು ತರದ ಮದವಿದೆ. ಶಿವೋಹಂ–ನಾನೇ ಶಿವನು ಎನ್ನುವಲ್ಲಿ ಸಹ ಒಂದು ಬಗೆಯ ಹಮ್ಮು ಇದೆ. ಜೀವ ಶಿವನಾಗುವದು ತಪ್ಪಲ್ಲ, ಅದುವೆ ಮಾನವನ ಮಹೋದ್ದೇಶ. ಕಾಯಿ ಕಸುಕಾಗಿರುವಾಗ ಅದನ್ನು ಹಣ್ಣೆಂದು ಕರೆಯುವದು ಹೇಗೆ? ಪಕ್ವತೆ ಬಾರದೆ ಹಣ್ಣಾಗುವುದೆಂತು? ಶಿವನಾಗುವ ಮೊದಲೆ ಶಿವೋಹಂ ಎನ್ನುವದು ಹೇಗೆ? ಹಾಗೆನ್ನುವದು ಅಹಮಿಕೆಯ ಲಕ್ಷಣ. ಅಹಮಿಕೆಯೆಂಬುದು ಮನೋವಿಕಾರ.ಈ ವಿಕಾರವಿರುವೆಡೆಯಲ್ಲಿ ನಿರ್ವಿಕಾರ ನಿರಂಜನರೂಪಿ ಶಿವನು ಸುಳಿಯಲಾರ, ಈ ಸೋಹಂ ಶಿವೋಹಂ ದ್ವಂದ್ವವಳಿದಾಗ ದಾಸೋಹಂ ಭಾವ ಅಂಕುರಿಸುವದು. ದಾಸೋಹಂ ಭಾವ ಪಕ್ವಗೊಂಡಾಗ ಶಿವೋಹಂ ಭಾವ ತಾನಾಗಿ ಬೆಳಗುವದು, ಶಿವನಾದಾಗ ಶಿವೋಹಂ ಎಂದು ಹೇಳಿಕೊಳ್ಳುವದಿಲ್ಲ, ಆಗದವನು ಹೇಳಿಕೊಳ್ಳುತ್ತಾನೆ, ಆದವನು ಮೌನಿಯಾಗಿರುತ್ತಾನೆ. ಹಾಗಾದರೆ ಈ ದಾಸೋಹವೆಂದರೇನು? ಒಂದೇ ಮಾತಿನಲ್ಲಿ ಹೇಳುವಷ್ಟು ಸುಲಭವಲ್ಲ. ಇಲ್ಲಿ ದಾಸನೆಂದರೆ ಏನೊಂದರಿಯದ ಏನೊಂದನ್ನು ಆಚರಿಸಲು ಬಾರದ, ಯಾವ ಅನುಭವವಿಲ್ಲದ ಸೇವಕ ಅಥವಾ ಆಳು ಎಂದರ್ಥವಲ್ಲ. ಸನ್ನಿತ ಸಂಬಂಧವುಳ್ಳವನೆಂದರ್ಥ. ಶಿವನೇ ತಾನಾಗಿದ್ದು ತನ್ನ ಉಪಾಸನೆಯಲ್ಲಿ ತಾನೇ ನಿರತನಾಗಿರುವವನು ಎಂದು ಹೇಳಬಹುದು.

**ದಾಸೋಹ ಮತ್ತು ದಾಸೋಹಿ :** ಕಾಯಕ ಮತ್ತು ದಾಸೋಹಗಳು ಅರ್ಥಶಾಸ್ತ್ರವೆಂಬ ನಾಣ್ಯದ ಎರಡು ಮೈಗಳು. ಒಂದು ಬಿಟ್ಟು ಇನ್ನೊಂದಿಲ್ಲ. ಒಂದನ್ನು ಬಿಟ್ಟರೆ ಇನ್ನೊಂದಕ್ಕೆ ಬೆಲೆಯಿಲ್ಲ. ದಾಸಃ+ಅಹಂ=ನಾನು ಸೇವಕ ಎಂಬುದು ದಾಸೋಹ. ನಾನು ಯಾರ ಸೇವಕ ? ಎಂಬ ಪ್ರಶ್ನೆ ಬಂದಾಗ ಸಮಾಜದ ಸೇವಕ. ಸಮಾಜದ ಸೇವೆ ಎಂದರೆ ವ್ಯಕ್ತಿಯ ಸೇವೆಯಲ್ಲ, ಸಮಷ್ಟಿಯ ಸೇವೆ. ಕಾಗೆ ಒಂದು ಅಗುಳ ಕಂಡರೆ ತನ್ನ ಬಳಗವನ್ನು ಕರೆದುಕೊಂಡು ತಿನ್ನುತ್ತದೆ. ಕೋಳಿ ಒಂದು ಗುಟುಕು ಕಂಡರೆ ತನ್ನ ಕುಲಬಾಂಧವರನ್ನೆಲ್ಲ ಕರೆದುಣ್ಣುತ್ತದೆ. ಸಮಾಜ ಸೇವಕನ ಕಾರ್ಯ ಸಹ ಕಾಗೆ ಕೋಳಿಗಳಿಗಿಂತ ಕನಿಷ್ಟವಾಗಬಾರದು, ಉತ್ಕೃಷ್ಟವಾಗಬೇಕು. ದಾಸೋಹಿಯಾದವನು ಶಾಂತನಾಗಿರಬೇಕು, ಸತ್ಯನಿಷ್ಠನಾಗಿರಬೇಕು. ಸಕಲ ಇಂದ್ರಿಯಗಳನ್ನು ಅಧೀನದಲ್ಲಿಟ್ಟುಕೊಳ್ಳಬೇಕು. ಆತ್ಮ ಸಂಯಮಿಯಾಗಿರಬೇಕು, ಸಕಲರನ್ನು ಸಮಭಾವದಿಂದ ಕಾಣಬೇಕು, ಭ್ರಷ್ಟಾಚಾರ, ವ್ಯಭಿಚಾರಗಳಿಂದ ದೂರಿರಬೇಕು. ಧನವ ಶರಣಗಣಕ್ಕೆ ಸಮಾಜ ಹಿತಕ್ಕೆ ಸವೆಸಬೇಕು, ಪರಧನ, ಪರಸತಿ ಒಲ್ಲೆನೆಂಬ ಛಲದವನಾಗಿರಬೇಕು, ಮೃದುವಚನಗಳು ಅವನ ಉಸಿರಾಗಿರಬೇಕು, ಕೋಪ, ಮೋಹ, ಮದ, ಮತ್ಸರ, ವಿರಹಿತನಾಗಿರಬೇಕು. ಒಟ್ಟಿನಲ್ಲಿ ದಾಸೋಹಿ ಸಕಲ ಜೀವಾತ್ಮರ ಲೇಸ ಬಯಸಬೇಕು.

**ಗ್ರಂಥ ಋಣ**


೧. ಪ್ರಸಾದ ಪತ್ರಿಕೆ (ಲೇ–ಕಾಯಕವೇ ಕೈಲಾಸ) ಮಾರ್ಚ–ಎಪ್ರಿಲ್ ೧೯೮೭

೨. ಡಾ. ಜ. ಚ. ನಿ. 'ಸಂಪಾದನೆಯ ಸೊಂಪು' 'ಕಾಯಕ ಸಂಪುಟ'–೧೯೭೭

೩. ಡಾ. ಎಂ. ಎಂ. ಕಲಬುರ್ಗಿ 'ಶಿವಶರಣರ ಕಾಯಕ ಸಿದ್ಧಾಂತ' ೧೯೮೫

೪. ಡಾ. ಬಿ. ಆರ್. ಹಿರೇಮಠ 'ಸಂಕೀರ್ಣ ವಚನ ಸಂಪುಟ' ೨೦೦೧

೫. ಡಾ. ಎನ್. ಜಿ. ಮಹಾದೇವಪ್ಪ 'ವಚನಗಳಲ್ಲಿ ಪ್ರಸಾದದ ಪರಿಕಲ್ಪನೆ' ೧೯೯೪


■■